ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ - 560 376



ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2018-19

"ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ"

(ವಿಶ್ಲೇಷಣಾತ್ಮಕ ಅಧ್ಯಯನ)

ಸಂಶೋಧನಾ ವಿದ್ಯಾರ್ಥಿ
ಪುಷ್ಪ. ಎಂ
ನೋಂದಣಿ ಸಂಖ್ಯೆ : 182001030037

ಮಾರ್ಗದರ್ಶಕರು

ಡಾ. ಶೀಲಾದೇವಿ ಎಸ್. ಮಳೀಮಠ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಬಿ.ಎಂ.ಎಸ್. ಮಹಿಳಾ ವಿದ್ಯಾಲಯ
ಬಸವನಗುಡಿ, ಬೆಂಗಳೂರು - 560004

ಮಾನ್ಯತಾ ಸಂಸ್ಥೆ:
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾ ಕೇಂದ್ರ
ಪಂಪ ಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು - 560018.





ಕನ್ನಡ ವಿಶ್ವವಿದ್ಯಾಲಯ ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ವಿದ್ಯಾರಣ್ಯ - 560 376



ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2018-19

"ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ"

(ವಿಶ್ಲೇಷಣಾತ್ಮಕ ಅಧ್ಯಯನ)

ಸಂಶೋಧನಾ ವಿದ್ಯಾರ್ಥಿ

ಪುಷ್ಪ. ಎಂ

ನೋಂದಣಿ ಸಂಖ್ಯೆ : 182001030037


ಮಾರ್ಗದರ್ಶಕರು

ಡಾ. ಶೀಲಾದೇವಿ ಎಸ್. ಮಳೀಮಠ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಬಿ.ಎಂ.ಎಸ್. ಮಹಿಳಾ ವಿದ್ಯಾಲಯ

ಬಸವನಗುಡಿ, ಬೆಂಗಳೂರು - 560004



ಮಾನ್ಯತಾ ಸಂಸ್ಥೆ:

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಂಶೋಧನಾ ಕೇಂದ್ರ

ಪಂಪ ಮಹಾಕವಿ ರಸ್ತೆ,

ಚಾಮರಾಜಪೇಟೆ, ಬೆಂಗಳೂರು - 560018.





ಸಂಶೋಧನಾ ವಿದ್ಯಾರ್ಥಿಯ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಂಶೋಧನೆ ನಡೆಸಿ "ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ. ಶೀಲಾದೇವಿ ಎಸ್. ಮಳೀಮಠರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ನಿಬಂಧವನ್ನು ಈ ಮೊದಲು ಭಾಗಶಃ ಆಗಲಿ ಪೂರ್ಣವಾಗಿ ಆಗಲಿ ಬೇರೆ ಯಾವುದೇ ಪದವಿ ಹಾಗೂ ಇನ್ನಿತರ ಸ್ವಂತ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಈ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಈ ಮೂಲಕ ಸಲ್ಲಿಸುತ್ತಿದ್ದೇನೆ.

ಸ್ಥಳ: ಬೆಂಗಳೂರು
ದಿನಾಂಕ: 29/7/2019

ಸಂಶೋಧಕರು,
(ಪುಷ್ಪ ಎಂ)

ಪುಷ್ಪ ಎಂ
ಎಂ.ಫಿಲ್ ವಿದ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾಲಯ

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಪುಷ್ಪ. ಎಂ. ಅವರು, ಎಂ.ಫಿಲ್. ಪದವಿಗಾಗಿ ಬರೆದು ಸಿದ್ಧಪಡಿಸಿರುವ "ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ" ಎಂಬ ಸಂಪ್ರಬಂಧವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧ ವಿಷಯವನ್ನು ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ: 29-07-2019.

ಶೀಲಾ ಮಳೀಮಠ

(ಡಾ. ಶೀಲಾದೇವಿ ಎಸ್ ಮಳೀಮಠ)

ಶೀಲಾ ಮಳೀಮಠ

ಮಾರ್ಗದರ್ಶಕರು

ಡಾ. ಶೀಲಾದೇವಿ ಎಸ್. ಮಳೀಮಠ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ,
ಬಿಎಂಎಸ್ ಮಹಿಳಾ ವಿದ್ಯಾಲಯ,
ಬಸವನಗುಡಿ, ಬೆಂಗಳೂರು – 560004.

ಕೃತಜ್ಞತೆಗಳು

"ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ" ಎಂಬ ವಿಷಯವು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಗಾಗಿ ಅರ್ಪಿಸಿದ ಸಂಶೋಧನಾ ನಿಬಂಧವಾಗಿದೆ. ಈ ವಿಷಯಕ್ಕೆ ಆತ್ಮೀಯವಾಗಿ ಸ್ಪಂಧಿಸಿ ನನ್ನ ತಪ್ಪುಗಳನ್ನು ಮಾರ್ಗದರ್ಶನದುದ್ದಕ್ಕೂ ತಿದ್ದಿ-ತೀಡಿ ಸೂಕ್ತ ಸಲಹೆಗಳನ್ನು ನೀಡಿ ಉತ್ತಮ ಮಾರ್ಗದರ್ಶನವನ್ನು ಮಾಡಿದ ಶ್ರೀಮತಿ ಡಾ. ಶೀಲಾದೇವಿ ಎಸ್. ಮಳೀಮಠ ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಬಿ.ಎಂ.ಎಸ್. ಮಹಿಳಾ ವಿದ್ಯಾಲಯ, ಬಸವನಗುಡಿ, ಬೆಂಗಳೂರು ಇವರಿಗೆ ಅನಂತ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸದಾ ನನ್ನ ಏಳಿಗೆಯನ್ನೇ ಬಯಸುವ ಹಾಗೂ ನನ್ನ ಜೀವನದ ಬಾಳಸಂಗಾತಿಯಾದ ಶ್ರೀ ಸತೀಶ್ ಎ.ವಿ. ರವರಿಗೂ ಹಾಗೂ ನನ್ನ ಪ್ರೀತಿಯ ಮಗಳಾದ ಮನಸ್ವಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಧ್ಯಯನಕ್ಕೆ ಸಂಬಂಧಿಸಿದ ಪ್ರಶ್ನಾವಳಿಗೆ ಉತ್ತರ ನೀಡಲು ಸಹಕರಿಸಿದ ಕನ್ನಡ ಸಾಹಿತ್ಯದ ಹಿರಿಯ ವಿದ್ವಾಂಸರಾದ ಡಾ.ಪಿ.ನಾರಾಯಣರವರಿಗೆ, ವಿಜಯ ವಿಭಜಿತ ಪದವಿ ಪೂರ್ವ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಎಲ್. ಶ್ರೀನಿವಾಸಮೂರ್ತಿ ರವರಿಗೂ, ಮತ್ತು ಈ ಅಧ್ಯಯನಕ್ಕೆ ಪರೋಕ್ಷವಾಗಿ ಸಹಾಯ ಮಾಡಿದ ಡಾ. ಬಿ.ಸಿ.ರಾಜಕುಮಾರ ಸಹಪ್ರಾಧ್ಯಪಕರು, ಕನ್ನಡ ವಿಭಾಗ, ವಿಜಯ ಪದವಿ ಕಾಲೇಜು ಇವರಿಗೂ ಸಹ ನನ್ನ ಕೃತಜ್ಞತೆಗಳು.

ಜೊತೆಗೆ ಸದಾ ನನ್ನ ಒಳಿತನ್ನೇ ಬಯಸುವ ನನ್ನ ತಂದೆ – ತಾಯಿ, ತಮ್ಮ- ನಾದನಿ, ತಂಗಿ-ಮೈದನ, ರವರಿಗೂ ನಾನು ಚಿರುಋಣಿಯಾಗಿದ್ದೇನೆ.

ಅಧ್ಯಯನ ಸಂದರ್ಭದಲ್ಲಿ ಮಾಡಿದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದ ನನ್ನ ಎಲ್ಲಾ ಸಹದ್ಯೋಗಿ ಮಿತ್ರರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ.

ಈ ಸಂಪ್ರಬಂಧ ಅಂದವಾಗಿ ಅಕ್ಷರ ರೂಪದಲ್ಲಿ ಹೊರಬರಲು ಕಾರಣರಾದ ಶ್ರೀಮತಿ ಜಾಹ್ನವಿ ಕೆ.ಎಸ್. ರವರಿಗೂ ಕೃತ್ನಜ್ಞತೆಗಳನ್ನು ಅರ್ಪಿಸುತ್ತೇನೆ.

ಸ್ಥಳ: ಬೆಂಗಳೂರು
ದಿನಾಂಕ:

ಪುಷ್ಪ ಎಂ.

ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ
(ವಿಶ್ಲೇಷಣಾತ್ಮಾಕ ಅಧ್ಯಯನ)

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ –೧

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ :–

[1]ವಚನನಾನುಭವವ ಮಾಡುವಯ್ಯಗಳಿರಾ,
ನಿಮಗೆ ವಚನ ಪ್ರಾಣಲಿಂಗವೊ? ಅಲ್ಲ, ದಾಸೋಹ ಪ್ರಾಣಲಿಂಗವೊ ?
ಆರೂಢವನೆ ಕಲಿತು ಅಂಗಸಂಗದಲಿಪ್ಪ
ಆರೂಢ ಪ್ರಾಣಲಿಂಗವೊ ? ಅಲ್ಲ, ದಾಸೋಹ ಪ್ರಾಣಲಿಂಗವೊ ?
ಬ್ರಹ್ಮ ವಿದ್ಯೆಯೆನೆ ಕಲಿತು ಭ್ರಮೆಯೆಂಬ ಶೂಲದ ಮೇಲೆ ಕುಳ್ಳಿರ್ದು,
ಆ ಬ್ರಹ್ಮ ವಿದ್ಯೆಯೆ ಪ್ರಾಣಲಿಂಗವೊ ? ಅಲ್ಲ, ದಾಸೋಹ ಪ್ರಾಣಲಿಂಗವೊ ?
ಎಲ್ಲ ಮಾತುಗಳ ಹಲ್ಲಣಿಸಿಕೊಂಡು, ಬಲು ಹುಲಿಯ ಬೆನ್ನಲಿ ಬಪ್ಪತೆರನಂತೆ.
ಬಲ್ಲವರಿಗೆ ಬಲ್ಲವರು ನಮ್ಮ ಜಂಗಮದಾಸೋಹಿಗಳು.
ಕೂಡಲಸಂಗಮದೇವರರಿತಡೆ ನಿಮ್ಮ ಹಲ್ಲ ಕಳೆವ ಕಾಣೆ ! [1]

ಬಸವಣ್ಣ ಸ.ವ.ಸಂ –1, ವಚನ 1350, ಪುಟ–372

ವಚನಗಳಲ್ಲಿ ಮೂಢನಂಬಿಕೆಯ ಪ್ರತಿರೋಧವನ್ನು ವ್ಯಕ್ತಪಡಿಸುವ ವಚನಕಾರರು **"ಬ್ರಹ್ಮವಿದ್ಯೆ"** ಎನ್ನುವ ಪದಾರ್ಥದೊಂದಿಗೆ ಮೌಢ್ಯ – ಆಚರಣೆ ಗಳನ್ನು ತಿಳಿಸುತ್ತಲೇ ವಚನದಲ್ಲಿನ ನಂಬಿಕೆಗಳನ್ನು ತಿಳಿಸುತ್ತಾರೆ. ಆ ನಂಬಿಕೆಗಳು **"ವಚನ"**, **"ಪ್ರಾಣಲಿಂಗ"**, **"ದಾಸೋಹ"**, **"ಜಂಗಮ"**, **"ದಾಸೋಹಿ"** ಈ ನಂಬಿಕೆಗಳತ್ತ ಬೆಳಕು ಮೂಡಿಸಿರುವುದು ಈ ಅಧ್ಯಯನದ ವಿಷಯ ವಸ್ತುವಾಗಿದೆ.

ಹನ್ನೆರಡನೆಯ ಶತಮಾನದ ಸುಮಾರು 300 ವಚನಕಾರರು ಮತ್ತು ವಚನಕಾರ್ತಿಯರು ರಚನೆ ಮಾಡಿದ ಹತ್ತು ಸಾವಿರಕ್ಕೂ ಮಿಕ್ಕಿದ ರಚನೆಗಳು ಇಂದಿನ ದನಗಾಹಿ, ಕ್ಷೌರಿಕ, ವೇಶ್ಯೆ, ಗರತಿ, ಅವಿವಾಹಿತ, ವಿರಕ್ತ, ಒಕ್ಕಲಿಗ ಹೀಗೆ ಅಸಂಖ್ಯಾತ ವೃತ್ತಿ ಜನ ತಮ್ಮ ಅನುಭವದಿಂದ ಮಾಡಿದ ವಿಚಾರಗಳನ್ನು ಸಾಮಾಗ್ರಿಯನ್ನಾಗಿ ಮಾಡಿಕೊಂಡು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಚಿಂತನೆಗಳೊಂದಿಗೆ, ನಂಬಿಕೆ ಮತ್ತು ಮೂಢನಂಬಿಕೆಯನ್ನು ಒಂದೇ ಕಾಲಮಾನದಲ್ಲಿ ವ್ಯಕ್ತಮಾಡಿದ ವಚನಗಳು ಇಷ್ಟು ಪ್ರಮಾಣದಲ್ಲಿ ದೊರೆತಿದ್ದು ಬಹುಶಃ ವಿಶ್ವ ಸಾಹಿತ್ಯದಲ್ಲಿಯೇ ಅಪೂರ್ವವಾದ ದಾಖಲೆ ಎನ್ನಬಹುದು.

[2]ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು

ಎಲೆ ಹೋತೇ ಅಳು, ಕಂಡಾ !

ವೇದವನೋದಿದವರ ಮುಂದೆ ಅಳು, ಕಂಡಾ !

ಶಾಸ್ತ್ರ ಕೇಳಿದವರ ಮುಂದೆ ಅಳು, ಕಂಡಾ !

ನೀನತ್ತುದಕ್ಕೆ ತಕ್ಕುವ ಮಾಡುವ ಕೂಡಲಸಂಗಮದೇವ.[2]

ಬಸವಣ್ಣ ಸ.ವ.ಸಂ –1, ವಚನ 573, ಪುಟ–143

ಈ ವಚನದ ಮೂಲಕ ಮಾತು, ವೇದಶಾಸ್ತ್ರ ಇವುಗಳ ಮೂಢತೆಯನ್ನು ವಿವರಿಸುತ್ತಲೇ ನಂಬಿಕೆಗಳತ್ತ **"ನೀನತ್ತುದಕ್ಕೆ ತಕ್ಕುವ ಮಾಡುವ"** ಎನ್ನುವ ಆಲೋಚನೆಗಳನ್ನು ಮಾಡಿರುತ್ತಾರೆ.

ಈ ವಚನಗಳ ವೈಶಿಷ್ಟವಿರುವುದು ಅದರ ಸರಳತೆಯಲ್ಲಿ ಮತ್ತು ಸಹಜತೆಯಲ್ಲಿ. ಶರಣರು ಶ್ರೀಸಾಮಾನ್ಯರಾಡುವ ಆಡುಭಾಷೆಯಲ್ಲಿ, ಅವರು ದಿನನಿತ್ಯ ಬಳಸುವ ವಸ್ತುಗಳ, ಪ್ರಾಣಿ–ಪಕ್ಷಿಗಳ ಸೃಷ್ಟಿಯ ವಸ್ತುಗಳ ಉಪಮಾನ ಕೊಟ್ಟು ಮತ್ತೊಬ್ಬರ ಟೀಕೆಗಳಿಗೆ ಕೆಲವೊಮ್ಮೆ ಬೆಡಗುಗಳಿಂದ ಕೂಡಿ, ವಚನದ ಮೂಲಕ ಮೂಢನಂಬಿಕೆಯ ಪೀಠಿಕೆ ನೀಡಿದ್ದಾರೆ.

[3]ಮಾತಿಲ್ಲ ನುಡಿಯಿಲ್ಲ, ಏತಕ್ಕೆ ಮುನಿದರೆ ?

ಮಾತಾಡಿದಡೆ ಕೆಯ್ಯ ಬೆಳಸೆಂಬುದನರಿಯಿರೆ ಅಯ್ಯಾ ?

ಮಾತು ಕೆಟ್ಟಲ್ಲದೆ ತಾನಾಗಬಾರದು.

ಕೂಡಲಸಂಗಮದೇವಯ್ಯಾ

ಮಾತಿಂದ ಬರ್ಕು ಭವಭಾರಘೋರ.[3]

ಬಸವಣ್ಣ ಸ.ವ.ಸಂ –1, ವಚನ 925, ಪುಟ– 244

'ವಚನ' ಎಂಬುದರ ಸಾಮಾನ್ಯ ಅರ್ಥ ಮಾತು ಎಂಬುದಾದರೂ ಇದನ್ನು ಒಳಗೊಳ್ಳುವುದು ಮಾತಿನ ನಂಬಿಕೆ ಮತ್ತು ಮಾತಿನ ವೈಶಿಷ್ಟ್ಯ. **'ವಚನ ಕೊಡು'** ಎಂಬಲ್ಲಿನ ಈ ಪದ Committing one self Voluntarily ಎಂಬ ವಿಶಿಷ್ಟ ಅರ್ಥನೀಡುತ್ತದೆ. **ಮಾತು ಮತ್ತು ಆಚರಣೆ ಸಂಬಂಧ** ಶರಣರ ವಚನಗಳು ಈ ಅರ್ಥವನ್ನು ಹೊಂದಿರುತ್ತವೆ. ಅಂತೆಯೇ ವಚನಗಳಲ್ಲಿ ನಂಬಿಕೆ–ಮೂಢನಂಬಿಕೆಗಳು ಹಾಗೂ ಸಮಾಜ ವಿಕಾಸ ಕುರಿತಾದ ಮುಕ್ತಮನಸ್ಸು, ಮುಕ್ತವಿಚಾರ, ಮುಕ್ತ ಆಲೋಚನೆಗಳು, ಮುಕ್ತ ವೈಚಾರಿಕತೆಗಳು ಪ್ರಕಟವಾಗುತ್ತದೆ.

[4]ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ
ಮಾಡುವ ಸತ್ಕ್ರಿಯೆಯಿಂದ ಭಕ್ತ ನೆನಿಸಲು ಬಾರದು,
ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು,
ಲಿಂಗಮುಖದಲುದಯವಾದ ಶರಣಂಗಲ್ಲದೆ ಅಯ್ಯಾ,
ಕೂಡಲಸಂಗನ ಶರಣರ ಭಕ್ತಿಭಂಡಾರವು
ಎನಗೆಂತು ಸಾಧ್ಯವಪ್ಪುದು ? ಹೇಳೆನ್ನ ತಂದೆ.[4]

ಬಸವಣ್ಣ ಸ.ವ.ಸಂ –1, ವಚನ –319, ಪುಟ– 78

ಒಂದೊಂದು ಬಿಡಿ ವಚನವೂ ಸ್ವಯಂಪರಿಪೂರ್ಣವಾಗಿರುವುದು. ಒಂದು ಕಸುಬಿನ, ಕೋಮಿನ ಒಂದು ಸಾಮಾಜಿಕ ಅಂತಸ್ತಿನ ಒಂದು ತಾತ್ವಿಕ ನಿಲುವಿನ ಅಭಿವ್ಯಕ್ತಿಯನ್ನು ವಚನಗಳಲ್ಲಿ ಕಾಣಬಹುದು. ವಚನಗಳು ಸಂಸ್ಕೃತ ಭಾಷೆಯ ಯಜಮಾನಿಕೆಯನ್ನು ಧಿಕ್ಕರಿಸಿವೆ. ಸ್ಥಳೀಯ ಆಡುಭಾಷೆಯಲ್ಲಿ ವೈಚಾರಿಕತೆಯನ್ನು ಒದಗಿಸಿವೆ. ಕೆಲವೊಂದು ವಚನಗಳು ಬೌದ್ಧಿಕ ಚರ್ಚೆಯನ್ನು ರೂಪಕವಾದ ಭಾಷೆಯಲ್ಲಿ ನಡೆಸಿರುವುದರಿಂದ ಸಾರ್ವಕಾಲಿಕ ಪ್ರಸ್ತುತ ಎನಿಸಿವೆ. ಈ ಹಿನ್ನಲೆಯಲ್ಲಿ **ವಚನಗಳಲ್ಲಿ ಮೂಢನಂಬಿಕೆಯ ಪ್ರತಿರೋಧ** ಅಂಶಗಳನ್ನು ಶೋಧಿಸುವ ಪ್ರಯತ್ನ ಮಾಡಲಾಗಿದೆ.

<u>ಉದ್ದೇಶಗಳು :</u>

[4]ಹಸಿವು, ತೃಷೆ, ನಿದ್ರೆ, ವಿಷಯಂಗಳ ಮರೆದೆ,
ನೀವು ಕಾರಣ !
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳ ಮರೆದೆ,
ನೀವು ಕಾರಣ !
ಪಂಚೇಂದ್ರಿಯ, ಸಪ್ತಧಾತು, ಅಷ್ಟಮದಂಗಳ ಮರೆದೆ.
ನೀವು ಕಾರಣ !
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಅಪ್ಯಾಯನವಾದಡೆ
ಎನಗೆ ತೃಪ್ತಿಯಾಯಿತ್ತು [4]

ಬಸವಣ್ಣ ಸ.ವ.ಸಂ –1, ವಚನ 828, ಪುಟ–212

ವಚನ ಸಾಹಿತ್ಯದ ವಿಸ್ತಾರತೆಯನ್ನು ನಂಬಿಕೆಗಳ ಮೂಲಕ ವಿಸ್ತರಿಸಿಕೊಳ್ಳುವುದಕ್ಕಾಗಿ, ನಂಬಿಕೆಗಳು ಸಮಾಜದಲ್ಲಿ ಮೂಢನಂಬಿಕೆಗಳಾಗಿ ಬದಲಾವಣೆ ಹೊಂದಲು ಇರುವ ಕಾರಣಗಳನ್ನು ಹಾಗೂ 12ನೇ ಶತಮಾನದ ವಚನಕಾರರು ಮೂಢನಂಬಿಕೆಗಳ ಪ್ರತಿರೋಧವನ್ನು ನಿರ್ವಹಿಸಿದ ವೈಜ್ಞಾನಿಕ ನೆಲೆಗಳತ್ತ ಅಧ್ಯಯನಿಸುವ ಉದ್ದೇಶವಾಗಿದೆ.

ಈಗಾಗಲೇ ಅವಲೋಕಿಸಿದಂತಹ ಮೂಢನಂಬಿಕೆಗಳ ಬಗ್ಗೆ ಚಿಂತಿಸುತ್ತಲೇ ವಚನಕಾರರು ಮೂಢನಂಬಿಕೆಗಳನ್ನು ಹೋಗಲಾಡಿಸಲು ನಂಬಿಕೆಗಳತ್ತ ಮುಖ ಮಾಡುತ್ತಲೇ ತಮ್ಮ ಸ್ಪಷ್ಟ ಮತ್ತು ಸರಳ ವಚನಗಳಿಂದ ಮೂಢನಂಬಿಕೆಯನ್ನು ಜನಸಾಮಾನ್ಯರಿಗೆ ಅರ್ಥ ಮಾಡಿಸಿದ ರೀತಿಯನ್ನು ಈ ಅಧ್ಯಯನದಲ್ಲಿ ವಿಸ್ತರಿಸುವ ಉದ್ದೇಶ ಹೊಂದಿದೆ.

ಅಧ್ಯಯನದ ವಿಧಾನಗಳು:

ಈ ಅಧ್ಯಯನದಲ್ಲಿ **"ನಂಬಿಕೆಗಳು ಮತ್ತು ಮೂಢನಂಬಿಕೆಗಳು** ಎನ್ನುವ ಎರಡು ಜೀವನ ಪದ್ಧತಿಯೊಳಗಿನ ಮುಖಾಮುಖಿಯಾಗುವ ಅಂಶಗಳು ಸಮಾಜದಲ್ಲಿ ಬೇರೂರಿರುವುದರಿಂದ ವಿಶೇಷಣಾತ್ಮಕ ಅಧ್ಯಯನವು ಶೋಧನಾಂಶಗಳತ್ತ ದೃಷ್ಟಿ ಬೀಳಬಹುದೆಂದೆಂಬ ಸದಾಶಯದೊಂದಿಗೆ ಈ ಅಧ್ಯಯನಕ್ಕೆ **"ವಿಶ್ಲೇಷಣಾತ್ಮಕ ಸಂಶೋಧನಾ"** ವೈಧಾನಿಕತೆಯನ್ನು ಅನುಸರಿಸಿರುತ್ತೇನೆ.

ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

[a]ಜನಪದ ನಂಬಿಕೆಯು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಇದು ಕಾರ್ಯ – ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಹಾಗೂ ಭೂತ–ವರ್ತಮಾನ–ಭವಿಷ್ಯತ್ತಿನ ಸಂಗತಿಯನ್ನು ಒಳಗೊಂಡಿರುತ್ತದೆ. ಇದು ಆಯಾ ವ್ಯಕ್ತಿಯ ಧೋರಣೆ ಮತ್ತು ವಿಶ್ವಾಸಕ್ಕೆ ಸಂಬಂಧಸಿದ್ದಾಗಿದೆ. ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಅಥವಾ ಘಟಿಸುವಂತಹದ್ದನ್ನು ಮುನ್ನವೇ ತಡೆಯಲು ಬಳಸುವ ಒಂದು ಅನಿಶ್ಚಿತವಾದ ಪರಿಕಲ್ಪನೆ. ಜನಪದ ನಂಬಿಕೆಗಳಲ್ಲಿ ವೈಜ್ಞಾನಿಕ ಎನ್ನಬಹುದಾದ ನಂಬಿಕೆಗಳು ಇರುವಂತೆ ಅವೈಜ್ಞಾನಿಕ ನಂಬಿಕೆಗಳೂ ಇವೆ. ಹಾಗೆಯೆ ಅನುಪದ್ರವಿಯಾದ ಪಳೆಯುಳಿಕೆಯ ಹಾಗೂ ಅಪಕಲ್ಪನೆಯ ನಂಬಿಕೆಗಳೂ ಇವೆ. ಅವೈಜ್ಞಾನಿಕ ಹಾಗೂ ಅಪಕಲ್ಪನೆಯ ನಂಬಿಕೆಗಳನ್ನು ಮೂಢನಂಬಿಕೆಗಳೆಂದು ಕರೆಯಲಾಗುತ್ತದೆ.

ಶ್ರೀ ಸಾಮಾನ್ಯರ ನಂಬಿಕೆಗಳ ಮೇಲೆಯೆ ಆಚರಣೆ ಮತ್ತು ಸಂಪ್ರದಾಯಗಳು ರೂಪಗೊಂಡಿರುತ್ತವೆ. ಈ ನಂಬಿಕೆಗಳೇ ನಿಯಮಗಳಿಗೆ ಕಾರಣವಾಗುತ್ತವೆ. ಮೌಢ್ಯಚರಣೆಯ ವಿಧಿ–ನಿಷೇಧಗಳು ಅಧಿಕವಾಗುತ್ತ ಹೋದಂತೆ ಬದುಕು ಉಸಿರುಗಟ್ಟುವ ವಾತಾವರಣವಾಗಿ ಬಿಡುತ್ತದೆ.

[b] ಎಲ್ಲಾ ಸಂಪ್ರದಾಯಗಳು ಎಲ್ಲಾ ಆಚರಣೆಗಳು ಸಮಾಜಕ್ಕೆ ಮಾರಕ ಎಂದೇನಿಲ್ಲ ಆದರೆ ಇವುಗಳನ್ನೂ ಜೀವಂತವಾಗಿಡಲು ನಂಬಿಕೆಗಳೇ ಕಾರಣವಾಗಿವೆ. ನಂಬಿಕೆಗಳಲ್ಲಿ ಭಿನ್ನ ವಿಧಗಳಿದ್ದಂತೆ. ಆಚರಣೆ ಮತ್ತು ಸಂಪ್ರದಾಯಗಳಲ್ಲಿಯೂ ಇವೆ. ಆಚರಣೆ ಅಥವಾ ಸಂಪ್ರದಾಯದಲ್ಲಿ ಕೆಲವು ವೈಜ್ಞಾನಿಕವಾಗಿದ್ದರೆ ಇನ್ನು ಕೆಲವಷ್ಟು ಅವೈಜ್ಞಾನಿಕವಾಗಿಯೂ ಬಳಕೆಯಲ್ಲಿವೆ. ಮೌಢ್ಯದ ಸಂಪ್ರದಾಯ–ಆಚರಣೆಗಳು ಅವೈಜ್ಞಾನಿಕ ಹಾಗೂ ಅನಾರೋಗ್ಯಕರವಾಗಿವೆ–ಅಪಾಯಕರವಾಗಿವೆ. ಇಂಥವುಗಳ

ಮುಂದುವರಿಕೆಯಾಗಿಯೇ ಜ್ಯೋತಿಷ್ಯ, ಜಾತಕ, ವಾಸ್ತು, ಮಾಟ-ಮಂತ್ರ, ಮೋಡಿ, ಭಾನುಮತಿ, ವಶೀಕರಣ, ಮುಂತಾದವು ಬಂದವುಗಳಾಗಿದ್ದು, ದೇವರು ಧರ್ಮದೊಂದಿಗೆ ಸಂಬಂಧವನ್ನು ಸಾಧಿಸಿವೆ.[b] ಮಾಂತ್ರಿಕ ಶಕ್ತಿಯನ್ನು ಅವಲಂಬಿಸಿ ಬಂದ ಆಚರಣೆಯ ಪರಿಕಲ್ಪನೆಗಳು ಜನರನ್ನು ಹಿಂಸಿಸುವ, ಆಸ್ತಿಪಾಸ್ತಿಯನ್ನು ನಾಶ ಅಥವಾ ಹಾನಿಗೊಳಿಸುವ ಪ್ರಕ್ರಿಯೆಯನ್ನು ಹೊಂದಿರುತ್ತವೆ. ಇವು ಹಿಂಸಾ ಮಾರ್ಗದವೂ ಹೌದು. ರಹಸ್ಯ ಮಾರ್ಗದವೂ ಹೌದು. ಇಲ್ಲಿ ಸ್ವ ಅಭಿಲಾಷೆ, ಸೇಡು, ಪ್ರತಿಸೇಡುಗಳಂಥವೇ ಹಿಂದೆ ನಿಂತು ಕೆಲಸ ಮಾಡಿಸುತ್ತವೆ. ಎದುರಾಳಿಯನ್ನು ನಿಷ್ಕ್ರಿಯ ಹಾಗೂ ದುರ್ಬಲಗೊಳಿಸಿ ನಿಶ್ಯಕ್ತರನ್ನಾಗಿಸಿ ಗೆಲ್ಲುವಂಥವುಗಳಾಗಿದ್ದು, ಮಾರಣಾಂತಿಕವೂ ಆಗಿರುತ್ತವೆ. ಮೌಢ್ಯಚರಣೆಯ ಆತ್ಯಂತಿಕ ಸ್ಥಿತಿಯು ಹೌದು.

ವಚನಗಳ ಸ್ವರೂಪ

12ನೇ ಶತಮಾನದ ವಚನಕಾರರು ಮೂಢನಂಬಿಕೆಯ ಕಟ್ಟಕಡೆಯ ನಂಬಿಕೆಯೇ ಆಗಿ ಬಿಟ್ಟಿರುವ ಮಾಟ, ಮಂತ್ರ, ಪೂಜೆ, ಪ್ರಾರ್ಥನೆ, ಮಾಂತ್ರಿಕ ವಿಧ್ಯೆ, ಪವಾಡ, ಕಟ್ಟಳೆ, ಸಂಪ್ರದಾಯ, ಪುರಾಣ, ಭವಿಷ್ಯ, ಚಿಕಿತ್ಸೆ, ಮೋಡಿತನ, ಅಚ್ಚಮುತ್ತೈದೆ, ಸ್ವಪ್ನ, ದೆವ್ವ, ಭೂತ, ಬ್ರಹ್ಮ, ಪಿಶಾಚಿ, ಮೋಹಿನಿ, ಇತ್ಯಾದಿಗಳ ವಿಕಾರಗಳನ್ನು ಸಕ್ರಮ ಮಾಡುವುದರ ಬಗ್ಗೆ ವಚನಗಳಲ್ಲಿ ಅನೇಕ ಪುಟಗಳನ್ನು ತೆರೆದಿಡುವುದರ ಸ್ವರೂಪವನ್ನು ಈ ಅಧ್ಯಯನ ಹೊಂದಿದೆ.

[6]ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯಾ,
ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ ?
ಹಿಂದಣ ಜನ್ಮದ ಚಿಹ್ನೆ ಬಿಡದನ್ನಕ್ಕ
ನಿಮ್ಮ ಪೂಜಿಸಿ ಏವೆನಯ್ಯಾ ?
ಎನ್ನ ಮನದ ಅವಗುಣದ ಕಳೆದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಲಸಂಗಮದೇವಾ.[6]

ಬಸವಣ್ಣ ಸ.ವ.ಸಂ -1, ವಚನ ಸಂಖ್ಯೆ -260, ಪುಟ -65



ಜನರಿಗೆ **ಮಾಂತ್ರಿಕ ವಿದ್ಯೆ, ಪವಾಡ, ಕಟ್ಟಳೆ, ಸಂಪ್ರದಾಯ, ಪುರಾಣ, ಚಿಕಿತ್ಸೆಯ** ಬಗೆಗಿರುವ ದೃಢವಾದ ನಂಬಿಕೆ, ಅತಿಯಾದ ಜೀವಭಯ, ಮೃತ್ಯುಭಯ ಹಾಗೂ ಮಾನಸಿಕ ಭಾವನೆಗಳು ಮಾಟ, ಮಂತ್ರದಂತಹ ಪ್ರಕ್ರಿಯೆಗಳ ಯಶಸ್ಸಿಗೆ ಕಾರಣವಾಗಿವೆ. ವ್ಯಕ್ತಿ ತನ್ನ ಮೇಲೆ ಮಾಟ, ಮಂತ್ರದ ಪ್ರಯೋಗವಾಗಿದೆಯೆಂದು ಭ್ರಮೆ, ಉದ್ವೇಗಕ್ಕೆ ಒಳಗಾಗಿ ಊಟ ನಿದ್ರೆ ತೊರೆದು ಅನಾರೋಗ್ಯಕ್ಕೆ ತುತ್ತಾಗುವ ಅನೇಕ ವಚನಗಳನ್ನು **ಮೋಡಿತನ, ಅಚ್ಚಮುತ್ತೈದೆ, ಸ್ವಪ್ನ, ದೆವ್ವ, ಭೂತ, ಶಕ್ತಿಗಳಿಂದ ಉಂಟಾಗುವ ಭಯ, ಭ್ರಮೆ, ಉದ್ವೇಗಗಳೇ** ಆತನ ಅವಸಾನಕ್ಕೆ ಕಾರಣವಾಗುತ್ತವೆ ಎಂಬುವುದು ವಚನಗಳಿಂದ ತಿಳಿದು ಬರುತ್ತದೆ.

ಬ್ರಹ್ಮ, ಪಿಶಾಚಿ, ಮೋಹಿನಿ, ವಿಕಾರಗಳ ಮೂಲಕವೇ ಮಂತ್ರ – ತಂತ್ರಗಳ ಮೂಲಕವೇ ಎದುರಾಳಿಯು ಏನನ್ನೂ ಮಾಡದಂತೆ ಕೈಗಳನ್ನು ಕಟ್ಟಿಹಾಕಿ ಗೆಲ್ಲುವ ಇಲ್ಲವೆ ಈ ಪ್ರಕ್ರಿಯೆಯ ಮೂಲಕ ಮಾರಣಾಂತಿಕಗೊಳಿಸುವುದೇ **'ಮೋಡಿ'** ಇದರಲ್ಲಿಯೆ ಎರಡು ವಿಧ. **'ರಾಜ ಮೋಡಿ'** ವಿನೋದಕ್ಕೆ ಸಂಬಂಧಿಸಿದ್ದಾದರೆ, **'ರಣಮೋಡಿ'** ಮಾರಣಾಂತಿಕವಾದುದಾಗಿದೆ. ವಿನೋದಕ್ಕೆ ನಡೆಸುವ ಮೋಡಿ ಸಹ್ಯವಾದುದು. ಸಾವಿಗೆ ಆಹ್ವಾನ ನೀಡುವ ರಣಮೋಡಿ ನಿಷೇಧಾರ್ಹವಾದುದು. **ಮಂತ್ರ – ಮಾಟ,**

ಮೋಡಿ, ಭಾನುಮತಿ, ವಶೀಕರಣ, ವಾಮಾಚಾರ ಇಂಥವುಗಳಲ್ಲಿ ನಂಬಿಕೆ, **ಆಸಕ್ತಿ,** ಶ್ರದ್ಧೆ ತೋರುವ ಸಮಾಜ ಅಥವಾ ನಾಡು ಹಿಂದುಳಿಯುತ್ತ ಹೋಗುತ್ತದೆ ಎಂಬುವುದನ್ನು ವಚನಕಾರರು ತಮ್ಮ ವಚನಗಳ ಮೂಲಕ ಪ್ರತಿರೋಧಿಸುವ ಮೂಲಕ ನವ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಪ್ರತಿಪಾದಿಸುತ್ತಾರೆ.

ಯಾವುದೇ ನಂಬಿಕೆ ಆಧಾರಿತ ಒಂದು ಪರಿಕಲ್ಪನೆಯ ಆಚರಣೆ ಅಥವಾ ಸಂಪ್ರದಾಯ, ಒಬ್ಬ ವ್ಯಕ್ತಿಯ ಬದುಕಿನ ಮಾರ್ಗವಾದಾಗ ಅಥವಾ ವ್ಯಾಪಾರೀಕರಣಕ್ಕೆ ನೆಲೆಯಾಗಿ ನಂಬಿಗಸ್ತ ಜನಸಾಮಾನ್ಯರನ್ನು ಶೋಷಿಸಲು ದಾರಿಯಾಗುತ್ತದೆ. ಇಂಥ ಪರಿಕಲ್ಪನೆಗಳ ಮೇಲೆ ವೈಚಾರಿಕತೆಯ ಹಿಡಿತವಿಲ್ಲದಿದ್ದರೆ ಮೌಢ್ಯತನದ ಸಮಾಜಕ್ಕೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ ಎಂಬುವುದು ಅನೇಕ ವಚನಗಳಿಂದ ತಿಳಿದು ಬಂದಿದೆ. ಈ ಮೌಢ್ಯತನದ ಸಮಾಜಕ್ಕೆ ದೂಡಲು ಜ್ಯೋತಿಷ್ಯ, ವಾಸ್ತು ಮುಂತಾದವು ಸಹಕರಿಸುತ್ತವೆ. ನಂಬಿಕೆ ಅಥವಾ ಮೂಢನಂಬಿಕೆಯ ಮೂಲಕ ಅನಾರೋಗ್ಯಕರ ಸಮಾಜಕ್ಕೆ ಪ್ರೇರೇಪಿಸುವ ಪರಿಕಲ್ಪನೆಗೆ **'ಮೌಢ್ಯ'** ಎಂದು ಕರೆಯಬಹುದಾಗಿದೆ. ಈ ಮೌಢ್ಯವನ್ನು ಒಪ್ಪಿದಾಗ ಮಾನವ ಪ್ರಯತ್ನಗಳಿಗೆ ಅರ್ಥವಿಲ್ಲದಂತಾಗುತ್ತದೆ.

ಜನತೆಯ ಶ್ರದ್ಧೆಯನ್ನು ಬಂಡವಾಳ ಮಾಡಿಕೊಂಡು ಮೂಢನಂಬಿಕೆಯನ್ನು ಬಿತ್ತುತ್ತ, **ಭಯ-ಅಂಜಿಕೆ-ಹೆದರಿಕೆ-ಉದ್ವೇಗಗಳನ್ನು** ಸೃಷ್ಟಿಸಿ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನುಂಟುಮಾಡುವ ಹಾಗೂ ಮರಣಕ್ಕೆ ದೂಡುವ ಯಾವುದೇ **ಮೌಢ್ಯದ ನಂಬಿಕೆ-ಆಚರಣೆ-ಸಂಪ್ರದಾಯ** ಹಾಗೂ ಶ್ರೀಸಾಮಾನ್ಯರ ನಿಯಮದ ಮೂಲಕ ತೊಡೆದು ಹಾಕುವುದರೊಂದಿಗೆ, ಇನ್ನು ಕೆಲವಷ್ಟನ್ನು ತನ್ನದೇ ಆದ ನೀತಿ ನಿಯಮಗಳ ಮೂಲಕ ನಿಯಂತ್ರಣ ಮಾಡುವ ಅಗತ್ಯವನ್ನು ವಚನಕಾರರು ತೋರ್ಪಡಿಸಿದ್ದರು. ಮೌಢ್ಯರಹಿತ ನವಸಮಾಜವನ್ನು ಬೆಳೆಸುವುದಕ್ಕಾಗಿ ಮತ್ತು ಪ್ರಬುದ್ಧ ಸಮಾಜವನ್ನು ಕಟ್ಟುವುದಕ್ಕಾಗಿ ಮೌಢ್ಯದ **ನಂಬಿಕೆ, ಸಂಪ್ರದಾಯ, ಆಚರಣೆಗಳ** ನಿಯಮಗಳನ್ನು ನಿಯಂತ್ರಿಸುವುದಕ್ಕಾಗಿ ವಚನಗಳನ್ನೇ ಆಧಾರಸ್ತಂಭಗಳನ್ನಾಗಿಸಿಕೊಂಡರು.

ವೇದ, ಆಗಮ, ಉಪನಿಷತ್ತುಗಳು ಮಾಡಿದ ಈ ನಿಯಮವನ್ನು ಏಕೆ ಒಪ್ಪಬೇಕು, ಇವರೆಲ್ಲರೂ ಪ್ರಗತಿಪರರೇ ? ಪ್ರಗತಿಪರರು ಎಂದರೆ ಎಲ್ಲರೂ ಒಮ್ಮುಖವಾಗಿ ಚಿಂತಿಸುವವರು, ಹಿಂದೂ ಧರ್ಮದ ವಿರೋಧಿಗಳು ಎಂದು ಗ್ರಹಿಸುವುದು ಸಮರ್ಥನೀಯವಲ್ಲ. ಪ್ರಗತಿಪರರಲ್ಲಿ ಒಮ್ಮುಖವಾಗಿ ಚಿಂತಿಸುವವರು ಇದ್ದಾರೆಯೇ ? ಸಮಾಜದ ಮುನ್ನಡೆಗೆ ಸಂಪ್ರದಾಯಸ್ಥರಿಂದ ಸಿಡಿದು ನಿಂತು ಹೊಸ ಸಮಾಜ ಕಟ್ಟಲು ಸಾಧ್ಯವಿಲ್ಲ. ಅವರ ಜೊತೆಗಿದ್ದೇ ಅವರನ್ನು ಬದಲಾಯಿಸುತ್ತ ಹೊಸ ಸಮಾಜ ಕಟ್ಟುವ ಪ್ರಕ್ರಿಯೆಯನ್ನು ವಚನಕಾರರು ದರ್ಶಿಸುತ್ತಾರೆ. ಹೀಗಾಗಿ ಪ್ರಗತಿಪರರು ಆದ ವಚನಕಾರರು

ಒಮ್ಮುಖವಾಗಿ ಚಿಂತಿಸುವುದರ ಮೂಲಕ ಮೌಢ್ಯತೆಯ ಒಳಗಿನ ನ್ಯೂನತೆಗಳನ್ನು ಎತ್ತಿ ತೋರಿಸಿ ನಿಜವಾದ ಅರ್ಥದಲ್ಲಿ ಮೂಢನಂಬಿಕೆಯ ಚಿಕಿತ್ಸೆಗೆ ವೈದ್ಯರಂತೆ ಕೆಲಸ ಮಾಡಿದ್ದು, ಪ್ರಗತಿಪರರರೇ ಆಗಿದ್ದು, ಅವರನ್ನು ಹೀಗೆ ಹಳಿಯುವುದು ಸರಿಯಲ್ಲ. ನಾವು ವಚನಕಾರರನ್ನು ಪ್ರಗತಿಪರರೆಂದು ಮೂಢನಂಬಿಕೆಯ ಪ್ರತಿರೋಧದ ಹರಿಕಾರರೆಂದು ನಿರ್ಧರಿಸಬಹುದು. ಪ್ರತಿರೋಧ ಮಾಡಿದ ವಚನಕಾರರು ಮೌಢ್ಯತೆಯಲ್ಲಿರುವ ಮಹಿಳೆಯರ ಹಿಂದುಳಿದವರ ಹಾಗೂ ಜನಸಾಮಾನ್ಯರ ಕಣ್ಣನ್ನು ತೆರೆಸುವ ಸಾಮಾರ್ಥ್ಯಹೊಂದಿದ್ದುದರಿಂದ ಧರ್ಮ ದೇವರುಗಳ ಹೆಸರಿನಲ್ಲಿ ಮೌಢ್ಯತೆ ಎನ್ನುವುದು ಅವರನ್ನು ಆವರಿಸಿಕೊಂಡಿರುವುದನ್ನು ಅಧಿಕೃತವಾಗಿ ಹೋಗಲಾಡಿಸಿದರು.

ಮೌಢ್ಯತೆಯು ಜನಸಾಮಾನ್ಯರಲ್ಲಿ ಮನೆ ಮಾಡಲು ಮುಖ್ಯಕಾರಣ ಅವರಿಗೆ ಶಿಕ್ಷಣ ಇಲ್ಲದಿರುವುದು ಎಂದು ಹೇಳುತ್ತೇವೆ. ಶಿಕ್ಷಣ ಇರುವುದರಿಂದ ಇದೆಲ್ಲ ಬದಲಾಗುತ್ತದೆ ಎನ್ನುವುದು ನಿಜಕ್ಕೆ ಹತ್ತಿರವಾದರೂ ಇದೊಂದೇ ಅದರ ಬದಲಾವಣೆಯ ಅಸ್ತ್ರವಲ್ಲ ಎಂಬುವುದನ್ನು ವಚನಕಾರರು ತೋರ್ಪಡಿಸಿದರು. ಮೌಢ್ಯತೆ ಆವರಿಸಲು ಶಿಕ್ಷಣದ ಕೊರತೆ ಒಂದಾದರೆ, ಅದರಷ್ಟೇ ಮುಖ್ಯವಾದುದು ವೈಚಾರಿಕತೆಯ ಕೊರತೆ, ಇದರಲ್ಲಿಯೇ ಎರಡು ವಿಧ. **ಒಂದು; ವೈಚಾರಿಕತೆ ಪುನಶ್ಚೇತನಗೊಳ್ಳಲು ರೂಪಿಸಿದ ವಾತಾವರಣ. ಎರಡು; ಅವೈಜ್ಞಾನಿಕತೆ ಮನೋಭಾವವುಂಟಾದಾಗ ಅದನ್ನು ಗುಣಪಡಿಸಲು ಬೇಕಾಗುವ ನಂಬಿಕೆಗಳ ಮೊತ್ತವನ್ನು ಸಂಗ್ರಹಿಸುವ ವ್ಯವಸ್ಥೆ.**

> **[7]ಪದ್ಮಾಸನದಲ್ಲಿ ಕುಳ್ಳಿರ್ದು ಆಧಾರಮಂ ಬಲಿದು**
> **ವಾಯುವ ಊರ್ಧ್ವಕ್ಕೆ ತಿದ್ದಿ**
> **ಮನ ಪವನ ಬಿಂದುವ ತ[ರ] ಹರವಂ ಮಾಡಿ**
> **ಷಡಾಧಾರ ಕಮಲವನೂರ್ಧ್ವಮುಖವಂ ಮಾಡಿ**
> **ಮೇಲಣ ಸಹಸ್ರಕಮಲಮಧ್ಯದೊಳಿಪ್ಪ ಜ್ಯೋತಿರ್ಲಿಂಗದಲ್ಲಿ**
> **ಮನವ ನಿಲಿಸಿ, ನೆನೆನೆನೆದು**
> **ಕೀಟಭೃಂಗನ್ಯಾಯದಂತಪ್ಪುದೆ ಯೋಗ**
> **ರೇಕಣ್ಣಪ್ರಿಯ ನಾಗಿನಾಥಾ.[7]**

ಬಹುರೂಪಿ ಚೌಡಯ್ಯ ಸ.ವ.ಸಂ – 8, ವಚನ 162 ಪುಟ ಸಂಖ್ಯೆ 66

ವೈಜ್ಞಾನಿಕ ಮನೋಭಾವವನ್ನು ಬಹುರೂಪಿ ಚೌಡಯ್ಯನವರು **ಏಕಾಗ್ರತೆಯನ್ನು ಪದ್ಮಾಸನದ ಯೋಗತತ್ವದ** ಹಿನ್ನಲೆಯಲ್ಲಿ ನಂಬಿಕೆಯ ಸಿದ್ಧಾಂತವನ್ನು ತಿಳಿಸಿದ್ದಾರೆ.

ಕೊನೆ ಟಿಪ್ಪಣಿ

1. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 1350, ಪುಟ ಸಂಖ್ಯೆ – 312,

2. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 573, ಪುಟ ಸಂಖ್ಯೆ – 143.

3. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳುರು ವರ್ಷ 2001, ವಚನ ಸಂಖ್ಯೆ – 925, ಪುಟ ಸಂಖ್ಯೆ – 212.

4. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳುರು ವರ್ಷ 2001, ವಚನ ಸಂಖ್ಯೆ – 828, ಪುಟ ಸಂಖ್ಯೆ – 212.

5. **ಮೌಢ್ಯ ನಿಷೇಧದ ಗುದ್ದಾಟಗಳು, ಡಾ. ಅರವಿಂದ ಮಾಲಗತ್ತಿ,** ವಿಸ್ಮಯ ಪ್ರಕಾಶನ, ಮೈಸೂರು, ವರ್ಷ 2016, ಪುಟ ಸಂಖ್ಯೆ 112–113.

6. **ಮೌಢ್ಯ ನಿಷೇಧದ ಗುದ್ದಾಟಗಳು, ಡಾ. ಅರವಿಂದ ಮಾಲಗತ್ತಿ,** ವಿಸ್ಮಯ ಪ್ರಕಾಶನ, ಮೈಸೂರು, ವರ್ಷ 2016, ವಚನ ಸಂಖ್ಯೆ 260, ಪುಟ ಸಂಖ್ಯೆ 65.

7. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು 2001, ವಚನದ ಸಂಖ್ಯೆ 162. ಸಂಖ್ಯೆ 66.

ಅಧ್ಯಾಯ – ೨

ಪೂರ್ವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ –೨

ಪೂರ್ವ ಅಧ್ಯಯನಗಳ ಸಮೀಕ್ಷೆ

ಈ ಅಧ್ಯಾಯದಲ್ಲಿ **"ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ"** ವನ್ನು ಕುರಿತು ನೇರವಾಗಿ ಮತ್ತು ಸ್ಪಷ್ಟವಾಗಿ ವಿಷಯ ಮತ್ತು ವಸ್ತುವಿಗೆ ದಾಖಲಾಗುವ ಸಾಹಿತ್ಯದ ಪೂರ್ವ ಅಧ್ಯಯನಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

1. ಮೂಢನಂಬಿಕೆಗಳು – ಜಿ. ರಂಗನಗೌಡ ನಿಲೋಗಲ್

ಸ್ವಾತಂತ್ರ್ಯಾನಂತರ ೬೬ ವರ್ಷಗಳು ಗತಿಸಿದ್ದರೂ ದೇವರು – ಧರ್ಮ ಎಂದು ಬಿಂಬಿಸಿ, ದೈವದ ಹೆಸರಲ್ಲಿ ಬೆತ್ತಲು ಸೇವೆ, ಸಿಡಿ, ಕೆಂಡಹಾಯುವಿಕೆ, ಹರಿಕೆಯ ರೂಪದಲ್ಲಿ ಮುಗ್ಧ ಕುರಿ, ಕೋಳಿ ಕೋಣಗಳ ಬಲಿ, ಮಾಯಾ ಮಾಟಾ–ಮಂತ್ರ, ಅಂತ್ರ–ತಂತ್ರ, ಮಡೆಸ್ನಾನ ಮುಂತಾದ ನೂರಾರು ಮೂಢನಂಬಿಕೆಗಳು ಎಗ್ಗಿಲ್ಲದೆ ರಾರಾಜಿಸುತ್ತಿರುವ ಬಗ್ಗೆ, ಸ್ವಾರ್ಥಿಗಳು, ಡೋಂಗಿಬಾಬ/ಸ್ವಾಮೀಜಿಗಳು ಪವಾಡಗಳ ಹೆಸರಲ್ಲಿ ಮುಗ್ಧ ಜನರನ್ನು ಶೋಷಿಸುವುದನ್ನು ತಡೆಗಟ್ಟಲು, ನನಗಾದ ನೋವು ನಲಿವುಗಳು ಸಮಾಜದ ಅನುಭವಗಳೇ ಆಗಿರುವ ಸಾಧ್ಯತೆಗಳಿದ್ದು ಕೆಲವು ನೈಜ ಘಟನೆಗಳನ್ನು ವೈಜ್ಞಾನಿಕ ಮನೋಭಾವದಿಂದ ವೈಚಾರಿಕತೆ ದೃಷ್ಟಿಯಿಂದ ಚಿಂತನ–ಮಂಥನಕ್ಕೆ ಸಹಾಯಕವಾಯಿತು.

ಮೌಢ್ಯತೆಗಳ ಬಗ್ಗೆ ವೈಜ್ಞಾನಿಕ – ವೈಚಾರಿಕವಾಗಿ ಅಲೋಚಿಸುವ ಶಕ್ತಿ ಇದ್ದರೂ, ಹಿರಿಯರ–ನೆಂಟರಿಷ್ಟರ ಅವಕೃಪೆಗೆ ಒಳಗಾಗಬೇಕಾಗುತ್ತೆನ್ನುವ ಭಯದಿಂದ ವಸ್ತುನಿಷ್ಠವಾಗಿ ಅಭಿಪ್ರಾಯಗಳನ್ನು ತಿಳಿಸದೇ ಸುಮ್ಮನಾಗುತ್ತಾರೆ. ಇಲ್ಲದ ಉಸಾಬರಿ ಕಟ್ಟಿಕೊಂಡು ಸಮಾಜವನ್ನು/ಡೊಂಗಿ ಪವಾಡ ಪುರುಷರನ್ನು ಎದುರಿಸುವ ಗೊಡವೆ ಏಕೆ ಎನ್ನುವ ಉದಾಸೀನ/ಪಲಾಯನವಾದ ತಾಳುತ್ತಿದ್ದಾರೆ. ಎಂಬುವುದರ ಬಗ್ಗೆ ಶೋಧನೆ ಮಾಡುವುದಕ್ಕೆ ಅನೇಕ ಮಾರ್ಗಗಳು ಗೋಚರವಾದವು.

2. ಮೂಡನಂಬಿಕೆಗಳ ವಿಶ್ವರೂಪ – ಪಂಜು ಗಂಗೊಳ್ಳಿ

ಮೂಢನಂಬಿಕೆಗಳು ಬಡ, ಹಿಂದುಳಿದ ಹಾಗೂ ಅನಕ್ಷರಸ್ಥರೇ ಹೆಚ್ಚಿರುವ ಭಾರತದಂತಹ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಬಹಳ ಆಧುನಿಕ ಹಾಗೂ ಸುಶಿಕ್ಷಿತ ಅನಿಸಿಕೊಂಡಿರುವ ಪಾಶ್ಚಿಮಾತ್ಯ ದೇಶಗಳು ಇಂದಿಗೂ ಮೂಢನಂಬಿಕೆಗಳಿಂದ ಮುಕ್ತವಾದವುಗಳಲ್ಲ ಎಂಬುವುದರ ಚರ್ಚೆಗೆ ಪೀಠಿಕೆ ದೊರೆಯಿತು.

ಪ್ರಶ್ನೆಗಳು ಹುಟ್ಟದ ಮನಸ್ಸಿನಲ್ಲಿ ಮೂಢನಂಬಿಕೆಗಳು ಹುಲುಸಾಗಿ ಬೆಳೆಯುತ್ತವೆ. ಅಜ್ಞಾನ, ಭಯ ಇದಕ್ಕೆ ಗೊಬ್ಬರವಾಗುತ್ತವೆ. ಹೀಗೆ ಬೆಳೆದ ಮೂಢನಂಬಿಕೆಗಳ ಮೇಲೆ ಪರಾವಲಂಭಿಗಳಾಗಿ ಬದುಕುವವರೇ ಜ್ಯೋತಿಷಿಗಳು, ಮಾಟಗಾರರು, ಪವಾಡಪುರುಷರು, ಬಾಬಾಗಳು, ಜಗದ್ಗುರುಗಳು, ದೇವಮಾನವರು, ನಾಗಪಾತ್ರಿಗಳು ಮೊದಲಾದವರು. ಜನರ ಮೌಢ್ಯ ಇವರ ಹೊಟ್ಟೆ ತುಂಬಿಸುವ, ಕಿಸೆ ಭರ್ತಿ ಮಾಡುವ ಸಾಧನವಾದುದ್ದು ಹೇಗೆ ಎಂದು ವಚನಗಳಿಂದ ತಿಳಿಯಲು ಸಾಧ್ಯವಾಯಿತು.

ಮೂಢನಂಬಿಕೆಗಳು ನಮ್ಮ ಪೂರ್ವಜರು ತಮ್ಮ ಸುತ್ತಮುತ್ತಲಿನ ಆಗುಹೋಗು, ಪ್ರಾಕೃತಿಕ ಕ್ರೀಯೆ ಮೊದಲಾವುಗಳನ್ನು ಅರ್ಥ ಮಾಡಿಕೊಳ್ಳಲು, ನಿಯಂತ್ರಿಸಲು ನಡೆಸಿದ ಪ್ರಯತ್ನಗಳೇ. ಆ ಕಾಲದ ಮಿತಿಯಲ್ಲಿ ಅವುಗಳು 'ವೈಜ್ಞಾನಿಕ ತಿಳುವಳಿಕೆ'ಗಳೇ ಆಗಿದ್ದವು ಎನ್ನಬೇಕು. ಆದರೆ. ಅವುಗಳು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು, ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಲು, ಆಳ ವಿಸ್ತಾರಗಳನ್ನು ಹೆಚ್ಚಿಸಲು ನಿರಂತರ ಪ್ರಯತ್ನಗಳನ್ನು ಮಾಡದ ಸಲುವಾಗಿ ಮೂಢನಂಬಿಕೆಗಳಾಗಿಯೇ ಉಳಿದವು. ವಿಜ್ಞಾನವೂ ಹೀಗೆಯೇ ನಿಂತ ನೀರಾಗಿದ್ದಿದ್ದರೆ ಅದಕ್ಕೂ ಮೂಢನಂಬಿಕೆಗೂ ಹೆಚ್ಚು ವ್ಯತ್ಯಾಸಗಳಿರುತ್ತಿರಲಿಲ್ಲ. ಆದರೆ, ವಿಜ್ಞಾನ ನಿರಂತರವಾಗಿ ತನ್ನನ್ನು ಸರಿಪಡಿಸಿಕೊಳ್ಳುತ್ತ, ತನ್ನ ಇತಿಮಿತಿ, ಆಳ ವಿಸ್ತಾರಗಳನ್ನು ಹೆಚ್ಚಿಸಿಕೊಳ್ಳುತ್ತ ತನ್ನ ಸತ್ಯಾನ್ವೇಷಕ ಬುದ್ದಿಯನ್ನು ಹರಿತಗೊಳಿಸುತ್ತಾ ಬಂದ ಪರಿಣಾಮವಾಗಿ ಮನುಷ್ಯ ತನ್ನ ಬದುಕಿನ, ಸುತ್ತಮುತ್ತಲ ಪ್ರಕೃತಿಯ ಅಸಂಖ್ಯ ನಿಗೂಢತೆಗಳನ್ನು ಅರ್ಥ ಮಾಡಿಕೊಂಡು ಅನೇಕ ಮೌಢ್ಯಗಳಿಂದ ಹೊರ ಬರುವುದು ಸಾಧ್ಯವಾಗಿದೆ. ಹಾಗಂತ, ವಿಜ್ಞಾನ ಎಲ್ಲವನ್ನೂ ವಿವರಿಸಬಲ್ಲದು, ಎಲ್ಲದಕ್ಕೂ ಕಾರಣ ನೀಡಬಲ್ಲದು ಎಂದು ಇದರರ್ಥವಲ್ಲ ವಿಜ್ಞಾನಕ್ಕೆ ಇನ್ನೂ ಸವಾಲಾಗಿ ಅನೇಕ ಸಂಗತಿಗಳವೆ ಎಂಬುವುದು ಮೂಢನಂಬಿಕೆಗಳ ಅಧ್ಯಯನಕ್ಕೆ ಪೂರಕವಾಗಿದೆ.

3. ಮೌಢ್ಯ ನಿಷೇಧದ ಗುದ್ದಾಟಗಳು– ಅರವಿಂದ ಮಾಲಗತ್ತಿ

ಈ ಕೃತಿ ಯಾವುದೇ ಒಂದು ವರ್ಗದ ಜನತೆಯನ್ನು ನಿಂದಿಸಲು ರೂಪುಗೊಂಡಿಲ್ಲ. ಬದಲಾಗಿ ಸಮಗ್ರ ಸಮಾಜದ ಏಳ್ಗೆಗಾಗಿ ಹಾತೊರೆಯುವಂತಹದ್ದಾಗಿದೆ. ಜಾತಿ–ಮತ–ಧರ್ಮ–ಪಂಥಗಳಿಂದಾಚೆಗೆ ನಿಂತು ಆಲೋಚಿಸಲು ಮುಂದಾಗುವುದರೊಂದಿಗೆ ಚಿಂತಕರಿಗೂ ಹಾಗೆ ಚಿಂತಿಸಲು ಪ್ರೇರೇಪಿಸುವುದಾಗಿದೆ ಎಂದು ಗ್ರಹಿಸಲಾಯಿತು.

ಮೌಢ್ಯಾಚರಣೆಗೆ ಸಂಬಂಧಿಸಿದ ಲೇಖನಗಳು ಹೆಚ್ಚಿನವು ವರ್ತಮಾನದಲ್ಲಿ ಚರ್ಚಿತವಾದ ಸಂಗತಿಗಳಿಗೆ ಸಂಬಂಧಿಸಿದವುಗಳಾಗಿವೆ. ಹಾಗೂ ಮೌಢ್ಯಾಚರಣೆಗಳ ಸಮಸ್ಯೆ ಹಾಗೂ ಸಂಗತಿಗಳಿಗೆ ನಿವಾರಣೆಗಾಗಿ ಮೌಢ್ಯಾಚರಣೆ ಪ್ರತಿಬಂಧಕ ವಿಧೇಯಕ ಕೇಂದ್ರ ಬಿಂದುವಾಗಿ ಚರ್ಚಿತವಾಗಿದೆ. ವಿಧೇಯಕಕ್ಕೆ ಸಂಬಂಧಿಸಿದಂತೆ ಜನತೆಗೆ ತಿಳಿವಳಿಕೆ ನೀಡುವ ಹಾಗೂ ಏಕಾಭಿಪ್ರಾಯವನ್ನು ರೂಪಿಸುವ

ಉದ್ದೇಶವೂ ಇದರ ಹಿಂದಿದೆ. ಇದರ ಮೂಲ ಗುರಿ ವಿಧೇಯಕವನ್ನು ಸರಕಾರ ಜಾರಿಗೆ ತರುವಂತೆ ಮಾಡುವುದಾಗಿದೆ ಎಂಬುದನ್ನು ಅಧ್ಯಯನ ಮಾಡಲು ಸಹಾಯಕವಾಯಿತು.

4. ನಂಬಿಕೆ, ಮೂಢನಂಬಿಕೆ ವೈಜ್ಞಾನಿಕ ಮನೋವೃತ್ತಿ–ಎಂ. ಅಬ್ದುಲ್ ರೆಹಮಾನ್ ಪಾಷ

ಈ ಕೃತಿಯಲ್ಲಿ ದೇವರು ಮತ್ತು ಧರ್ಮ ಎಂಬ ಕಲ್ಪನೆಯನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಅದು ನನ್ನ ತಿಳಿವಳಿಕೆಗೆ ಮೀರಿದ್ದು, ಮತ್ತು ಅನೇಕ ವಿದ್ವಾಂಸರಲ್ಲಿಯೂ ಜಾಗತಿಕ ಮಟ್ಟದಲ್ಲಿಯೂ ಅತ್ಯಂತ ಆಧ್ಯಾತ್ಮಿಕ ಮಟ್ಟದಲ್ಲಿ ಜಿಜ್ಞಾಸೆಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ನಾನು ಈ ಕೃತಿಯಲ್ಲಿ ಚರ್ಚಿಸಲು ನೋಡುತ್ತಿರುವುದು, ದೇವರ ಧರ್ಮದ ಹೆಸರಿನಲ್ಲಿ ಬಂದಿರುವ ಮೂಡಾಚರಣೆಗಳನ್ನು ಮತ್ತು ಜನರ ಇಂಥ ಸಮುಗ್ಧತನವನ್ನೋ ಮೌಢ್ಯವನ್ನೋ ಬಳಸಿಕೊಂಡು ಪಟ್ಟಭದ್ರಹಿತಾಸಕ್ತಿಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು; ಅದರಿಂದ ಇಪ್ಪತ್ತೊಂದನೇ ಶತಮಾನದ ಜಾತ್ಯತೀತ ಧರ್ಮ ನಿರಪೇಕ್ಷ ಜನತಂತ್ರ ರಾಷ್ಟ್ರವೊಂದರಲ್ಲಿ ಬದುಕುತ್ತಿರುವ ನಮಗೆ ಮೂಢನಂಬಿಕೆಗಳು ಹೇಗೆ ವೈಯಕ್ತಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಮಟ್ಟದಲ್ಲಿ ಗೆದ್ದಲು ಹಿಡಿಸುತ್ತಿವೆ ಎಂಬುದನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಆದ್ದರಿಂದ ದೇವರು, ಧರ್ಮದ ಬಗ್ಗೆ ಅನನ್ಯ ಶ್ರದ್ಧೆಯಿರುವವರೂ ಕೂಡ ದೇವರು ಮತ್ತು ಧರ್ಮಗಳನ್ನು ಬೀದಿಗೆ ತಂದು ರಿಯಾಯಿತಿ ಬೆಲೆ, ಕಂತುಗಳಲ್ಲಿ ಮಾರಾಟ ಮಾಡುತ್ತಿರುವ ಧರ್ಮಭ್ರಷ್ಟರ ವಿರುದ್ಧ ಧ್ವನಿ ಎತ್ತುತ್ತಾರೆ ಎಂದು ನಮ್ಮ ಆಶಯ. ಅಧ್ಯಯನ ಮಾಡುತ್ತಾ ಹೋದ ಹಾಗೆ ನನಗೇ ಹೊಸ ಹೊಳಹುಗಳು, ರಹಸ್ಯಗಳು, ಮೂಢನಂಬಿಕೆ ವ್ಯಾಪಾರಿಗಳ ಕುತಂತ್ರಗಳು, ಅವರೊಂದಿಗೆ ಮಾಧ್ಯಮದವರ ಹೂಟಗಳು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಅರ್ಥವಾಗತೊಡಗಿದವು ಈ ಕೃತಿ ನನ್ನಲ್ಲೂ ಪ್ರೌಢತೆಯನ್ನು ತರುವುದರ ಜೊತೆಗೆ ಅಧ್ಯಯನಕ್ಕೆ ಪೂರಕವಾಯಿತು.

5. ವಚನ ತವನಿಧಿ– ಡಾ. ಹೆಚ್. ಚಂದ್ರಶೇಖರ

ಈ ಲೇಖನವು ವಿಸ್ತೃತವಾಗಿ ವಿವರಣಾತ್ಮಕವಾಗಿ ಮೂಡಿಬಂದಿರುವುದಲ್ಲದೆ ಇಂದಿಗೂ ಪ್ರಸ್ತುತವಾಗುವ ನಿಲುವುಗಳನ್ನು ಒಳಗೊಂಡಿದೆ. ವಚನಕಾರರನ್ನು ಆರಾಧಿಸುವವರನ್ನೂ ಒಳಗೊಂಡಂತೆ ಎಲ್ಲ ಮತ–ಧರ್ಮಾರಾಧಕರೂ ಈ ಲೇಖನವನ್ನು ಓದಿ ಅರ್ಥಮಾಡಿಕೊಂಡರೆ ಮೌಢ್ಯಾಚರಣೆ ವಿರೋಧ ಯಾಕೆ ಅಗತ್ಯ ಎಂಬ ಅರಿವಾಗುತ್ತದೆ. 'ವಚನಕಾರರ ದೃಷ್ಟಿಯಿಂದ ವಿವಾಹ–ಅಂತರ್ಜಾತಿ ವಿವಾಹ' ಎಂಬ ಲೇಖನವೂ ಅಷ್ಟೆ. ಇದು ಅಂದಿನ ದೃಷ್ಟಿಯಷ್ಟೆ ಆಗಿದೆ, ಇಂದಿನ ದೃಷ್ಟಿಯೂ ಆಗಬೇಕಾದ ಮುನ್ನೋಟವಾಗಿದೆ. **'ವಚನ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ'** ಒಂದು ಸಾಹಿತ್ಯಕ ಸಾಮಾಜಿಕ ವಿವರಣೆಯಾಗಿರುವ ಲೇಖನ. ಈ ಲೇಖನದಲ್ಲಿ ಬರುವ ವೇದವಿರೋಧಿ, ಜಾತಿವಿರೋಧಿ, ಮೌಢ್ಯವಿರೋಧಿ ಅಂಶಗಳ ವಿವರಣೆಗಳ ಒಡಲಲ್ಲೇ ವಿಶ್ಲೇಷಣೆಯ ಒಳಹರಿವು ಇದೆ. ಹೀಗಾಗಿ

ಗಮನೀಯವಾಗಿದೆ. 'ಸಿದ್ಧರಾಮರ ಕಾಲನಿರ್ಣಯ' ಕುರಿತ ಲೇಖನ ಮತ್ತು 'ವಚನಗಳಲ್ಲಿ ಕಂಡುಬರುವ ಸಂಸ್ಕೃತ ಶ್ಲೋಕಗಳು' ಎಂಬ ಲೇಖನ- ಸಂಶೋಧನಾತ್ಮಕ ಗುಣದಿಂದ ಮುಖ್ಯವಾಗುತ್ತವೆ ಚರ್ಚೆ-ಚಿಂತನೆಗಳನ್ನು ಆಹ್ವಾನಿಸುತ್ತವೆ ಎಂಬುದನ್ನು ಅಧ್ಯಯನ ಮಾಡಲು ಸಹಾಯಕವಾಗಿದೆ.

6. ಶರಣರ ಸೊಲ್ನುಡಿ – ಯು.ಎನ್.ಸಂಗನಾಳಮಠ

ಷಟ್‌ಸ್ಥಲ ಮಾರ್ಗವನ್ನು ಶರಣರು ತಮ್ಮ ಬಹುಮುಖ ಸಾಧನೆಯಿಂದ ಅದಕ್ಕೆ ವ್ಯಾಪಕತೆಯನ್ನು ಚಲನಶೀಲತೆಯನ್ನು ತಂದುಕೊಟ್ಟರು. ಅವರ ಸಾಧನೆಯಿಂದ ಕ್ರಾಂತಿಕಾರಕವಾಯಿತು. ವಿವಿಧ ಹಂತಗಳಲ್ಲಿರುವ ವಿಭಿನ್ನ ಮನೋಧರ್ಮದ ಎಲ್ಲ ವರ್ಗಗಳ ಸಾಧಕರನ್ನು ಯಾವ ತಾರತಮ್ಯವಿಲ್ಲದೇ ಶರಣರು ಈ ಮಾರ್ಗಕ್ಕೆ ಸ್ವಾಗತಿಸಿದರು. ತಾತ್ವಿಕ ಸಿದ್ಧಾಂತಕ್ಕೂ ಧಾರ್ಮಿಕ ಆಚರಣೆಗೂ ಸಮನ್ವಯವನ್ನು ಕಲ್ಪಿಸುವುದರಲ್ಲಿ ಇದರ ವೈಶಿಷ್ಟ್ಯ ಇದೆ. ಸೃಷ್ಟಿಕರ್ತ, ಜೀವಾತ್ಮ ಇವರ ಪರಸ್ಪರ ಸಂಬಂಧವನ್ನು ಅರಿಯುವ ರೀತಿ ಇಲ್ಲಿದೆ. ಡಾ.ಫ.ಗು. ಹಳಕಟ್ಟಿಯವರ ಶಿವಾನುಭವ ಶಬ್ದಕೋಶ ಮತ್ತು ಡಾ. ನಂದಿಮಠ ಅವರ A Hand book of Veerasaivism ಪುಸ್ತಕದಲ್ಲಿ ಹೆಚ್ಚಿನ ವಿವರ ಲಭಿಸುತ್ತದೆ. ಷಟ್ಸ್ಥಲದಲ್ಲಿ ಬರುವ ಆರು ಮೆಟ್ಟಿಲನ ಊರ್ಧ್ವಮುಖಕ್ರಿಯೆ, ಸಾಧಕನ ಉತ್ತರಣ ಮಾರ್ಗದ ಹಲವು ಹಂತಗಳನ್ನು ಒಳಗೊಂಡಿದೆ ಹಾಗೆಯೇ ಈ ಅಧ್ಯಯನದ ಮೂಲಕ ಷಟ್ಸಸ್ಥಲ ನಂಬಿಕೆಗಳನ್ನು ಅಧ್ಯಯನ ಮಾಡಲು ಸಾಧ್ಯವಾಯಿತು.

ವಚನ ಸಾಹಿತ್ಯ ಜನಪದ ಸಾಹಿತ್ಯವೂ ಸರಿ. ವಿಶಿಷ್ಟ ವರ್ಗವರ್ಣ ಭೇದವಿಲ್ಲದೆ ಸಕಲ ಜೀವಾತ್ಮರಿಗೆ ಲೇಸನು ಬಯಸುವ, ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದ ಸಾರ್ವಕಾಲೀಕವಾಗಿ ನಿಲ್ಲುವ ಸಾಹಿತ್ಯವಿದು. ಸಾಮಾನ್ಯರಿಂದ ರಚಿತವಾದ ಸಾಹಿತ್ಯ ಜನಪದದಲ್ಲೇ ವೈಚಾರಿಕತೆಯನ್ನು ಜಾಗ್ರತಗೊಳಿಸಿ, ಸಮತಾಭಾವನೆಯನ್ನು ಉಂಟುಮಾಡಿ ಭ್ರಾತೃತ್ವವನ್ನು ಬೆಳೆಸುವುದರೊಂದಿಗೆ ಮೂಢನಂಬಿಕೆಯ ಪ್ರತಿರೋಧದ ಬಗ್ಗೆ ಕೂಡ ತನ್ನ ವಿಸ್ತಾರತೆಯನ್ನು ಚಾಚಿಕೊಂಡಿದೆ ಎಂಬುದನ್ನು ಗ್ರಹಿಸಲಾಯಿತು.

7. ಶರಣ ಸಂಪದ – (ಲೇಖನಗಳ ಸಂಕಲನ) – ಪ್ರೊ. ಎಸ್. ಉಮಾಪತಿ

ಈ ಲೇಖನಗಳ ಸಂಪುಟದಲ್ಲಿ ಬಂದಿರುವ ಎಲ್ಲ ಲೇಖಲನಗಳೂ ವಚನಕಾರರ ಪರಿಚಯಾತ್ಮಕವಾದವುಗಳು. ವಚನಗಳು ಉಪನಿಷತ್ತುಗಳು ವಚನಕಾರರು ರಸಋಷಿಗಳು ಎಂದು ಬಲು ಹಿಂದೆಯೇ ಪ್ರಸಿದ್ದ ಲೇಖಕರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ಅಪ್ಪಣೆ ಕೊಡಿಸಿದ್ದಾರೆ. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಬಲು ದೊಡ್ಡ ಆಸ್ತಿ. ಈ ಸಾಹಿತ್ಯದಲ್ಲಿ ಕಂಡು ಬರುವ ವಚನಗಳೆಲ್ಲವೂ ಇಹ ಮತ್ತು ಪರ ಹಾಗೂ ಆತ್ಮ ಪರಮಾತ್ಮನ ವಿಚಾರವಾಗಿ ಅತಿ ವಿಸ್ತಾರವಾಗಿ ಮತ್ತು

ಆಳವಾಗಿ ಚರ್ಚಿಸಿದುದರ ಫಲವಾಗಿ ಮೂಡಿ ಬಂದಿವೆ. ಆ ಚರ್ಚೆ ಯಾರೊಬ್ಬರ ಅಭಿಪ್ರಾಯವೂ ಅಲ್ಲ. ಅದೊಂದು ಸಾಮೂಹಿಕವಾದ ಪ್ರಾಮಾಣಿಕವಾದ ಹಾಗೂ ಸರ್ವಸಮಾನತೆಯ ತಳಹದಿಯ ಮೇಲೆ ನಡೆದಂತಹದು. ಅದೊಂದು ಬಿಚ್ಚು ಮನಸ್ಸಿನಿಂದ ಸರ್ವಸ್ವತಂತ್ರವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸುವ ಮೂಲಕ, ಕೆನೆ ಮೊಸರನ್ನು ಕಡೆದಾಗ ಬರುವ ನವನೀತದಂತೆ, ಒಂದು ಸಾಮೂಹಿಕ ಚರ್ಚೆಯ ಫಲವಾಗಿ ಹೊರ ಬಿದ್ದಿರುವ ಅಮೃತ ಬಿಂದುಗಳೇ ಈ ವಚನಗಳು, ಅಂದರೆ ಅಲ್ಲಿ ಎಲ್ಲರ ಅಭಿಪ್ರಾಯಕ್ಕೂ ಮನ್ನಣೆ ಇತ್ತು. ಅದನ್ನೇ ಶರಣ ಶರಣೆಯರು **'ಅನುಭಾವ'** ವೆಂದು ಒಂದು ವಿನೂತನ ನುಡಿಗಟ್ಟಿನಿಂದ ಸೂಚಿಸಿದ್ದಾರೆ ಅನುಭಾವವೆಂದರೇನು, ಅನುಭಾವಕ್ಕೂ ನಂಬಿಕೆಗಳಿಗೂ ಇರುವ ಸಂಬಂಧವನ್ನು ಈ ಸಾಹಿತ್ಯದ ಅವಲೋಕನದಿಂದ ಗ್ರಹಿಸಿರುತ್ತೇನೆ.

'ನಿಮ್ಮ ಶರಣರ ಸೂಳ್ನುಡಿಯ ಒಂದರೆ ಘಳಿಗೆಯಿತ್ತಡೆ ನಿನ್ನನಿತ್ತೆ ಕಾಣಾ!' 'ಕಡೆಗೀಲಿಲ್ಲದ ಭಂಡಿ ಹೊಡೆಗೆಡೆಯಗದೆ ಮಾಂಬುದೆ....... ಮೃಡ ಭಕ್ತರ ನುಡಿಗಡಣವೆ ಕಡೆಗೀಲು ಕಾಣ!" – "ಅನುಭಾವ' ವಿಲ್ಲದೆ ಏನೂ ಏನೂ ತಾನರಿಯ ಬಾರದು" ಎಂಬ ಅಮೂಲ್ಯವಾದ ಅಭಿಪ್ರಾಯವನ್ನು ಜೇಡರ ದಾಸಿಮಯ್ಯ ಮತ್ತು ಬಸವಣ್ಣನವರಿಂದ ಹೊರ ಬಿದ್ದಿದೆ. ಶಿವಶರಣರು ಶಿವ ಸ್ವರೂಪಗಳು, ಅವರೊಡನೆ ನಡೆಸುವ ಸಂಭಾಷಣೆ ಮಾತಿನ ಮಥನವಲ್ಲ. ಅನುಭಾವದ ಸುಧೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇಂತಹ ಅಮೂಲ್ಯವಾದ ಅನುಭಾವದ ಹಿನ್ನಲೆಯಲ್ಲಿ ವಚನ ಸಾಹಿತ್ಯ ಶಿವಶರಣರ ಅಂತರಂಗದ ವಾಣಿಯಾಗಿ ಹೊರ ಹೊಮ್ಮಿದೆ. ಈ ಸಾಹಿತ್ಯ ಸಾಮಾನ್ಯ ಜನರು ಮತ್ತು ಶಿವಶರಣರು ಇವರ ಮಧ್ಯೆ ಸಂಪರ್ಕ ಸೇತುವೆಯಾಗಿ ನಿಂತಿದೆ. ಈ ವಚನ ಸಾಹಿತ್ಯ ದೀನದಲಿತರು ಮತ್ತು ಮಹಿಳೆಯರಿಗೆ ಸ್ವರ್ಗ ಮರ್ತ್ಯ ಪಾತಾಳ ಲೋಕಗಳಲ್ಲಿ ವಿಹರಿಸಲು ರಹದಾರಿಯಾಗಿ ಪರಿಣಮಿಸಿದೆ. ಇಂತಹ ಕ್ರಾಂತಿಗೆ ಶಿವಶರಣರು ಸರಳ ಕನ್ನಡ ಭಾಷೆಯನ್ನು ಆರಿಸಿಕೊಂಡುದು ಅವರ ಉದ್ದೇಶ ಈಡೇರಲು ಮಾರ್ಗ ಸುಗಮವಾಯಿತು. ಕನ್ನಡದಲ್ಲಿಯೇ ಪರಮಾತ್ಮನನ್ನು ಮಾತಾಡಿಸಬಹುದು. ಆರಾಧಿಸಬಹುದು. ಪೂಜಿಸಬಹುದು. ಅಲ್ಲದೆ ಯಾರ ಪೌರೋಹಿತ್ಯವೂ ಅದಕ್ಕೆ ಬೇಕಾಗಿಲ್ಲ ಎಂದು ತೋರಿಸಿಕೊಟ್ಟರು. ಎಂಬುವುದನ್ನು ನಾನು ಅಧ್ಯಯನ ಮಾಡಲು ಸಹಾಯಕವಾಯಿತು.

8. ವಚನಗಳಲ್ಲಿ ಲಿಂಗಾಯಿತ ಸಂಸ್ಕೃತಿ, ಸಂಸ್ಕಾರ ಮತ್ತು ಆಚರಣೆಗಳು–ಕೆ.ಎಂ. ರೇವಣ್ಣ

ಪರಿವರ್ತನಶೀಲವಾದ ಜಗತ್ತಿನಲ್ಲಿ ಮಾನವನ ಎಲ್ಲಾ ಕಾರ್ಯ ಚಟುವಟಿಕೆಗಳಿಗೂ ಮೂಲ ಅನ್ವೇಷಣೆ. ಅಂತೆಯೇ ಸೃಷ್ಟಿ ರಹಸ್ಯವನ್ನು ಕುರಿತು ತಾತ್ವಿಕ ಚಿಂತಯನೆಯನ್ನು ಮಾಡತೊಡಗಿದ. ಅಲ್ಲಿಂದಲೇ ಪ್ರಾರಂಭವಾಯಿತು ಸಂಶೋಧನೆ. ಅಲ್ಲಿಂದ ಅವನ ರೀತಿ ನೀತಿಗಳು, ನಂಬಿಕೆ–ಬಯಕೆಗಳು, ಧಾರ್ಮಿಕ ಕ್ರಿಯೆಗಳಾಗಿ ಬಲಿಯತೊಡಗಿದವು. ಅದು ಭೀತಿಯಿಂದಾಗಿರಬಹುದು, ಪ್ರೀತಿಯಿಂದಾಗಿರ ಬಹುದು, ಕುತೂಹಲ ಪ್ರೇರಿತವಾಗಿರಬಹುದು. ಅವನ ಗುರಿ ಒಂದೇ ಆಗಿತ್ತು; ಈ ಜಗತ್ತಿನ

ಮರ್ಮವನರಿತು ಪೂರ್ಣತ್ವವನ್ನು ಸಾಧಿಸಿ ಆನಂದವನ್ನು ಪಡೆಯುವುದು ಹೇಗೆ ಎಂಬುವುದನ್ನು ವಿವರಿಸಿದ್ದಾರೆ.

ಆದಿಮಾನವ ತನ್ನ ಸುತ್ತಲ ಪ್ರಕೃತಿಯನ್ನು ಪರಿಭಾವಿಸಿ, ತನ್ನ ಬದುಕಿಗೆ ಪೂರಕವಾದ ಶಕ್ತಿಗಳನ್ನು ಆರಾಧಿಸತೊಡಗಿದ. ಅವುಗಳನ್ನು ಪೂಜ್ಯತೆಯಿಂದ ಕಂಡು ಆ ಮೂಲಕ ತನ್ನ ಇರುವಿಕೆಯನ್ನು ಗುರುತಿಸಿಕೊಂಡ. ಭಯಾಶ್ಚರ್ಯಗಳಿಂದ, ಪಂಚಭೂತಗಳನ್ನು ನೋಡಿ ಕೃತಜ್ಞತಾಪೂರ್ವಕವಾಗಿ ಅವುಗಳಿಗೆ ನಮಿಸತೊಡಗಿದ, ಭೂಮಿ ತನಗೆ ಅನ್ನ ಆಹಾರ ನೀಡುತ್ತಿರುವುದನ್ನು ಕಂಡು ಅದು ದೈವ ಸ್ವರೂಪವೆಂದು ತಿಳಿದು ಕೃಷಿ ಕಾರ್ಯಗಳಲ್ಲಿ ತೊಡಗಿದ. ಅಂತೆಯೇ ಗಾಳಿ, ಬೆಳಕು, ಬೆಂಕಿ, ನೀರು, ನದಿ, ಬೆಟ್ಟ, ಆಕಾಶ, ಪ್ರಾಣಿ ಪಕ್ಷಿಗಳು ತನಗುಪಕರಿಸುವುದನ್ನು ಕಂಡು ಅವುಗಳು ದೇವರೆಂದು ಕಲಿತುಕೊಂಡ, ತನಗುಪಕರಿಸಿದ ಪ್ರತಿಯೊಂದು ವಸ್ತು ವೈವಿಧ್ಯತೆಗಳು ದೇವರ ಸಮಾನವೆಂದು ಭಾವಿಸುವುದರ ಮೂಲಕ ನಂಬಿಕೆ ಮತ್ತು ಮೂಢನಂಬಿಕೆಗಳ ಸಂಬಂಧವನ್ನು ವಿಶ್ಲೇಷಿಸಿದ್ದಾರೆ.

ನಾಗರಿಕತೆ ಬೆಳೆದಂತೆಲ್ಲಾ ತನ್ನ ಸುತ್ತಲಿನ ಪರಿಸರದ ಪ್ರಭಾವಕ್ಕೆ ಒಳಪಟ್ಟು ಧರ್ಮ, ದರ್ಶನ, ಸಿದ್ಧಾಂತಗಳು, ವೈವಿಧ್ಯ, ವೈಶಿಷ್ಟಪೂರ್ಣವಾದ ಆಚಾರ ವಿಚಾರಗಳು ಆಶ್ಚರ್ಯಕರವಾಗಿ ವಿಪುಲವಾಗಿ ಬೆಳೆದುಬಂದವು. ಒಂದೊಂದು ಗುಂಪು ಒಂದೊಂದು ರೀತಿಯ ಆಚಾರ ವಿಚಾರಗಳನ್ನು ರೂಢಿಸಿಕೊಂಡವು ಎಂಬುದು ನಂಬಿಕೆ – ಮೂಢನಂಬಿಕೆಗಳ ಬಗ್ಗೆ ತಿಳಿಯಲು ಸಾಧ್ಯವಾಯಿತು.

9. ವಚನ ಧರ್ಮಸಾರ – ಎಂ.ಆರ್. ಶ್ರೀನಿವಾಸಮೂರ್ತಿ

ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸಹಾನುಭೂತಿ, ಸರ್ವಸಮತೆ – ಇವೆಲ್ಲಾ ಸದ್ಧರ್ಮದ ಲಕ್ಷಣಗಳು. ಚಿನ್ನದೊಡನೆ ಕೂಡವುದು ಚಿನ್ನ – ಹಿತ್ತಾಳೆಯಲ್ಲ; ಪಾದರಸದೊಡನೆ ಹೊಂದಿಕೊಳ್ಳುವುದು ಪಾದರಸ–ಕಸವಲ್ಲ. ತೂರಬೇಕು, ಸೋಸಬೇಕು, ಒರೆಗಲ್ಲಿಗೆ ತೀಡಬೇಕು, ನೋಡಬೇಕು. ಎಲ್ಲ ಕಡೆಯಿಂದಲೂ ಒಳ್ಳೆಯದನ್ನು ತುಂಬಿ ಕೊಳ್ಳಬೇಕು ಎನ್ನುವುದೇ ವಚನ ಸಾಹಿತ್ಯದ ನಂಬಿಕೆ. ಹೀಗಾಗಿ ವಚನ ಸಾಹಿತ್ಯದಲ್ಲಿ ಸತ್ಯ, ಸೌಂದರ್ಯ ಸ್ವಾತಂತ್ರ್ಯ ಈ ನಂಬಿಕೆಗಳೀಗೆ ಆದ್ಯತೆ ಇದೆಯೇ ವಿನಹ ಖಂಡಿತ ಮೂಡನಂಬಿಕೆಗೆ ಅಲ್ಲ ಎಂಬುವುದು ಅರಿವಿಗೆ ಬಂದಿರುವುದನ್ನು ಇಲ್ಲಿ ಗ್ರಹಿಸಲಾಗಿದೆ.

ಈ ಮೇಲಿನ ಎಲ್ಲಾ ಸಾಹಿತ್ಯದ ಪೂರ್ವ ಅಧ್ಯಯನದ ಮೂಲಕ ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ ವಿಷಯವನ್ನು ಆಳವಾಗಿ ಅಧ್ಯಯನ ಮಾಡಲು ಸಾಧ್ಯತೆಗಳನ್ನು ಒದಗಿಸಿತು. ವಿಷಯದ ಸಮಸ್ಯೆ, ಎದುರಾಗುವ ಸವಾಲುಗಳು, ಸವಾಲುಗಳನ್ನು ಬಿಡಿಸುವ ಸಾಧ್ಯತೆಗಳಿಗೆ ಮಾನದಂಡಗಳನ್ನು ಒದಗಿಸಬಲ್ಲವು ಎಂಬುದನ್ನು ಖಚಿತಪಡಿಸಿಕೊಳ್ಳಲಾಯಿತು.

ಅಧ್ಯಾಯ : ೩

ವಚನಗಳಲ್ಲಿ ನಂಬಿಕೆಯ ವ್ಯಾಖ್ಯಾನ

ಅಧ್ಯಾಯ – ೩

ವಚನಗಳಲ್ಲಿ ನಂಬಿಕೆಗಳ ವ್ಯಾಖ್ಯಾನ

[8]ಹಾವಿನ ಹಲ್ಲಿನ ವಿಷದ ಕೊಳಪೆಯ ಮೂಲೆಯಲ್ಲಿ,
ಮೂರು ಕಪ್ಪೆ ಹುಟ್ಟಿದವು.
ಒಂದಕ್ಕೆ ಕಾಲಿಲ್ಲ ಒಂದಕ್ಕೆ ಬಾಯಿಲ್ಲ, ಒಂದಕ್ಕೆ ಕಣ್ಣಿಲ್ಲ.
ಕಾಲಿಲ್ಲದ ಕಪ್ಪೆ ಮೂರುಲೋಕವ ಸುತ್ತಿತ್ತು.
ಬಾಯಿಲ್ಲದ ಕಪ್ಪೆ ಬ್ರಹ್ಮಾಂಡವ ನುಂಗಿತ್ತು
ಕಣ್ಣಿಲ್ಲದ ಕಪ್ಪೆ ಕಂಗಾಣದವರ ಕಂಡಿತ್ತು.
ಈ ಖಂಡಮಂಡಲದ ಅಂಗವ ಬಿಡಿಸು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವೆ.[8]

ಮನುಮುನಿಗುಮ್ಮಟದೇವ– ಸ.ವ.ಸಂ–8, ವಚನ 1001 ಪುಟ ಸಂಖ್ಯೆ 340

ಈ ವಚನದ ಮೂಲಕ ವಚನಕಾರರ ನಂಬಿಕೆಗಳ ವ್ಯಾಖ್ಯಾನಗಳನ್ನು ಅರ್ಥಮಾಡಿಸುವುದರ ಹಿನ್ನಲೆಯಲ್ಲಿ ಈ ಅಧ್ಯಾಯ ಮುಖ್ಯವಾಗಿದೆ.

ಇಂಗ್ಲೀಷ್‌ನಲ್ಲಿ **ಸೂಪರ್‌ಸ್ಟಿಷನ್ (Superstition)** ಎಂಬ ಪದ ಬಳಕೆಯಲ್ಲಿದೆ. ಲ್ಯಾಟಿನ್ ಮೂಲದಲ್ಲಿ ಇದು ಕ್ರಿ.ಪೂ. ಒಂದನೇ ಶತಮಾನದಷ್ಟು ಹಿಂದೆಯೇ ಬಳಕೆಯಲ್ಲಿತ್ತು. ಫ್ರೆಂಚ್, ಸ್ಪ್ಯಾನಿಷ್, ಪೋರ್ಚುಗೀಸ್ ಮುಂತಾದ ಭಾಷೆಗಳಲ್ಲಿ ಪ್ರಾದೇಶಿಕ ರೂಪಾಂತರಗಳಲ್ಲಿ ಬಳಕೆಯಲ್ಲಿದ್ದ ಈ ಪದ ಇಂಗ್ಲೀಷ್‌ನಲ್ಲಿ ಬಳಕೆಯಾಗಿದ್ದು ಸುಮಾರು ಕ್ರಿ.ಶ. 15ನೇ ಶತಮಾನದ ಹೊತ್ತಿಗೆ ಆದರೆ 12ನೇ ಶತಮಾನದ ವಚನಕಾರರು ವಚನಗಳಲ್ಲಿ ಈ ಸೂಪರ್‌ಸ್ಟಿಷನ್ ಕೇವಲ ಪದವಾಗಿ ಬಳಸಿಲ್ಲ. ನಂಬಿಕೆ ಮತ್ತು ಮೂಢನಂಬಿಕೆಗಳ ವೈಚಾರಿಕತೆಯನ್ನು ವೈಜ್ಞಾನಿಕವಾಗಿ ಸ್ಪಷ್ಟಪಡಿಸಿದ್ದಾರೆ.

ಮೂಲದಲ್ಲಿ ಈ ಪದವನ್ನು ಹೀನಾರ್ಥಕ ರೀತಿಯಲ್ಲಿ ಬಳಸಲಾಗುತ್ತಿತ್ತು. ಈಗಲೂ ಈ ಭಾವ ಇದರ ಬಳಕೆಯಲ್ಲಿ ಮುಂದುವರೆದಿದೆ. ದೇವರ ಕುರಿತು ಅನನ್ಯ ಭಕ್ತಿ ಇರಬೇಕು. ಅದಕ್ಕೆ ವಿರುದ್ಧವಾದ ಅತಿಯಾದ ಭಯ ಅಥವಾ ವಿವೇಕರಹಿತ ಧಾರ್ಮಿಕ ನಂಬಿಕೆಯನ್ನು **'ಸೂಪರ್‌ಸ್ಟಿಷನ್'** ಎಂದು ಕರೆಯಲಾಗುತ್ತಿತ್ತು. **ಸೂಪರ್‌ಸ್ಟಿಷನ್** ಎಂದರೆ ಅತಿಮಾನುಷ ಅಥವಾ ಅತೀಂದ್ರಿಯ ಕಾರ್ಯಕಾರಣ ಸಂಬಂಧದಲ್ಲಿ–ಎಂದರೆ ಯಾವುದೇ ನೈಸರ್ಗಿಕ ಕ್ರಿಯೆ – ಎರಡು ವಿದ್ಯಮಾನಗಳ ನಡುವೆ ಯಾವುದೇ ನೈಜ, ನೈಸರ್ಗಿಕ ಸಂಬಂಧವೇ ಇಲ್ಲದಿದ್ದರೂ ಒಂದು ಕ್ರಿಯೆ – ಎರಡು ವಿದ್ಯಮಾನಗಳ ನಡುವೆ

ಯಾವುದೇ ನೈಜ, ನೈಸರ್ಗಿಕ ಸಂಬಂಧವೇ ಇಲ್ಲದಿದ್ದರೂ ಒಂದು ಕ್ರಿಯೆ ಇನ್ನೊಂದು ಕ್ರಿಯೆ ನಡೆಯಲು ಕಾರಣವಾಯಿತು ಎಂದು ನಂಬುವ ಮನೋವೃತ್ತಿ. ನೈಜ ವಿಜ್ಞಾನಕ್ಕೆ ವಿರುದ್ಧವಾಗಿರುವ ಧಾರ್ಮಿಕ **ನಂಬಿಕೆಗಳು, ಪವಾಡಗಳು, ಶಕುನಗಳು, ಜ್ಯೋತಿಶ್ಯಾಸ್ತ್ರ, ಮಾಟಮಂತ್ರ** ಇವುಗಳನ್ನು ಇದಕ್ಕೆ ಉದಾಹರಣೆಗಳನ್ನಾಗಿ ನೀಡಬಹುದು. ಈ ಅತೀಂದ್ರಿಯ ನಂಬಿಕೆಗಳಲ್ಲಿ ಪುರಾಣ, ಪುಣ್ಯಕಥೆ, ದಂತಕಥೆ, ಜಾನಪದ ಕಥೆ ಇವುಗಳಲ್ಲಿ ರೂಪಕವಾಗಿ ಬರುವ ಅಸಾಧಾರಣ ವ್ಯಕ್ತಿ, ಶಕ್ತಿ, ವಿದ್ಯಮಾನಗಳನ್ನು ನಿಜವೆಂದೇ ಭಾವಿಸುವ ಮುಗ್ಧತನವೂ ಸೇರಿಕೊಂಡಿರುತ್ತದೆ.

ವೈಜ್ಞಾನಿಕ ಮನೋವೃತ್ತಿಯುಳ್ಳವರು ಅವುಗಳನ್ನು**'ಮೂಢನಂಬಿಕೆ'** ಗಳೆಂದು ಕರೆಯುತ್ತಾರೆ; ಅವುಗಳನ್ನು ಸಮಾಜದಿಂದ ತೊಡೆದು ಹಾಕಬೇಕು ಎಂದು ಆಶಿಸುತ್ತಾರೆ. ಮೂಢನಂಬಿಕೆಗಳು ಸಮಾಜದಲ್ಲಿ ಇವೆ ಎಂದರೂ ಅವು ಇರುವುದು ಮನುಷ್ಯರಲ್ಲಿಯೇ ಎಂಬುದನ್ನು ಮರೆಯಬಾರದು. ಯಾವ ಸನ್ನಿವೇಶ, ಕಲಿಕೆ, ಅನುಭವದಿಂದಾಗಿ ನಾವು ಕೆಲವರು ವೈಜ್ಞಾನಿಕ ಮನೋವೃತ್ತಿಯುಳ್ಳವರಾಗಿದ್ದೇವೆಯೋ ಅಂಥ ಸನ್ನಿವೇಶ, ಪರಿಸರ ಹೆಚ್ಚಿನವರಿಗೆ ಸಿಕ್ಕಿರುವುದಿಲ್ಲ. ಅಂಥವರಿಗೆ ನಾವು **'ಮೂಢನಂಬಿಕೆ'** ಗಳೆಂದು ಕರೆಯುವ ಹಲವಾರು ನಂಬಿಕೆಗಳು ನಿಜವಾಗಿಯೂ ಏಕೆ ಅವೈಚಾರಿಕ, ಅವುಗಳನ್ನು ಆಚರಿಸುವುದು ವೈಯಕ್ತಕವಾಗಿ, ಸಾಮಾಜಿಕವಾಗಿ, ಆರ್ಥಿಕ–ರಾಜಕೀಯವಾಗಿ ಏಕೆ ಹಾನಿಕಾರ ಎಂಬುದನ್ನು ಮನವರಿಕೆ ಮಾಡಿಕೊಟ್ಟರೆ ಅವರೂ ವೈಜ್ಞಾನಿಕ ಮನೋವೃತ್ತಿಯನ್ನು ಬೆಳಸಿಕೊಳ್ಳುತ್ತಾರೆ.

[9]ಅಷ್ಟಮದಸೂತಕದ ಕೆಟ್ಟಗುಣವಳಿದುಳಿದು,
ಇಷ್ಟಲಿಂಗದಲ್ಲಿ ನಿಷ್ಠೆ ನಿಬ್ಬೆರಸಿದ ವೀರಮಾಹೇಶ್ವರನ
ಘನಮಹಿಮೆಯನಾರು ಬಲ್ಲರು ಹೇಳಾ !
ಪರಮನಾಣತಿವಿಡಿದು, ಪೊಡವಿಯೊಳು ಬಂದು,
ನಡೆಗೆಟ್ಟ ಜಡರುಗಳ ಕಡೆದಾರಿಯನು ತೋರಿ
ಹಿಡಿದು ನಡೆಸಿದ ಕಡುಗಲಿಯನಾರು ಬಲ್ಲರು ಹೇಳಾ!
ಗಮನಾಗಮನವಾದಿಗಳನಮಿತಕ್ಕ ಗಣಿತ
ಗಮನಾಗಮನ ಗುರುನಿರಂಜನ ಚನ್ನಬಸವಲಿಂಗ
ಸನ್ನಿಹಿತದಿರವನಾರುಬಲ್ಲರು ಹೇಳಾ ![9]

ಸಂಗನ ಸಂಗನಬಸವಯ್ಯ ಸ.ವ.ಸಂ–12, ವಚನ 233, ಪುಟ – 70.

ವೈಜ್ಞಾನಿಕ ಮನೋವೃತ್ತಿವುಳ್ಳವರೆಲ್ಲ ಮಹಾಪುರುಷರು, 'ಮೂಢನಂಬಿಕೆ'ಯನ್ನು ಇಟ್ಟುಕೊಂಡವರು ಮಹಾಮೂರ್ಖರು ಎಂಬ ದಾರ್ಷ್ಟ್ಯ ನಮ್ಮಲ್ಲಿದ್ದರೆ, ಅದೇ ಒಂದು ದೊಡ್ಡ ಮೂರ್ಖನಂಬಿಕೆ. ಅದು ನಿಜವಾಗಿಯೂ ವೈಜ್ಞಾನಿಕ ಮನೋವೃತ್ತಿಯುಳ್ಳವರ ಗುಣಲಕ್ಷಣವಲ್ಲ.

ಮೊದಲು ಇಂಥ ಮನೋಭಾವವನ್ನು ಬೇರುಸಹಿತ ಕಿತ್ತುಹಾಕಬೇಕು. ಅತೀಂದ್ರಿಯ ಶ್ರದ್ಧೆಯನ್ನು ಇಟ್ಟುಕೊಂಡವರ ನಂಬಿಕೆಗಳನ್ನು 'ಮೂಢನಂಬಿಕೆ'ಗಳು ಎಂದು ಸಾರಾಸಗಟಾಗಿ ಕರೆದು, ಅವರ ಮನಸ್ಸನ್ನು ನೋಯಿಸಿ, ಅವರನ್ನು ಅರಿವಿನ ಬೆಳಕಿನಿಂದ ದೂರಸರಿಯುವ ಹಾಗೆ ಮಾಡಿದರೆ, ಅದು ನಮ್ಮದೇ ತಪ್ಪಾಗುತ್ತದೆ. ಆದ್ದರಿಂದ ನಮ್ಮ ಈ ಪುಸ್ತಕದಲ್ಲಿ ಮುಂದೆ ಮೂಢನಂಬಿಕೆ ಎಂಬ ಪದವನ್ನು ಬಳಸಿದರೆ, ಅದು ಅತೀಂದ್ರಿಯ ನಂಬಿಕೆ ಎನ್ನುವುದಕ್ಕೆ ಸಂವಾದಿಯಾಗಿ ಅದು ಈಗ ಹೆಚ್ಚು ಪ್ರಚಲಿತವಿದೆ ಎನ್ನುವ ನೆಲೆಯಲ್ಲಿ ಬಳಕೆಯಾಗುತ್ತದೆಯೇ ವಿನಃ ಅವಹೇಳನಕಾರಿ ಅರ್ಥ, ಭಾವದಲ್ಲಿ ಅಲ್ಲ ಎಂಬುದನ್ನು ಮೊದಲೇ ಸ್ಪಷ್ಟಪಡಿಸಬಯಸುತ್ತೇನೆ. ಎಲ್ಲೆಲ್ಲಿ ಸಮಾಂಜಸವೋ ಅಲ್ಲಿ ಅಂಧವಿಶ್ವಾಸ, ಅಂಧಶ್ರದ್ಧೆ, ಅತೀಂದ್ರಿಯ ನಂಬಿಕೆ, ಅತಿಮಾನುಷ ನಂಬಿಕೆ ಇತ್ಯಾದಿ ಪದಗಳನ್ನೂ ಬಳಸಲಾಗಿದೆ. ಒಟ್ಟಾರೆ ಉದ್ದೇಶ, ಇವೆಲ್ಲವನ್ನೂ ಮತ್ತೊಮ್ಮೆ ತೆರೆದ ಮನಸ್ಸಿನಿಂದ ತಿಳಿದು, ವಿಮರ್ಶಿಸಿ; ಅತ್ಯಂತ ಸೂಕ್ತವಾದುದನ್ನು ಅಂಗೀಕರಿಸಲು ಒಪ್ಪಿಕೊಳ್ಳೋಣ.

ನಂಬಿಕೆ ಎಂದರೇನು ? ಈ ಪ್ರಶ್ನೆಗೆ ಸಂಗನ ಬಸವಯ್ಯ ವಚನಕಾರರು ನಿಖರವಾದ ಶಬ್ದಾರ್ಥದೊಂದಿಗೆ ನಿಖರವಾದ ವ್ಯಾಖ್ಯಾನ ನೀಡಿರುತ್ತಾರೆ. (ಈತನ 17ನೇ ಶತಮಾನಕ್ಕೆ ಸೇರಿದ ವಚನಕಾರ, ಇತ ತನ್ನನ್ನು ತಾನು **'ದೇಸಿಕೇಂದ್ರ' ಸಂಗನ ಬಸವಯ್ಯ** ಎಂದು ಕರೆದುಕೊಂಡಿದ್ದಾನೆ. ಈತನ ಅಂಕಿತನಾಮ **'ಗುರು ನಿರಂಜನ ಚನ್ನಬಸವಲಿಂಗ'**, ಈತನ ಕೃತಿಯ ಹೆಸರು **'ಷಟ್‌ಸ್ಥಲ ವಚನಗಳು' ಇದರಲ್ಲಿರುವ ಒಟ್ಟು ಸ್ಥಲಗಳು 53 ವಚನಗಳು 1247, ಈ ಸ್ಥಲಗಳಲ್ಲಿ ಮುಖ್ಯವಾಗಿ ಗುರುಭಕ್ತ ಸಂಸಾರಿ, ಲಿಂಗಾಂಗ ಲೀಲ ಷಟ್‌ಸ್ಥಲ, ಆಚಾರಾಂಗಸ್ಥಲ, ಗೌರವಾಂಗಸ್ಥಲ, ಶಿವಾಂಗಸ್ಥಲ, ಚರಾಂಗಸ್ಥಲ, ಶೇಷಾಂಗಸ್ಥಲ, ಮಹದಂಗಸ್ಥಲ ಎಂಬ 8 ಸ್ಥಲಗಳು ಯಾವುದೇ ಸ್ಥಲಕಟ್ಟಿನ ಕೃತಿಗಳಲ್ಲಿ ಕಾಣದ ನೂತನ ಸ್ಥಲಗಳಾಗಿವೆ). ಈತನ ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧಕ್ಕೆ** ಸಂಬಂಧಿಸಿದ ಅಂಶಗಳು ಹೇರಳವಾಗಿ ಕಂಡುಬರುತ್ತದೆ.

> **[10]ಕರಿಕಾಳಿ ಕಂಠದಲಿ ಲಕ್ಷ ಲಕ್ಷ ರುಂಡಮಾಲೆಯ ಸರವ ನೋಡಾ !**
> **ಮುಂಡಗಳು ಮೊಲೆಯನುಂಡರೆ ಮೂರು ಕೊತ್ತಲ ಕಿಚ್ಚಿದ್ದು ಹೊಯ್ಯಲು**
> **ಮೂರು ಲೋಕದವರೆಲ್ಲ ತಳವೆಳಗಾಗಿ ಹೋದರು**
> **ನಿರಂಜನ ಚನ್ನಬಸವಲಿಂಗವನರಿಯದೆ.[10]**

ಸಂಗನ ಬಸವಯ್ಯ – ವಚನ 18, ಪುಟ –5.

ನಿರ್ದಿಷ್ಟ ಪುರಾವೆಯ ಹೊರತಾಗಿಯೂ, ಪುರಾವೆಯ ನಿರೀಕ್ಷೆಯೂ ಇಲ್ಲದೆ ಯಾವುದೇ ವಸ್ತು, ವ್ಯಕ್ತಿ, ಶಕ್ತಿ, ಸಂಗತಿ ಇತ್ಯಾದಿಗಳು ಇದೆ ಅಥವಾ ನಿಜ ಎಂದು ಭಾವಿಸುವುದು **'ನಂಬಿಕೆ'**. ನಂಬಿಕೆ ಎನ್ನುವುದು, ಒಂದು ಹೇಳಿಕೆ ಅಥವಾ ಪ್ರತಿಪಾದನೆ ನಿಜವೆಂದು ಭಾವಿಸುವ ಮನಸ್ಥಿತಿ, ಪ್ರತಿಯೊಂದು ಹೇಳಿಕೆಗೂ, ಪ್ರತಿಯೊಬ್ಬ ವ್ಯಕ್ತಿಗೆ ಅದು ನಿಜ ಎನ್ನುವುದರ ಬಗ್ಗೆ ಭಾವನೆ ಇರುತ್ತದೆ, ಅಥವಾ

ಇರುವುದಿಲ್ಲ. ಅವೆರಡರ ನಡುವಿನ ಒಂದು ಸ್ಥಿತಿ ಎಂಬುದೊಂದು ಇರುವುದಿಲ್ಲ. ದೇವರುಗಳ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಕೊನೆ ಪಕ್ಷ ಯಾವುದಾದರೂ ಒಂದು ಬಗೆಯ ದೇವರು ಇದ್ದಾನೆ ಎಂಬ ನಂಬಿಕೆ ಇರುತ್ತದೆ, ಅಥವಾ ಅಂಥ ನಂಬಿಕೆ ಇರುವುದಿಲ್ಲ. ಇಂಥ ನಿರ್ದಿಷ್ಟವಾದ ನಿಲುವುಗಳ ನಡುವೆ ಅನುಮಾನವಿರುವ ಒಂದು ಸ್ಥಿತಿ ಇರಬಹುದು. ಆದರೂ ಅನುಮಾನ ಪರಿಹಾರಕ್ಕೆ ಅನುಸರಿಸುವ ಮಾರ್ಗದಿಂದಲೇ ಅವರಿಗಿರುವ ನಂಬಿಕೆಯ ಸ್ವರೂಪ ಗೊತ್ತಾಗಿಬಿಡುತ್ತದೆ ಎಂಬುದು ಸಂಘನ ಬಸವಯ್ಯನ ತಿಳುವಳಿಕೆ.

ಯಾವುದೇ ಒಂದು ಸಂಗತಿಯಲ್ಲಿ ನಂಬಿಕೆ ಇದೆ ಎಂದರೆ ಎರಡು ಅರ್ಥವಿರುತ್ತದೆ. ಒಂದು ಪ್ರಶಂಸಾತ್ಮಕ ಅರ್ಥ; ಒಬ್ಬ ವ್ಯಕ್ತಿ ಅಥವಾ ವಸ್ತುವಿನಲ್ಲಿ ಇರುವ ನಿಮ್ಮ ವಿಶ್ವಾಸವನ್ನು, ಭರವಸೆಯನ್ನು ಅದು ಹೇಳುವುದು. ಉದಾ: **'ಆತ ಈ ಕೆಲಸವನ್ನು ಮಾಡಬಲ್ಲ ಎಂದು ನನಗೆ ನಂಬಿಕೆ ಇದೆ'.** ಎರಡನೆಯದು, ಅಸ್ತಿತ್ವದ ಪ್ರತಿಪಾದನೆ: ಯಾವುದಾದರೂ ಒಂದು ವ್ಯಕ್ತಿ, ವಸ್ತು, ಶಕ್ತಿ, ಸಂಗತಿಗಳ ಇರುವಿಕೆಯ ಪ್ರತಿಪಾದನೆ. ಸಾಮಾನ್ಯವಾಗಿ ಅಂಥ ವ್ಯಕ್ತಿ, ವಸ್ತು, ಶಕ್ತಿ, ಸಂಗತಿ ಭೌತಿಕವಾಗಿ ನಿಜವಲ್ಲದಿದ್ದಾಗ ಅಥವಾ ಅದರ ಅಸ್ತಿತ್ವದಲ್ಲಿ ಸಂದೇಹವಿದ್ದಾಗ ಈ ಮಾತನ್ನು ಬಳಸುತ್ತೇವೆ. **'ಆತನಿಗೆ ದೆವ್ವಭೂತಗಳಲ್ಲಿ ನಂಬಿಕೆ ಇದೆ'. 'ನನಗೆ ದೇವರಲ್ಲಿ ನಂಬಿಕೆ ಇದೆ'.** ಇತ್ಯಾದಿ. ಈ ವಚನದಲ್ಲಿ ಸಂಗನ ಬಸವಯ್ಯನವರು ಒಂದು ವ್ಯಕ್ತಿಯ ನಂಬಿಕೆ, ವ್ಯಕ್ತಿಯ ತೀರ್ಮಾನವಲ್ಲ, ತೀರ್ಮಾನವೆಂಬುವುದು ಸಮಷ್ಠಿ ಪ್ರಜ್ಞೆ ಆ ನಂಬಿಕೆಯನ್ನು **ಮಡಿವಾಳ ಮಾಚೀದೇವ, ಸಿದ್ದರಾಮಯ್ಯ, ಉರಿಲಿಂಗಪೆದ್ದಣ್ಣ, ಅಜಗಣ್ಣ, ಸಂಗನ ಬಸವಯ್ಯ,** ಈ ಎಲ್ಲಾ ವಚನಕಾರರ ನಂಬಿಕೆಗಳು ಮುಕ್ತಾಯಕ್ಕ, ಮಹದೇವಿಯಕ್ಕನವರಲ್ಲಿ ಅಡಗಿರುವುದನ್ನು ಈ ವಚನದ ಮೂಲಕ ನಂಬಿಕೆ ಎನ್ನುವುದು ನಂಬಿಕೆಯಲ್ಲ ಅದೊಂದು ವೈಜ್ಞಾನಿಕ ವಿವೇಚನೆ ಎನ್ನುತ್ತಾರೆ.

[11]ಊರು ಕೆಟ್ಟುಹೋಗಿ ಕಲ್ಯಾಣ ಕೌಲು ನಿಂದಲ್ಲಿ,
ಕೂಡಿದ ಸಂಪತ್ತು ಸಲ್ಲಲಿತದೊಳಿರ್ದೆನಯ್ಯಾ,
ಎನ್ನ ಮಠಕ್ಕೆ ಬಂದ ಬಸವಣ್ಣ ನೊಂದುಕೊಂಡ,
ಮಡಿವಾಳಯ್ಯನೊಂದುಕೊಂಡ,
ಚನ್ನಬಸವಣ್ಣನೊಂದುಕೊಂಡ, ಸಿದ್ಧರಾಮಯ್ಯ ನೊಂದುಕೊಂಡ,
ಉರಿಲಿಂಗಪೆದ್ದಣ್ಣನೊಂದುಕೊಂಡ, ಅಜಗಣ್ಣ ನೊಂದುಕೊಂಡ
ಇಂತಾದಬಳಿಕ ಮುಂದೆ ಮುಕ್ತಾಯಿ ಇಲ್ಲ,[10]
ಮಹಾದೇವಿಯಕ್ಕನೊಳಗಡಗಿರ್ದೆನು
ಗುರುನಿರಂಜನ ಚನ್ನಬಸವಲಿಂಗ ಸನ್ನಿಹಿತ.[11]

ಸಂಗನ ಬಸವಯ್ಯ– ವಚನ 855, ಪುಟ – 255.


ವ್ಯಕ್ತಿಯ ನಂಬಿಕೆಯು ಆ ವ್ಯಕ್ತಿಯ **'ತೀರ್ಮಾನ'**ವಲ್ಲ. ತೀರ್ಮಾನ ಎನ್ನುವುದು ಒಂದು ಹೇಳಿಕೆಯ ಬಗ್ಗೆ ಪ್ರಜ್ಞಾಪೂರ್ವಕವಾಗಿ ವಿವೇಚನೆಯನ್ನು ಬಳಸಿ ನಿರ್ಧಾರಕ್ಕೆ ಬರುವ ಮಾನಸಿಕ ಕ್ರಿಯೆ. ನಂಬಿಕೆಯನ್ನು ತಾಳುವಲ್ಲಿ ವ್ಯಕ್ತಿ ತನ್ನ ವಿವೇಚನೆಯನ್ನು ತೊಡಗಿಸಬೇಕಾಗಿಲ್ಲ. ನಂಬಿಕೆ ಬೇರೆ, ಜ್ಞಾನ

ಬೇರೆ. ನಂಬಿಕೆ ನಿಜವಾದರೆ, ಎಂದರೆ ಸೂಕ್ತವಾದ ಸಕಾರಣವಾದ ಸಮರ್ಥನೆ, ಪುರಾವೆ ಇದ್ದರೆ ಅದು ಜ್ಞಾನವಾಗುತ್ತದೆ; ಸುಳ್ಳು ನಂಬಿಕೆಗಳು, ಎಷ್ಟೇ ಪ್ರಾಮಾಣಿಕವಾಗಿದ್ದರೂ, ಎಷ್ಟೇ ಸಾಂತ್ವನಕಾರಿಯಾಗಿದ್ದರೂ ಅವು ಜ್ಞಾನವಾಗುವುದಿಲ್ಲ. ಪುರಾವೆ ಇಲ್ಲದಿದ್ದರೆ ನಂಬಿಕೆ ಕೇವಲ ಕುರುಡುನಂಬಿಕೆಯಾಗುತ್ತದೆ.

> [12]**ಅಚ್ಚ ಮತ್ತೈದೆರೈವರೆನ್ನಿಚ್ಚೆಯೊಳಗಿಪ್ಪರು**
> **ನಿಮ್ಮಾದಿ ಶಿಶುವಾದಕಾರಣ.**
> **ನಚ್ಚಿ ಮಾಡಿದಡಿಗೆಯು ಅಚ್ಚಳಿಯದಿದ್ದಿತ್ತು**
> **ಆಡುತ ಬನ್ನಿ ಮೂವರೊಂದಾಗಿ,**
> **ಬೇಡಿಕೊಂಬುವನಲ್ಲ, ನೀಡಿ ನೂಕಿ ನಿಲ್ಲುವೆ**
> **ನಿಮ್ಮಾಣೆ ಗುರುನಿರಂಜನ ಚನ್ನಬಸವಲಿಂಗದಲ್ಲಿ.**[12]

ಸಂಗನ ಬಸವಯ್ಯ – ಸ.ವ.ಸಂ–12, ವಚನ 150, ಪುಟ – 45.

ಮಹದೇವಿಯಕ್ಕ ಮತ್ತು ಮುಕ್ತಾಯಕ್ಕರಲ್ಲಿ ಅಡಗಿರುವ ಪ್ರಜ್ಞಾಪೂರ್ವಕ ಸಮಷ್ಠಿಯನ್ನು ಸಂಗನ ಬಸವಯ್ಯ ವಚನಕಾರರು **"ಅಚ್ಚಮುತ್ತೈದೆ"** ಎಂಬ ಪರಿಕಲ್ಪನೆಯೊಂದಿಗೆ ನಂಬಿಕೆ ಎಂಬುವುದು ಕೇವಲ ಮಾನಸಿಕ ವ್ಯವಹಾರವಲ್ಲ ಅದು **ಪಂಚೀಕರಣ ತತ್ವ** ಎನ್ನುತ್ತಾ **ಅಚ್ಚಮುತ್ತೈದೆ ಪರಿಕಲ್ಪನೆಗೆ ಶಬ್ದಾರ್ಥ** ನೀಡುತ್ತಾರೆ.



ನಂಬಿಕೆಗಳು ಕೇವಲ ಮಾನಸಿಕ ವ್ಯವಹಾರಗಳಲ್ಲ; ಹಾಗಾಗಿದ್ದರೆ ನಾವು ಅವುಗಳ ಕುರಿತು ಸಾರ್ವಜನಿಕ ಮಟ್ಟದಲ್ಲಿ ಆತಂಕಪಟ್ಟುಕೊಳ್ಳಬೇಕಾಗಿರಲಿಲ್ಲ. ಕಳವಳದ ಸಂಗತಿಯೆಂದರೆ, ಅವು ವ್ಯಕ್ತಿಯ ವರ್ತನೆಯಲ್ಲಿಯೂ ಪ್ರಕಟಗೊಳ್ಳುತ್ತವೆ. ಹೀಗಾಗಿ ನಂಬಿಕೆ ಕೇವಲ ಖಾಸಗಿ ವಿಚಾರವಲ್ಲ; ಒಬ್ಬ ವ್ಯಕ್ತಿಯ ನಂಬಿಕೆ ಇತರರ ಮೇಲೆ ಪ್ರಭಾವವನ್ನು ಬೀರುತ್ತವೆ; ಇತರರ ನಂಬಿಕೆಗಳೊಂದಿಗೆ ತೊಡಕಿಕೊಳ್ಳುತ್ತವೆ; ಇತರ ವ್ಯಕ್ತಿಗಳ ಬದುಕನ್ನೂ ಒಳಗೊಳ್ಳುತ್ತವೆ. ಒಬ್ಬರ ನಂಬಿಕೆಗಳು ಇತರರ ಆನಂದಕ್ಕೂ ಆತಂಕಕ್ಕೂ ಕಾರಣವಾಗುತ್ತವೆ. ನಮ್ಮ ನಂಬಿಕೆಗಳು ಮೂಢನಂಬಿಕೆಗಳಾಗಿದ್ದರಂತೂ ಅದು ಇನ್ನೂ ಅಪಾಯಕಾರಿ. ಆದ್ದರಿಂದ, 'ನನ್ನ ನಂಬಿಕೆ ನನಗೆ ಸೇರಿದ್ದು; ಅದನ್ನು ಕಟ್ಟಿಕೊಂಡು ನಿಮಗೇನು?' ಎನ್ನುವ ಪ್ರಶ್ನೆ ಸಮಾಜಜೀವಿಯಾದ ಮನುಷ್ಯನಿಗೆ ಸಮಂಜಸವಲ್ಲ ಎಂಬುವುದು ಈ ವಚನದ ಶಬ್ದಾರ್ಥ.

ಮೂಢನಂಬಿಕೆ ಎಂದರೇನು ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ನಂಬಿಕೆ ಎಂದರೇನು ಎಂಬುವುದನ್ನು ತಿಳಿದುಕೊಂಡರೆ ಮೂಢನಂಬಿಕೆ ಎಂದರೇನು ಎಂಬುವುದು ಸ್ಪಷ್ಟವಾಗುತ್ತದೆ. ವಚನಕಾರರ ನಂಬಿಕೆಗಳ ಶಬ್ದಾರ್ಥ.

- ನಿರ್ದಿಷ್ಟಕಾಲದ ನಂಬಿಕೆ
- ಪಂಚಭೂತದ ನಂಬಿಕೆ
- ಜೀವನ ಪದ್ಧತಿ

[13]ಕಾಲು ತೊಳೆದು ಬಾಯಿ ತೊಳೆದು
ಅಕ್ಕಿಯ ಥಳಿಸಿ ಪಾಕವ ಮಾಡಿ ಕೈಯೆತ್ತಿ ನೋಡುತ್ತಿರ್ದೆನು.
ಕಸ ಮಣ್ಣು ಹರಳ ತೆಗೆದೊಗೆದು
ರಸನೆಗಿಕ್ಕದ ಸಕ್ಕರಡ ಹಾಲುಗೂಡಿ
ಸಸಿನೆ ಬಾಗಿ ಭಾವಿಸುತಿರ್ದೆ ಎಲೆ ಅಕ್ಕ.
ನೀನೆನಗೆ ವಶಗತ ಮಾಡಿದರೆ ಶಶಿಧರನೊಲಿವ
ನಮ್ಮ ಗುರುನಿರಂಜನ ಚನ್ನಬಸವಲಿಂಗ ಕಾಣೆಯಕ್ಕಾ.[13]

ಸಂಗನ ಬಸವಯ್ಯ–ಸ.ವ.ಸಂ–12, ವಚನ 171, ಪುಟ 51.

'ಎಂ. **ಅಬ್ದುಲ್ ರೆಹಮಾನ್ ಪಾಷ** ರವರು ದೃಷ್ಟಾಂತದ ಮೂಲಕ ನಂಬಿಕೆ ಮತ್ತು ಮೂಢನಂಬಿಕೆ ಕುರಿತು ವೈಜ್ಞಾನಿಕ ಆಲೋಚನೆ ನೀಡಿದ್ದಾರೆ. ಒಂದು ಕಾಲೇಜಿನಲ್ಲಿ ವೈಜ್ಞಾನಿಕ ಮನೋವೃತ್ತಿಯ ಕುರಿತು ಉಪನ್ಯಾಸ ನೀಡುತ್ತಿದ್ದೆ. ಸುಮಾರು ನೂರು ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರಿದ್ದರು. ಆರಂಭದಲ್ಲಿಯೇ ನಾನು, **'ನಿಮ್ಮಲ್ಲಿ ಒಂದಿಲ್ಲ ಒಂದು ರೀತಿ ನಂಬಿಕೆ ಇದೆ ಎಂದು ಭಾವಿಸುವವರು ಕೈ ಎತ್ತಿ'** ಎಂದೆ. ಒಟ್ಟಿಗೇ ಎಲ್ಲರೂ ಕೈಯೆತ್ತಿದರು. ಎಲ್ಲರಿಗೂ ಒಂದಿಲ್ಲ ಒಂದು ಬಗೆಯ ನಂಬಿಕೆ ಇದ್ದವು. ಮುಂದುವರೆದು, **'ನಿಮ್ಮಲ್ಲಿ ಒಂದಿಲ್ಲ ಒಂದು ರೀತಿ ಮೂಢನಂಬಿಕೆ ಉಳ್ಳವರು ಕೈಎತ್ತಿ'** ಎಂದೆ. ಹೆಚ್ಚು ಜನ ಕೈ ಎತ್ತಲಿಲ್ಲ. ಕೆಲವರು ಆಚೆ ಈಚೆ ನೋಡುತ್ತಾ ಕೈಎತ್ತಬೇಕೋ ಬೇಡವೋ ಎಂದು ಅನುಮಾನಿಸುತ್ತಿದ್ದುದು ಕಂಡಿತು. ಕೈ ಎತ್ತದೇ ಇದ್ದವರ ಖಚಿತ ಅಭಿಪ್ರಾಯ, **'ನಮ್ಮಲ್ಲಿ ನಂಬಿಕೆಗಳಿವೆಯೇ**

ವಿಸಃ ಮೂಢನಂಬಿಕೆಗಳಿಲ್ಲ' ಎಂದು. ಎಂದರೆ ಯಾರೂ ತಮ್ಮಲ್ಲಿರುವ ನಂಬಿಕೆಗಳನ್ನು **'ಮೂಢ'** ಎಂದು ಭಾವಿಸುವುದೇ ಇಲ್ಲ ಎಂಬುದು ಸ್ಪಷ್ಟವಾಯಿತು. ಅಷ್ಟೇ ಅಲ್ಲ, ಅದರಲ್ಲಿ ಹೆಚ್ಚಿನವರು (ಆಮೇಲೆ ಉಪನ್ಯಾಸ ಮುಂದುವರಿದ ಮೇಲೆ ತಿಳಿಯಿತು) ತಮಗಿರುವ ಹಲವಾರು ನಂಬಿಕೆಗಳಿಗೆ **'ವೈಜ್ಞಾನಿಕ'** ಕಾರಣಗಳನ್ನೂ ಹುಡುಕಿಕೊಂಡಿದ್ದರೂ ಕೂಡ. ಮೂಢನಂಬಿಕೆ ಎಂದರೆ ಯಾವುದು ಎಂಬುದನ್ನು ಈ ಕೆಳಗಿನ ವಚನ ಸ್ಪಷ್ಟವಾಗಿ ನಿರೂಪಿಸುತ್ತದೆ. ͨ

> **[14]ಪೂಜಿಸಿ ಕಾಬುದು ಗುರುವಿನ ಭೇದ, ಧ್ಯಾನಿಸಿ ಕಾಬುದು ಲಿಂಗದ ಭೇದ,**
> **ಉಭಯದಲ್ಲಿ ನಿಂದು ವಿಚಾರಿಸಿ ಕಾಬುದು ಜಂಗಮದ ಭೇದ**
> **ಜ ಎಂದಲ್ಲಿ ಜನನ ನಾಸ್ತಿ, ಗ ಎಂದಲ್ಲಿ ಗಗನ ನಾಸ್ತಿ,**
> **ಮ ಎಂದಲ್ಲಿ ಮರಣ ನಾಸ್ತಿ, ತ್ರಿವಿಧ ನಾಸ್ತಿಯಾಗಿ ನಿಂದುದು,**
> **ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ನಿಲವು.[14]**
>
> **ಶಿವಲೆಂಕಮಂಚಣ್ಣ – ಸ.ವ.ಸಂ–9, ವಚನ ಸಂಖ್ಯೆ –9, ಪುಟ –57**

ಈ ಮೇಲಿನ ವಚನದ ಆಧಾರದ ಮೇಲೆ ಈ ಕೆಳಕಂಡಂತೆ ಮೂಢನಂಬಿಕೆಯ ವ್ಯಾಖ್ಯಾನವನ್ನು ಗ್ರಹಿಸಬಹುದು.

- **ಮೂಡನಂಬಿಕೆ ಎಂದರೇನು ಎಂದು ಕೇಳಿದರೆ ಒಬ್ಬೊಬ್ಬರು ಒಂದೊಂದು ವ್ಯಾಖ್ಯೆಯನ್ನು ನೀಡುತ್ತಾರೆ; ಹೀಗಾಗಿ ಪ್ರತಿಯೊಬ್ಬರೂ ತಮ್ಮ ನಂಬಿಕೆಗಳನ್ನು ಶ್ರದ್ಧೆ ಎಂದು ಭಾವಿಸುತ್ತಾ, ಇನ್ನಿತರ ನಂಬಿಕೆಗಳನ್ನು ಮೂಢನಂಬಿಕೆ ಎಂದು ಪ್ರತಿಪಾದಿಸುತ್ತಾರೆ.**
- **ನಾಸ್ತಿಕರು ಎಂದು ಹೇಳಿಕೊಳ್ಳುವವರು ಆಸ್ತಿಕರ ಎಲ್ಲ ಬಗೆಯ ನಂಬಿಕೆಗಳನ್ನು ಮೂಢನಂಬಿಕೆ ಎಂದು ಕರೆಯುತ್ತಾರೆ.**
- **ಆಸ್ತಿಕರಲ್ಲಿಯೂ ಕೂಡ ಇತರ ದೇವರನ್ನು ನಂಬುವವರ, ಇತರ ಧರ್ಮಗಳು ವಿಧಿಸಿದ ನಂಬಿಕೆಗಳನ್ನು ಮೂಢನಂಬಿಕೆ ಎಂದು ಕರೆಯುತ್ತಾರೆ.**
- **ಒಂದೇ ಧರ್ಮಕ್ಕೆ ಸೇರಿದವರಾಗಿದ್ದರೂ, ತಮ್ಮ ಸುತ್ತಮುತ್ತ ಆಚರಣೆಯಲ್ಲಿರುವುದಕ್ಕಿಂತ ಭಿನ್ನವಾದ ಧಾರ್ಮಿಕ ಆಚರಣೆಗಳನ್ನು ಮೂಢನಂಬಿಕೆ ಎಂದು ಕರೆಯುತ್ತಾರೆ.**

ಇದು ವಾಸ್ತವ. ಆದರೆ ಕಲ್ಪನೆಯ ಕತೆ ಬೇರೆ. ಮನುಷ್ಯನ ಕಲ್ಪನೆ ಇಂತ ಪ್ರಕೃತಿನಿಯಮಗಳನ್ನು ಮೀರಿ ಹಾರಾಡಬಹುದು; ಕಲ್ಪನೆಯ ಸಾಮ್ರಾಜ್ಯದಲ್ಲಿ ನಾವು ಅಂದುಕೊಂಡದ್ದೇ ನಿಜ. ತೊಂದರೆಯಿಲ್ಲ. ಆದರೆ, ನೈಜ, ಭೌತಿಕ ಜಗತ್ತಿನಲ್ಲಿ ನಡೆಯುವ ವಿದ್ಯಮಾನಗಳನ್ನು ಅದರದೇ ಆದ ನಿಯಮಗಳ ಆಧಾರದ ಮೇಲೆ ತಿಳಿದುಕೊಳ್ಳದೇ ನಾವು ಅವುಗಳನ್ನು ನಮ್ಮ ಭಾವನೆ, ಕಲ್ಪನೆಗಳ ಚೌಕಟ್ಟಿನಲ್ಲಿ ತಿಳಿದುಕೊಳ್ಳಲು ಸಾಧ್ಯ. ಯಾವುದು ಪ್ರಕೃತಿಯ ನಿಯಮಗಳಿಗೆ ಬದ್ಧವಾಗಿರುವುದಿಲ್ಲವೋ ಅಂಥ ಸಂಗತಿ, ಸನ್ನಿವೇಶ, ಪರಿಕಲ್ಪನೆಗಳಲ್ಲಿ ಇಟ್ಟುಕೊಂಡಿರುವ ನಂಬಿಕೆಯನ್ನು ನಾವು **'ಮೂಢನಂಬಿಕೆ'** ಎಂದು ಭಾವಿಸುತ್ತೇವೆ.

ನಂಬಿಕೆ ಮತ್ತು ಮೂಢನಂಬಿಕೆ ಸಂಬಂಧಿಸಿದಂತೆ ವಚನಕಾರರು

- **ಪಂಚಸೂತಕ**
- **ಅಶುದ್ಧತತ್ತ್ವ**
- **ಕಾಯ**
- **ಕಾಯಕ**
- **ದಾಸೋಹ**
- **ಜಂಗಮ ದಾಸೋಹ**

ಈ ಪರಿಕಲ್ಪನೆಗಳೊಂದಿಗೆ ವೈಜ್ಞಾನಿಕ ಚಿಂತನೆಗಳನ್ನು ನೀಡುತ್ತಾರೆ.

[15]ಮೂರೊಲಿಯ ಬೆಂಕಿಯ ಹಚ್ಚಲೊಲ್ಲದೆ ಊರು ಸುಡದು.
ಊರು ಸುಟ್ಟಲ್ಲದೆ ಕೇರಿಯವರು ಸಾಯರು.
ಕೇರಿಯವರು ಸತ್ತಲ್ಲದೆ ಪರಿಜನರು ತಿರುಗರು.
ಪರಿಜನರು ತಿರುಗಲಲ್ಲದೆ ಶ್ರದ್ಧೆ ನೆಲೆಗೊಳ್ಳದು.
ಶ್ರದ್ಧೆ ನೆಲೆಗೊಂಡಲ್ಲದೆ ಗುರುನಿರಂಜನ ಚನ್ನಬಸವಲಿಂಗವನರಿಯಬಾರದು.[15]

ಸಂಗನ ಬಸವಯ್ಯ – ಸಂ.ವ.ಸಂ. ವಚನ 169, ಪುಟ–51.

ವಚನಕಾರರ ನಂಬಿಕೆಗಳಲ್ಲಿ **ಪಂಚಸೂತಕ** ಪ್ರಭಾವ ಪೂರ್ಣ ನಂಬಿಕೆಯಾಗಿರುವುದರಿಂದ ವಚನಗಳಲ್ಲಿಯೇ ಅವರ ವಿವರಣೆಗಳು ದೊರಕುತ್ತವೆ.

1. **ಪಂಚಸೂತಕ :** ಸಾಂಪ್ರದಾಯಿಕ ಹಿಂದೂಗಳು (ಲಿಂಗಾಯತರೂ ಸೇರಿ) ಐದು ಸೂತಕಗಳನ್ನು ಪಾಳಿಸುತ್ತಾರೆ. ಅವೆಂದರೆ : ಜನನಸೂತಕ, ಕುಲಸೂತಕ, ರಜಃ ಸೂತಕ, ಎಂಜಲ ಸೂತಕ ಮತ್ತು ಪ್ರೇತ ಸೂತಕ. ಶಿಶು ಜನನವಾದವರನ್ನು ಸೂತಕ ಕಳೆಯುವವರೆಗೆ ಮುಟ್ಟಿಸಿಕೊಳ್ಳಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ಜನನ ಸೂತಕ; ಬೇರೆ ಜಾತಿಯವರನ್ನು ಮುಟ್ಟಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ಕುಲಸೂತಕ, ರಜಸ್ವಲೆಯಾದವಳನ್ನು ಮುಟ್ಟಬಾರದು ಮತ್ತು ಅವರು ಮುಟ್ಟಿದುದನ್ನು ನಾವು ಮುಟ್ಟಬಾರದು ಎಂಬುದು ರಜಃ ಸೂತಕ, ಒಬ್ಬರು ತಿಂದು ಉಳಿದುದನ್ನು ತಿನ್ನಬಾರದು ಎಂಬುದು ಎಂಜಲ ಸೂತಕ, ಸತ್ತವರ ಮನೆಯಲ್ಲಿರುವವರನ್ನು ಮುಟ್ಟಬಾರದು ಮತ್ತು ಅವರು ಮುಟ್ಟಿದುದನ್ನು ತಿನ್ನಬಾರದು ಎಂಬುದು ಪ್ರೇತಸೂತಕ, ಆದರೆ ನಿಜವಾದ ಭಕ್ತನು ಇವುಗಳನ್ನು ಆಚರಿಸಬಾರದು ಎಂಬುದು ಚೆನ್ನಬಸವಣ್ಣನವರ ಆದೇಶ.

[16]ವಾಸದ ದೀಪಕ್ಕೆ ವಾಯು ವಿರೋಧವಲ್ಲದೆ
ಮಹಾಹೇತುವಿನ ವಹ್ನಿಗೆ ಅದು ಪ್ರೀತಿಯ ಸಂಗ,
ನೀತಿಯಲ್ಲಿ ನಡೆವನ ವಿರಕ್ತಿ, ಭಕ್ತಿ ಕುಲ ಅಜಾತಂಗೆ ಸಂಗ,
ಮಿಕ್ಕಾದ ದೂಷಣದ ಅಪಸರೆಯ ಮರ್ತ್ಯರ ವಿರೋಧ.
ಇಂತೀ ದ್ವಯ ಬೇಧದಲ್ಲಿ ಅರಿದು ನಿಂದ
ಪರಮಪರಿಣಾಮಿಗೆ ಸ್ತುತಿ ನಿಂದೆಯೆಂಬುದಿಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಸ್ವಯಂಭುವಾದವಂಗೆ.[16]

ಶಿವಲೆಂಕಮಂಚಣ್ಣ ಸಂ.ವ.ಸಂ.9 ವಚನ ಸಂಖ್ಯೆ –180, ಪುಟ –65

2. **ಅಶುದ್ಧತತ್ವ:** ಭೋಗಸಾಧನವಾಗಿರುವ ಪಂಚಭೂತಗಳು, ಪಂಚತನ್ಮಾತ್ರೆಗಳು, ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಅಂತಃಕರಣಚತುಷ್ಟಯ ಎಂಬ ಇಪ್ಪತ್ತುನಾಲ್ಕು ಗುಣಗಳ ಸಮೂಹ : ಭೂಮಿಯೊಳು ಭೂತಾದಿಯೈದು ತನ್ಮಾತ್ರೆಗಳ ನಾಮವೈದಾಲಸದ್‌ಜ್ಞಾನೇಂದ್ರಯಗಳೈದು ಮಗನೆ ಕರ್ಮೇಂದ್ರಿಯಂಗಳೈದಂತಕಃಕರಣ ಚತುಷ್ಟಯವಿವೊಂದಿ ಇಪ್ಪತ್ತುನಾಲ್ಕು ತತ್ತ್ವಂಗಳಾತ್ಮ ಸುತತ್ವಮಪ್ಪವುಮಶುದ್ಧತತ್ವವದ್ಯೆದು ಭೋಗ್ಯವೆಂದಪ್ಪ ಪೆಸರಿನ್ನು (ವೀಶೈಪು.೬–೯೬–೨೭)

[17]ಕಾಯಸೂತಕವಳಿದು ಜೀವದ ಭವ ಹಿಂಗಿ,
ಜ್ಞಾನಗುರು ಕೊಟ್ಟ ಭಾವದ ಲಿಂಗವಿರೆ,
ಮತ್ತೇನನು ನೋಡಲೇಕೆ?
ಗಂಡನುಳ್ಳವಳಿಗೆ ಮತ್ತೊಬ್ಬ ಬಂದಡೆ ಚಂದವುಂಟೆ?
ಅದರಂಗ ನಿಮಗಾಯಿತ್ತು.
ಲಿಂಗವಿದ್ದಂತೆ ಜೀವಿಗಳ ಅಂಗವ ನೋಡಿ
ಬದುಕಿಹೆನೆಂಬ ಭಂಡರಿಗೇಕೆ?
ಗುಡಿಯ ಗುಮ್ಮಟನಾಥನಲ್ಲಿ ಅಗಮ್ಯೇಶ್ವರಲಿಂಗ
ಅವರ ಬಲ್ಲನಾಗಿ ಒಲ್ಲ.[17]

ಮನುಮುನಿಗುಮ್ಮಟದೇವ– ಸ.ವ.ಸಂ.8 ವಚನ 1037 ಪುಟಸಂಖ್ಯೆ (351)

3. ಕಾಯ : ಕಾಯವನ್ನು ಅಂಗ ಒಡಲು ಎಂದು ವಚನಕಾರರು ಪ್ರಸ್ತಾಪಿಸುತ್ತಾರೆ.

[18] ಕಂಗಳ ಸೂತಕ ಹಿಂಗಿಯಲ್ಲದೆ ಭಕ್ತನಾಗಬಾರದು.
ಕಾಯದ ಸೂತಕ ಹಿಂಗಿಯಲ್ಲದೆ ಮಾಹೇಶ್ವರನಾಗಬಾರು.
ಮನದ ಸೂತಕ ಹಿಂಗಿಯಲ್ಲದೆ ಪ್ರಸಾದಿಯಾಗಬಾರು.
ಜ್ಞಾನದ ಸೂತಕ ಹಿಂಗಿಯಲ್ಲದೆ ಪ್ರಾಣಲಿಂಗಿಯಾಗಬಾರು.
ತೋರಿ ಅಡಗುವ ಭ್ರಾಂತು ಹಿಂಗಿಯಲ್ಲದೆ ಶರಣನಲ್ಲ, ಐಕ್ಯನಲ್ಲ,
ಅರಡಗಿ ಮೂರರಲ್ಲಿ ಮುಗ್ಧನಾಗಿ,
ಮೀರಿ ಕಾಬುದಕ್ಕೆ ಏನೂ ಇಲ್ಲದೆ, ಅದು ತಾನೆ ಯೋಗಲಿಂಗಾಂಗ,
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗದಲ್ಲಿ
ಐಕ್ಯವಾದ ಶರಣಂಗೆ. [18]

ಮನುಮುನಿ ಗುಮ್ಮಟದೇವ – ಸ.ವ.ಸಂ–8, ವಚನ 1030 ಪುಟ ಸಂಖ್ಯೆ 349

4. **ಕಾಯಕ : ಸಮರ್ಪಣಭಾವದಿಂದ ಮಾಡುವ ಕೆಲಸ; ಶಿವಾರ್ಪಣೆಗಾಗಿಯೇ ಮಾಡುವ ಕಾರ್ಯ** ಎನ್ನುವ ನಂಬಿಕೆ.

> [19] **ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ,**
> **ರಸವ ಹಡೆಯಲು ಬಾರದು,**
> **ಮಳಲಿ ಹೊಸೆದಡೆ ಹೊಸೆದಂತಲ್ಲದೆ,**
> **ಸರವಿಯ ಹಡೆಯಲುಬಾರದು,**
> **ನೀರ ಕಡೆದಡೆ ಕಡೆದಂತಲ್ಲದೆ,**
> **ಬೆಣ್ಣೆಯ ಹಡೆಯಲುಬಾರದು.**
> **ನಮ್ಮ ಕೂಡಲಸಂಗಮದೇವನಲ್ಲದೆ**
> **ಅನ್ಯದೈವಕ್ಕೆರಗಿದಡೆ**
> **ಹೊಳ್ಳ ಕುಟ್ಟಿ ಕೈ ತೊಟ್ಟೆಯಾದಂತೆ ಆಯಿತ್ತಯ್ಯಾ** [19]

ಬಸವಣ್ಣ ಸ.ವ.ಸಂ–1, ವಚನ ಸಂಖ್ಯೆ –27, ಪುಟ –137.

5. **ದಾಸೋಹ:** : ಅಹಂಕಾರವಳಿದು ತನ್ನ ತನು, ಮನ, ಧನಗಳನ್ನು ಗುರು ಲಿಂಗ ಜಂಗಮಗಳಿಗೆ ಸಮರ್ಪಿಸಿ ಮಾಡುವ ಸೇವೆ; ಗುರುಲಿಂಗಜಂಗಮಗಳಿಗೆ ದಾಸಭಾವನೆಯಿಂದ ಮಾಡುವ ಸೇವೆಯನ್ನು ದಾಸೋಹ ಎಂದು ಕರೆಯುತ್ತಾರೆ.

ಕೈಂಕರ್ಯ : ದಾಸೋಹ ಎಂಬುವುದು ವಿತರಣೆಯ ಸಂಕೇತ

ದಾಸೋಹಂ : 'ನಾನು ದಾಸ' ನೆಂಬ ಭಾವನೆ.

ದಾಸೋಹಂಭಾವ : ತಾನು ಸೇವಕನೆಂಬ ಭಾವನೆ; ಕಿಂಕರಭಾವ :

ದಾಸೋಹತನ : ಸೇವೆ ಮಾಡುವ ಕಾಯಕ; ಕೈಂಕರ್ಯವೃತ್ತಿ :

ದಾಸೋಹ ಪ್ರತಿಷ್ಠಾಸ್ಥಲ : ನೂರೊಂದು ಸ್ಥಲಗಳಲ್ಲಿ ಒಂದು; ಗುರು ಲಿಂಗ ಜಂಗಮಗಳನ್ನು ಸೇವಿಸದೆ ಬದುಕುವುದು ವ್ಯರ್ಥವೆಂಬುದನ್ನು ನಿರೂಪಿಸುವ ಸ್ಥಲ :

ದಾಸೋಹಿ : ದಾಸಭಾವದಿಂದ ಗುರು ಲಿಂಗ ಜಂಗಮಗಳ ಸೇವೆಯಲ್ಲಿ ನಿರತನಾಗಿರುವವನು; ಕಿಂಕರಭಾವವುಳ್ಳವನು ಎನ್ನುವ ಅರ್ಥವಿದ್ದರೂ ನಂಬಿಕೆಗಳಿಗೆ ದಾಸ ಎಂಬ ಭಾವನೆ ಇಲ್ಲಿ ಮುಖ್ಯ ಎಂಬುವುದನ್ನು ಈ ವಚನ ತಿಳಿಸುತ್ತದೆ.

> [20]**ಅಯ್ಯಾ, ಎನ್ನ ತನುಶುದ್ಧವ ಕಂಡು ಸೇವೆಯ ಕೊಳ್ಳಯ್ಯಾ**
> **ಲಿಂಗಯ್ಯಾ, ಎನ್ನ ಮನಶುದ್ಧವ ಕಂಡು ಪೂಜೆಯ ಕೊಳ್ಳಯ್ಯಾ**
> **ಸಂಗಯ್ಯಾ, ಎನ್ನ ಪ್ರಾಣಶುದ್ಧವ ಕಂಡು ದಾಸೋಹವ ಕೊಳ್ಳಯ್ಯಾ.**
> **ಎಲೆ ಅಯ್ಯಾ, ಎನ್ನ ಭಾವಶುದ್ಧವ ಬಂದು ಕೂಡಯ್ಯಾ.**
> **ಗುರುನಿರಂಜನ ಚನ್ನಬಸವಲಿಂಗಯ್ಯಾ ತಪ್ಪೆನ್ನದು ತಪ್ಪೆನ್ನದು.**[20]

ಸಂಗನ ಬಸವಯ್ಯ ಸ.ವ.ಸಂ–12, ವಚನ 170, ಪುಟ 51.

6. ಷಟ್ಸ್ಥಲ : ಭಕ್ತನು ಸಾಧಿಸಬೇಕಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಮುಕ್ತಿಮಾರ್ಗದ ಆರು ಹಂತಗಳ ಬಗ್ಗೆ ನಂಬಿಕೆ ಇರುವ ವಚನಕಾರರು ಮನಸ್ಸಿನ ನಿಗ್ರಹದ ಬಗ್ಗೆ ತಿಳಿಸುತ್ತಾರೆ.

[21]ಮತ್ತಮಾ ಚಿರಂನಿರ್ವಾಣದೀಕ್ಷೆಯು, ಆಜ್ಞಾದೀಕ್ಷೆಯು, ಉಪಮಾದೀಕ್ಷೆ ಸ್ವಸ್ತಿಕಾರೋಹಣ್, ವಿಭೂತಿಯಪಟ್ಟ, ಕಲಶಾಭಿಷೇಕ, ಲಿಂಗಾಯಿತ, ಲಿಂಗ ಸ್ವಾಯತಗಳೆಂದು ಏಳು ಪ್ರಕಾರವು, ಅವರೊಳ ಗುರುವಿನಾಜ್ಞಾಪಾಲನದಲ್ಲಿ ಸಮರ್ಥವಾದದು ಅಜ್ಞಾದೀಕ್ಷೆ ಎನಿಸಿಕೊಂಬುದು, ಪುರಾನತರುಗಳ ಸಮಯಾ ಚಾರಕ್ಕೆ ಸದೃಶವಾದುದು ಉಪಮಾದೀಕ್ಷೆ ಸ್ವಸ್ತಿಕವೆಂಬ ಮಂಡಲದ ಮೇಲೆ ಶಿಷ್ಯ ನ ಕುಳ್ಳರಿಸಿ, ಮಂತ್ರನ್ಯಾಸಮಂ ಮಾಡಿ, ಮಂತ್ರ ಪಿಂಡವಾಗಿ ಮಾಡುವದು ಸ್ವಸ್ತಿ ಕಾರೋಹಣ, ಆಗಮೋಕ್ತಸ್ಥಾನಂಗಳಲ್ಲಿ ತತ್ತನ್ಮಂತ್ರಂಗಳಿಂ ವಿಭೂತಿಧಾರಣವು ವಿಭೂತಿಯಪಟ್ಟ, ಪಂಚಕಲಶಂಗಳಲ್ಲಿ ತೀರ್ಥೋದಕಗಳಂ ತುಂಬಿ ಶಿವಕಲಾ ಸ್ಥಾಪನ ಮಾಡಿ, ಆ ಕಲಶೋದಕಂಗಳಿಂ ಶಿಷ್ಯಂಗೆ ಸ್ನಪದವಂ ಮಾಡೂದು ಕಲ ಶಾಭಿಷೇಕ ಆಚಾರ್ಯನು ಶಿಷ್ಯರಿಗೆ ಉಪದೇಶಿಸಲ್ತಕ್ಕೆ ಲಿಂಗಮಂ ತಾನು ಅರ್ಚನೆ ಯಂ ಮಾಡಿ, ಶಿಷ್ಯನಂ ನೋಡಿಸುವುದು ಲಿಂಗಾಯತವೆನಿಸಿಕೊಂಬುದು ಆ ಶ್ರೀಗುರುನಾಥನಿಂದುಪದಿಷ್ಟವಾದ ಪ್ರಾಣಲಿಂಗವನು ಶಿಷ್ಯನು ಭಕ್ತಿಯಿಂ ಸ್ವೀಕ ರಿಸಿ, ತನ್ನ ಉತ್ತಮಾಂಗಾದಿ ಸ್ಥಾನಂಗಳಲಿ ಧರಿಸೂದು ಲಿಂಗಸ್ವಾಯತವೆನಿಸಿಕೊಂ ಬುದು, ಇಂತೆಂದುಕಾಮಿಕಂ ಪೇಳೂದಯ್ಯ, ಶಾಂತವೀರಪ್ರಭುವೆ. [21]

ಶಾಂತವೀರೇಶ್ವರ – ಸಂ.ವ.ಸಂ. 9 ವಚನ ಸಂಖ್ಯೆ –1378, ಪುಟ –519

ಈ ಮೇಲಿನ ನಂಬಿಕೆ, ಮೂಢನಂಬಿಕೆಗಳ ಸಂಬಂಧಾಂತರದಲ್ಲಿ ವಚನಕಾರರು ಗುರುತಿಸಿರುವ ನಂಬಿಕೆಗಳನ್ನು ಈ ಕೆಳಕಂಡಂತೆ ಕಾಣಬಹುದು.

ವಚನಕಾರರು ಮೂಢನಂಬಿಕೆಗಳನ್ನು ಪ್ರತಿರೋಧಿಸಿದ್ದು ತಮ್ಮದೇ ಆದ ಸರಳ ನಂಬಿಕೆಗಳ ಮೂಲಕ. ಆ ಸರಳ ನಂಬಿಕೆಗಳು ಹೀಗಿವೆ. ಈ ನಂಬಿಕೆ ಇರುವುದರಿಂದಲೇ ಮೂಢನಂಬಿಕೆಗಳು ಇರುತ್ತವೆ.

1. ಕಂಠಸ್ಥ (ಮೌಖಿಕ)
2. ಸಮೂಹ ಪುನರ್‌ಸೃಷ್ಟಿ
3. ವ್ಯಾಪಕತೆ
4. ಸಜೀವತನ
5. ಸರಳತೆ
6. ಸ್ಪಷ್ಟತೆ
7. ಪರಿವರ್ತನಾ ಶೀಲತೆ
8. ವಿಶ್ವಾತ್ಮಕತೆ (ವಿಶ್ವಮೌಲಿಕತೆ)
9. ಸರ್ವ ಸಾಮಾನ್ಯರ ಬಳಕೆ
10. ಎಲ್ಲರ ಒಪ್ಪಿಗೆ




ವಚನಕಾರರು ಮೂಢನಂಬಿಕೆಗಳ ಪ್ರತಿರೋಧಕ್ಕಾಗಿ ರೂಪಿಸಿಕೊಂಡ ಚೌಕಟ್ಟುಗಳು ಈ ಕೆಳಗಿನಂತಿವೆ.

ವಚನಕಾರರ ನಂಬಿಕೆಗಳು: 1) ಕಾಯಕ 2) ದಾಸೋಹ 3) ಷಟ್‌ಸ್ಥಲ 4) ಅಷ್ಟಾವರಣ 5) ಪಂಚೀಕರಣ

[22] ಭಕ್ತ ಜಂಗಮದ ಷಟ್‌ಸ್ಥಲದ,
ಸಕೀಲ ಸಂಬಂಧವನಾರು ಬಲ್ಲರು ಹೇಳಾ,
ಅದೇನು ಕಾರಣವೆಂದರೆ
ಹಸಿವುಳ್ಳವ ಭಕ್ತನಲ್ಲ
ವಿಷಯವುಳ್ಳವ ಮಹೇಶ್ವರನಲ್ಲ
ಆಸೆವುಳ್ಳವ ಪ್ರಸಾದಿಯಲ್ಲ
ಜೀವಗುಣವುಳ್ಳವ ಪ್ರಾಣಲಿಂಗಿಯಲ್ಲ
ತನಗುಣವುಳ್ಳವ ಶರಣನಲ್ಲ
ಜನನ – ಮರಣವುಳ್ಳವ ಐಕ್ಯನಲ್ಲ
ಈ ಆರರ ಅರಿವಿನ ಅರ್ಥದ, ಸಂಪತ್ತಿನ
ಭೋಗ ಹಿಂಗಿದರೆ, ಸ್ವಯಂಜಾತನೆಂದೆ,
ಆ ದೇಹ ನಿಜದೇಹವೆಂಬೆ
ಆ ದೇಹ ಗುರು ಗುಹೇಶ್ವರನೆಂಬೆ[22]

ಅಲ್ಲಮ್ಮಪ್ರಭು ಸ.ವ.ಸಂ.–2, ವಚನ ಸಂಖ್ಯೆ 1406, ಪುಟ ಸಂಖ್ಯೆ 152.



ಈ ಮೇಲಿನ ಎಲ್ಲಾ ಅಂಶಗಳ ಮೂಲಕ ನಂಬಿಕೆಯ ನಿಲುವಿಗೆ ಸ್ಪಷ್ಟ ಸಮರ್ಥನೆಯನ್ನು ತಾವು ನಂಬಿದ ನಂಬಿಕೆಗಳು ಸಾರ್ವಕಾಲಿಕ ಸತ್ಯ ಎಂದು ನಿರೂಪಿಸುತ್ತಾರೆ.

ಕೊನೆ ಟಿಪ್ಪಣಿ

1. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 1001, ಪುಟ ಸಂಖ್ಯೆ 340.
2. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 233, ಪುಟ – 70.
3. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 18, ಪುಟ – 5.
4. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 855, ಪುಟ – 255.
5. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 150, ಪುಟ – 45.
6. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 171, ಪುಟ – 51.
7. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ – ಪುಟ – 59.
8. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 169, ಪುಟ – 51.
9. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –180, ಪುಟ – 65.
10. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 1037, ಪುಟ ಸಂಖ್ಯೆ 351.
11. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 1030, ಪುಟ ಸಂಖ್ಯೆ 349.
12. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 170, ಪುಟ – 51.
13. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –1378, ಪುಟ – 519.
14. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲುಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವರ್ಷ –2001, ವಚನ ಸಂಖ್ಯೆ –838, ಪುಟ – 215.
15. **ಸಮಗ್ರ ವಚನ ಸಂಪುಟ –2,** ಸಂಪಾದಕ **ಡಾ. ಬಿ.ವಿ. ಮಲ್ಲಾಪುರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ವರ್ಷ –2001, ವಚನ ಸಂಖ್ಯೆ – 1406, ಪುಟ –152.

ಅಧ್ಯಾಯ : ೪

ವಚನಗಳು ಮತ್ತು ಮೂಢನಂಬಿಕೆ

ಅಧ್ಯಾಯ – ೪

ವಚನಗಳು ಮತ್ತು ಮೂಢನಂಬಿಕೆಗಳು

ವಚನಗಳು ಮತ್ತು ಮೂಢನಂಬಿಕೆ ಈ ಅಧ್ಯಾಯದಲ್ಲಿ ಶಿವಲೆಂಕಮಂಚಣ್ಣ, ಸಂಗನ ಬಸವಯ್ಯ, ಜಿಬ್ಬಿಬಾಚಯ್ಯ, ಮನುಮುನಿಗುಮ್ಮಟದೇವ, ಬಹುರೂಪಿಚೌಡಯ್ಯ, ಇವರ ವಚನಗಳಾಧಾರಿತ ನಂಬಿಕೆ, ಮೂಢನಂಬಿಕೆಗಳ ವ್ಯಾಖ್ಯೆ, ವ್ಯಾಖ್ಯಾನಗಳೊಂದಿಗೆ ಅಧ್ಯಯಿಸಲಾಗಿದೆ.

[23]ಪೂಜೆ ಅರತಲ್ಲಿ, ಎಲೆ ಉದುರಿದ ವೃಕ್ಷ ಉಲುಹಡಗಿದಂತಿರಬೇಕು,
ಜಲವಿಲ್ಲದ ತಟಾಕದ ಕೆಳೆಯಲ್ಲಿ, ಬೆಳೆಯ ಬಿತ್ತಿದಂತಿರಬೇಕು,
ವಾರಣಾಶಿದ ಕುಂಬದಲ್ಲಿ, ವಾರಿಯ ತುಂಬಿಸದಂತಿರಬೇಕು
ಬಯಲ ಬಡಿವಡೆದ ಪಾಣಿ ಅಸಿಯಂತಿರಬೇಕು,
ಸುರಚಾಪದಂತೆ, ಮಾರುತ ಧ್ವನಿಯಂತೆ,
ನಾಮರೂಪಿಂಗೆ ಹೊರಗಾದ ಮತ್ತೆ, ಏನೂ ಎನಲಿಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆಂದೆನಲಿಲ್ಲ.[23]

ಶಿವಲೆಂಕಮಂಚಣ್ಣ– ಸಂ.ವ.ಸಂ 9. ವಚನ ಸಂಖ್ಯೆ –197. ಪುಟ –68

ಶಿವಲೆಂಕಮಂಚಣ್ಣ ಈ ವಚನದಲ್ಲಿ ಪೂಜೆ, ಪಾರ್ಥನೆ, ಹೋಮ, ಯಜ್ಞ, ಯಾಗ, ಹರಕೆ, ಇವುಗಳಿಗೆ ಸಂಬಂಧಿಸಿದಂತೆ **ಎನ್ನ ಹೃದಯಾಲಯದಲ್ಲಿ ಇವು ಯಾವುದಕ್ಕೂ ಸ್ಥಾನವಿಲ್ಲವೆನ್ನುತ್ತಾ ಇದಕ್ಕಾಗಿ ಮಾಡುವಂತಹ ದ್ರವ್ಯ, ಕೇಡು ಎನ್ನುತ್ತಾ** ಮೂಢನಂಬಿಕೆಯ ಬಗ್ಗೆ ವಿವರಿಸುತ್ತಾರೆ. (ಹಿರಿಯ ಶಿವಭಕ್ತ ಶಿವಲೆಂಕಮಂಚಣ್ಣನು ಪಂಡಿತ ವಂಶದವ, ವಚನಕಾರ ಹುರಿಲಿಂಗದೇವನ ಗುರುವಾದ ಈತ ಶಿವಾಧಿಕ್ಯವನ್ನು ಸಾರುತ್ತಾ ಪರವಾದಿಗಳನ್ನು ಜಯಿಸುತ್ತಾ ಹಲವಾರು ಕಡೆ ಸಂಚರಿಸಿದ. **ಮಂಚಣ್ಣನ ಮಹಿಮೆ ಹಾಗೂ ಪವಾಡಗಳು ಶಿವತತ್ವ ಚಿಂತಾಮಣಿ, ಚನ್ನಬಸವ ಪುರಾಣ, ಸಿಂಗಿರಾಜಪುರಾಣ** ಮೊದಲಾದ ಕೃತಿಗಳಲ್ಲಿ ಕಂಡುಬರುತ್ತದೆ. ಈತನ ವಚನಗಳ ಅಂಕಿತ **'ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ'** ಈತನ ವಚನಗಳಲ್ಲಿ **ಶಿವಶರಣರ ರೀತಿ–ನೀತಿ, ಅಷ್ಟಾವರಣ, ಷಟ್‌ಸ್ಥಲಗಳ** ನಿರೂಪಣೆಯಿದೆ).

ಪುರಾತನ ಕಾಲದಲ್ಲಿ ಮಾಟಗಾರರಿಗೆ ಸಮಾಜದಲ್ಲಿ ಉನ್ನತ ಮಟ್ಟದ ಸ್ಥಾನಮಾನವಿತ್ತು. ಕಾಯಿಲೆಗಳನ್ನು ಗುಣಪಡಿಸುವುದು, ಯುದ್ಧ, ಬೇಟೆಗಳಲ್ಲಿ ತೊಂದರೆಗಳು ಕಾಣಿಸಿಕೊಂಡರೆ ಅವುಗಳನ್ನು ನಿವಾರಿಸುವುದು ಇವರ ಪ್ರಮುಖ ಕಾರ್ಯಗಳಾಗಿದ್ದವು. ಜತೆಯಲ್ಲಿ ಚೆನ್ನಾಗಿ ಬೆಳೆ ಬಾರದಿದ್ದಾಗ, ಕಾಲಕ್ಕೆ ಸರಿಯಾಗಿ ಮಳೆ ಬಾರದಿದ್ದಾಗ, ನೆರೆ, ಬರಗಳ ಹಾವಳಿ ಎದ್ದಾಗ ಅವುಗಳನ್ನು ತಮ್ಮ ಮಾಂತ್ರಿಕ, ಶಕ್ತಿಯಿಂದ ಹೋಗಲಾಡಿಸುವ ಜವಾಬ್ದಾರಿಗಳಲ್ಲದೆ, ಭೂತ, ಪಿಶಾಚಿ, ಕೆಟ್ಟ ಶಕ್ತಿಗಳನ್ನು

ಹದ್ದುಬಸ್ತಿನಲ್ಲಿಡುವ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಇವೆಲ್ಲಾ ಉದ್ದೇಶಗಳಿಗೆ ಅವರು ಬಳಸುತ್ತಿದ್ದುದು ಮಾಯೆ, ಮಂತ್ರ, ತಂತ್ರ, ಕಣ್ಕಟ್ಟು, ಬಲಿ, ಪೂಜೆ, ಪ್ರಾರ್ಥನೆ ಮುಂತಾದ ಮಾಟಗಾರಿಕೆ ಕ್ರಮಗಳು ಇಡೀ ಜನಾಂಗದ ಆಗುಹೋಗುಗಳು ಈ ಮಾಟಗಾರರ ಕೈಯಲ್ಲಿದ್ದುದರಿಂದ ಇವರೇ ಜನಾಂಗಗಳ ಮುಖ್ಯಸ್ಥರೂ ಆಗಿರುತ್ತಿದ್ದರು. ಮಾನವನ ನಾಗರಿಕತೆ ಬೆಳದು ವಿಜ್ಞಾನ, ವೈದ್ಯಕೀಯ ಶಾಸ್ತ್ರ ಬಹಳಷ್ಟು ಪ್ರಗತಿ ಸಾಧಿಸಿದ್ದರೂ ಸಮಾಜದಲ್ಲಿ ಮಾಟಗಾರರ ಪ್ರಭಾವ ಇನ್ನೂ ಉಳಿದಿದೆ. ಈಗಲೂ ಹಲವು ಕುಗ್ರಾಮ, ಅಶಿಕ್ಷಿತ ಊರು, ಆದಿವಾಸಿ ಜನಾಂಗಗಳಲ್ಲಿ ಮನುಷ್ಯರ, ಪಶುಗಳ ರೋಗರುಜಿನಗಳನ್ನು ಗುಣಪಡಿಸಲು ಮಾಟಗಾರರ ಮೊರೆ ಹೋಗುವುದು ಇನ್ನೂ ಉಳಿದುಕೊಂಡಿದೆ. ಸಕಾಲದಲ್ಲಿ ಸೂಕ್ತ ವೈದ್ಯಕೀಯ ಶುಶ್ರೂಷೆ ದೊರಕದೆ, ಮಾಟಗಾರರು ನೀಡುವ ಉಪಚಾರಗಳಿಂದ ಎಷ್ಟೋ ಜೀವಹಾನಿಯಾದ ಉದಾಹರಣೆಗಳು ಹೇರಳವಾಗಿವೆ. ಈ ಮಾಟಗಾರರಲ್ಲಿ ಹಲವರು ಅರ್ಚಕರು, ಸ್ವಾಮಿಗಳು, ದೈವಪಾತ್ರಿಗಳು, ಜಗದ್ಗುರುಗಳು, ಬಾಬಾಗಳು ಮುಂತಾದ ಅವತಾರಗಳನ್ನು ತಳೆದು ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಇಂತಹವರು ಪಂಜುರ್ಲಿ, ಮರುಳ ಚಿಕ್ಕು, ನಾಗ ಮುಂತಾದ ದೈವಗಳು ತಮ್ಮ ಮೇಲೆ ಬರುತ್ತವೆ ಎನ್ನುತ್ತಲ್ತೋ, **ಪೂಜೆ, ಪ್ರಾರ್ಥನೆ, ಹರಕೆಗಳನ್ನು** ಪಡೆದು ರೋಗರುಜಿನಗಳನ್ನು ಗುಣಪಡಿಸುತ್ತೇವೆ ಅಂತಲೋ, ಮಳೆ, ಬೆಳೆಯ ಅಭಾವ ತೋರಿದಾಗ ತಮ್ಮ ಮಂತ್ರಶಕ್ತಿಯಿಂದ ಅದನ್ನು ನಿವಾರಿಸುತ್ತೇವೆ ಅಂತಲೋ, ಅಥವಾ ಬೇರೆಯವರಿಗೆ ಕೆಡಕು ಉಂಟು ಮಾಡುವ ಮಂತ್ರ, ತಂತ್ರ, ಮಾಟಗಳನ್ನು ಮಾಡಿಕೊಡುತ್ತೇವೆ ಎನ್ನುತ್ತಲ್ತೋ ಜನರ ಹುಂಬತನ, ಮೂಢತನವನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತಿದ್ದಾರೆ.

> **[24]ಮಾಟ ಕೂಟವ ಮಾಡುವನ್ನಬರ**
> **ಮನೆ ನಲಿದು, ತನು ಕರಗಿ ಮಾಡುವ ದ್ರವ್ಯಕ್ಕೆ**
> **ಕೇಡಿಲ್ಲದಂತೆ ಮಾಡುತ್ತಿಪ್ಪ ಭಕ್ತನ ಅಂಗವೆ**
> **ಎನ್ನ ಹೃದಯಾಲಯ,**
> **ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವು ಅಲ್ಲಿ ತಾನಾಗಿಪ್ಪನು.**[24]
>
> **ಶಿವಲೆಂಕಮಂಚಣ್ಣ– ಸಂ.ವ.ಸಂ 9, ವಚನ ಸಂಖ್ಯೆ –98, ಪುಟ –77**

ವಚನಕಾರರು ಹೇಳುವ ಅಂಶಗಳನ್ನು **ಪಂಚುಗಂಗೊಳ್ಳಿಯವರು ಮೂಢನಂಬಿಕೆಗಳು ವಿಶ್ವರೂಪ** ಎಂಬ ಪುಸ್ತಕದಲ್ಲಿ ಈ ವಿಚಾರವನ್ನು ಕೂಡ ಅನುಮೋದಿಸುತ್ತಾರೆ. ‘ಮಾಟಗಾರಿಕೆಯಲ್ಲಿ ಕೆಟ್ಟ ಭೂತ, ಪಿಶಾಚಿ, ದೈವಗಳ ಸಹಾಯದಿಂದ ಬೇರೆಯವರಿಗೆ ಕೆಡುಕು ಉಂಟುಮಾಡುವ ಉದ್ದೇಶಗಳಿಗೆ ಬಳಕೆಯಾಗುವ **‘ದುರುದ್ದೇಶದ ಮಾಟಗಾರಿಕೆ (BLACK MAGIC)** ಹಾಗೂ ಒಳ್ಳೆಯ ಭೂತ, ಪಿಶಾಚಿ, ದೈವ, ದೇವತೆಗಳ ಸಹಾಯ ಪಡೆದು ಒಳ್ಳೆಯ ಉದ್ದೇಶಗಳಿಗೆ ಬಳಕೆಯಾಗುವ **‘ಸುದುದ್ದೇಶದ ಮಾಟಗಾರಿಕೆ’ (WHITE MAGIC)** ಎಂಬ ಎರಡು ಪಂಗಡಗಳಿವೆ. **‘ದುರುದ್ದೇಶದ ಮಾಟಗಾರಿಕೆ’** ಬೇರೆಯವರಿಗೆ ಆಸ್ತಿಪಾಸ್ತಿ ಹಾನಿ, ಮಾನಸಿಕ ಹಾಗೂ ದೈಹಿಕ ಆರೋಗ್ಯ ಹಾನಿ ಉಂಟು ಮಾಡಲು

ಉಪಯೋಗಿಸಲ್ಪಟ್ಟರೆ ಕಾಯಿಲೆಗಳನ್ನು ಗುಣಪಡಿಸುವುದು, ಬೇರೆಯವರು ಮಾಡಿದ ಮಾಟಗಾರಿಕೆಯನ್ನು ಹೋಗಲಾಡಿಸುವುದು, ಮಳೆ, ಬೆಳೆಯ ಅಭಾವ ತೋರಿದಾಗ ಅದನ್ನು ಹೋಗಲಾಡಿವುದು, ಮಳೆ, ಬೆಳೆಯ ಅಭಾವ ತೋರಿದಾಗ ಅದನ್ನು ಹೋಗಲಾಡಿಸುವುದು ಮುಂತಾದ ಉದ್ದೇಶಗಳಿಗೆ ಸದುದ್ದೇಶದ ಮಾಟಗಾರಿಕೆ' ಬಳಕೆಯಾಗುತ್ತದೆ. ನಾಗರಿಕತೆ ಬೆಳೆದಂತೆಲ್ಲಾ **'ದುರುದ್ದೇಶದ ಮಾಟಗಾರಿಕೆ'**ಯು ತುಸು ಕುಂದುತ್ತ ಬಂದು **'ಸದುದ್ದೇಶದ ಮಾಟಗಾರಿಕೆ'** ಹೆಚ್ಚು ಹೆಚ್ಚು ಬಳಕೆಯಾಗುತ್ತಾ ಹೋಗಿ ಹಲವು ಧಾರ್ಮಿಕ ವಿಧಿಗಳ ರೂಪವನ್ನು ಪಡೆದಿದೆ. ಉದಾ : ಪೂಜೆ, ಪ್ರಾರ್ಥನೆ, ಹೋಮ, ಯಜ್ಞ, ಯಾಗ, ಹರಕೆ, ಮಾರಿಜಾತ್ರೆ ಇತ್ಯಾದಿ ಇವುಗಳ ಬಗ್ಗೆ ಸಂಗನ ಬಸವಯ್ಯನ ವಚನದಲ್ಲಿ **ಕರಿಯ ಕಾಳಿನೊಳಗೆ ಕತ್ತಲ ಬೆಳಗಿನೊಳು ನರಳುತ್ತ ನೇಯುತ್ತಿದ್ದನೊಬ್ಬ ಜಾಡ, ಆ ಕರಿಯ ಕಾಳು ಮೂಢನಂಬಿಕೆಯನ್ನು ಪ್ರತಿನಿಧಿಸಿದರೆ ಕತ್ತಲಿನ ಬೆಳಕು ಪ್ರತಿರೋಧದ ಪೀಠಿಕೆಯನ್ನು ಪ್ರತಿಪಾದಿಸುತ್ತದೆ.**[d]

> [25]**ಕರಿಯ ಕಾಳಿನೊಳಗೆ ಕತ್ತಲ ಬೆಳಗಿನೊಳು**
> **ನರಳುತ್ತ ನೇಯುತಿದ್ದನೊಬ್ಬ ಜಾಡ,**
> **ಕುಳಿಯೊಳಗಣ ಬೆಂಕಿಯುಳಿದು**
> **ಮಗ್ಗದ ನೂಲು ಸುಟ್ಟು ಚಿಂತೆ ಮಾಡುತ್ತಿರಲು,**
> **ಮೇಲುಮನೆಯಿಂದೊಬ್ಬ ನೋಡಿ ಕೈಗೊಟ್ಟು**
> **ಕಾಲೆರಡು ಸಂದಿನೊಳಗೆ ಇಕ್ಕಿದಮೇಲೆ ತಿರುಗಿ ಜೀವಿಸಲುಂಟೆ ?**
> **ಗುರುನಿರಂಜನ ಚನ್ನಬಸವಲಿಂಗಕ್ಕೆ**
> **ಇರ್ದುದ ಕೊಟ್ಟು ಸದ್ದಿಲ್ಲದಿರ್ದಡೆ ಸದ್ಭಕ್ತನೆಂಬೆ.**[25]
>
> ಸಂಗನ ಬಸವಯ್ಯ– ಸ.ವ.ಸಂ– 12, ವಚನ 165, ಪುಟ– 49.

ಈ ವಚನಕಾರರು **ಕುಳಿಯೊಳಗಿನ ಬೆಂಕಿ ತುಳಿಯುವ ನಂಬಿಕೆಯನ್ನು ತಿಳಿಸುತ್ತಲೇ ಮಾಟ ಮಂತ್ರ** ಎನ್ನುವ **ಅನಾರೋಗ್ಯಕ್ಕೆ ಚಿಕಿತ್ಸೆಯನ್ನು ನೀಡುವಂತಿದೆ** ಈ ವಚನ. [e]ಜನರು ತಮಗಾಗದವರನ್ನು ಪೀಡಿಸಲು ಮಾಟಗಾರರ ಸಹಾಯ ಪಡೆಯವುದು ಪುರಾತನ ಕಾಲದಿಂದಲೂ ಜಗತ್ತಿನಾದ್ಯಂತ ಬೆಳೆದುಬಂದಿದೆ. ಇಂತಹ ಸಂದರ್ಭಗಳಲ್ಲಿ ಮಾಟಗಾರನು **ಮೊಟ್ಟೆ, ನಿಂಬೆ, ತೆಂಗಿನಕಾಯಿ, ಅರಿಶಿನ, ಕುಂಕುಮ, ಮೆಣಸಿನಕಾಯಿ** ಮುಂತಾದ ವಸ್ತುಗಳನ್ನು ಮಂತ್ರಿಸಿ ಯಾರಿಗೆ ಹಾನಿ ಮಾಡಬೇಕೋ ಅಂತಹವರ ಮನೆಯ ಅಸುಪಾಸಿನಲ್ಲಿ ನೆಲದಲ್ಲಿ ಹುದುಗಿಡುತ್ತಾನೆ. ಈ ರೀತಿ ಮಾಟ ಮಾಡುವುದರಿಂದ **ಸಾವು, ನೋವು, ನಷ್ಟ ಉಂಟು** ಮಾಡಬಹುದೆಂದು ನಂಬಲಾಗಿದೆ. ತಮ್ಮ ಮನೆಯ ಅಸುಪಾಸಿನಲ್ಲಿ ಇಂತಹ ವಸ್ತುಗಳನ್ನು ಕಂಡು ದುರ್ಬಲ ಮನಸ್ಸಿನವರಾದರೆ ತಮಗೆ ತಿಳಿದಿರುವ ಮಾಟಗಾರರನ್ನು ಕರೆಸಿ ಮಾಟಕ್ಕೆ ಪ್ರತಿ ಮಾಟ ಮಾಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಮಾಟಗಾರರು ತಾವು ಸ್ವತಃ ಅಥವಾ ತಮ್ಮ ನಂಬಿಗಸ್ಥರ ಸಹಾಯದಿಂದ ಯಾರದ್ದಾದರೂ ಮನೆಯ ಅಸುಪಾಸಿನಲ್ಲಿ **ತೆಂಗಿನಕಾಯಿ, ನಿಂಬೆ, ಮೊಟ್ಟೆ, ಮೆಣಸಿನಕಾಯಿ, ಅರಿಶಿನ, ಕುಂಕುಮ** ಮುಂತಾದವುಗಳನ್ನು ಹುದುಗಿಟ್ಟು, ಈ ವಿಚಾರ ಆ ಮನೆಯವರಿಗೆ ತಿಳಿಯುವಂತೆ ಮಾಡಿ ತಾನು ಅದಕ್ಕೆ ಪ್ರತಿ ಮಾಟ ಮಾಡುತ್ತೇನೆ ಎಂದು ನಟಿಸಿ

ಮನೆಯವರಿಂದ ಹಣ ದೋಚುವುದೂ ಇದೆ. ಇನ್ನೊಂದು ಕ್ರಮ ಇದಕ್ಕಿಂತ ಕ್ಲಿಷ್ಟವಾದದ್ದು, ಈ ಕ್ರಮದಲ್ಲಿ ಯಾವ ವ್ಯಕ್ತಿಗೆ ಹಾನಿ ಮಾಡಬೇಕು ಆ ವ್ಯಕ್ತಿಯ ಪ್ರತಿಕೃತಿಯನ್ನು ಮಣ್ಣು, ಬಟ್ಟೆ, ಹಿಟ್ಟು, ಕಟ್ಟಿಗೆ, ಚರ್ಮ ಮುಂತಾದ ವಸ್ತುಗಳಿಂದ ಮಾಟಗಾರನು ತಯಾರಿಸುತ್ತಾನೆ. ನಂತರ ಕೆಲವು ಪೂಜಾಕ್ರಮಗಳನ್ನು ಮಾಡಿ ಆ ಪ್ರತಿಕೃತಿಗೆ ಕತ್ತಿಯಿಂದ ಹೊಡೆದು, ಚೂಪಾದ ವಸ್ತುವಿನಿಂದ ತಿವಿದು, ಬೆಂಕಿಯಿಂದ ಸುಟ್ಟು ಅಥವಾ ಅದರ ಅಂಗಾಂಗಗಳನ್ನು ಕಿತ್ತು ಅದಕ್ಕೆ ಹಾನಿ ಮಾಡುತ್ತಾನೆ. ಹೀಗೆ ಮಾಡುವುದರಿಂದ ನಿಜವಾದ ವ್ಯಕ್ತಿ ಎಲ್ಲೇ ಇದ್ದರೂ ಎಷ್ಟೇ ದೂರದಲ್ಲಿದ್ದರೂ ಒಂದಲ್ಲ ಒಂದು ಮಾನಸಿಕ ಅಥವಾ ದೈಹಿಕ ಹಾನಿಗೊಳಗಾಗುತ್ತಾನೆ ಎಂದು ಮಾಟಗಾರರು ಹೇಳುತ್ತಾರೆ. ಮಾಟಗಾರಿಕೆಯ ಈ ಕ್ರಮ ಪುರಾತನ ಕಾಲದಲ್ಲಿ ಭಾರತ, ಈಜಿಪ್ಟ್, ಅಸ್ಸಿರಿಯಾ ಮುಂತಾದ ದೇಶಗಳಲ್ಲಿ ಹುಟ್ಟಿ ಅಲ್ಲಿಂದ ರೋಮ್, ಗ್ರೀಸ್ ಮುಂತಾದ ದೇಶಗಳಿಗೆ ಹಬ್ಬಿತು.೯

[26]ಕಾಳುದೈವಕ್ಕೆ ಕೈಯತ್ತಲೊಲ್ಲದೆ
ಕಾರಣಮೂರ್ತಿಯ ಕರತಂದು ಪೂಜೆಯ ಮಾಡಿ,
ಭವಿಮುಟ್ಟದ ವರತೆಯ ನೀರ ತಂದು,
ಪಶುಕಾಲು ಸೋಂಕದ ಧಾನ್ಯಗೂಡಿ,
ಮಾಡದ ಒಲೆಯಲ್ಲಿ ಮಾಡಿದ ಪಾಕವ
ಚಲುವಾಗಿ ನೀಡಿದರೆ ಒಲಿದು ಬಂದೆನ್ನಪ್ಪಿದ
ಗುರುನಿರಂಜನ ಚನ್ನಬಸವಲಿಂಗ.[26]

ಸಂಗನ ಬಸವಯ್ಯ– ಸ.ವ.ಸಂ – 12, ವಚನ 310, ಪುಟ– 95.

ಮೂಢನಂಬಿಕೆಗಳಲ್ಲಿ ಅತಿ ಮುಖ್ಯವಾದ ದೆವ್ವ, ಭೂತ, ಪಿಶಾಚಿ, ಮೋಹಿನಿ, ತಲೆಗೂದಲು, ಉಗುರು, ಹಲ್ಲು, ಬಟ್ಟೆ, ಚರ್ಮ, ಆಯುಧ, ಉಪಕರಣ ಇತ್ಯಾದಿ ವಸ್ತುಗಳು ಹೇಗೆ ಅಮುಖ್ಯವಾಗಿರುತ್ತದೆ ಎನ್ನುವುದನ್ನು "ಕಾಳುದೈವದ ಪರಿಕಲ್ಪನೆ" ಯೊಂದಿಗೆ ವಿವೇಚಿಸಿದ್ದಾರೆ.

ಮಾಟಗಾರರು ತಮಗೆ ಬೇಕೆನಿಸಿದ ವ್ಯಕ್ತಿಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಆ ವ್ಯಕ್ತಿಗಳ ತಲೆಗೂದಲು, ಉಗುರು, ಹಲ್ಲು ಅಥವಾ ಆ ವ್ಯಕ್ತಿಗಳು ಉಪಯೋಗಿಸಿದ ಬಟ್ಟೆ ಮುಂತಾದ ವಸ್ತುಗಳನ್ನು ಬಳಸುತ್ತಾರೆ. ತಾವು ಇಷ್ಟಪಡುವ ಅದರೆ ತಮ್ಮ ಕೈಗೆ ಸಿಗದ ಗಂಡು / ಹೆಣ್ಣುಗಳನ್ನು ತಮ್ಮ ವಶಮಾಡಿಕೊಳ್ಳಲು ಮಾಟಗಾರಿಕೆಯನ್ನು ಬಳಸುವುದು ಈಗಲೂ ಹಲವು ಊರುಗಳಲ್ಲಿ ಕಾಣಸಿಗುತ್ತದೆ. ಈ ಕಾರಣಕ್ಕಾಗಿಯೇ ಹಲವು ಅದಿವಾಸಿ ಜನಾಂಗಗಳು ತಮ್ಮ ಕೂದಲು, ಚರ್ಮ, ಹಲ್ಲು, ಆಯುಧ, ಉಪಕರಣ ಅಷ್ಟೇಕೆ ಮಗುವಿನ ಹೊಕ್ಕಳ ಬಳ್ಳಿಯ ತುಣುಕು ಕೂಡ ಬೇರೆಯವರ ಕೈಗೆ ಸಿಗದಂತೆ ಬಹಳ ಎಚ್ಚರಿಕೆ ವಹಿಸುತ್ತಾರೆ ಇದಕ್ಕೆ ಹೊಂದಿಕೆಯಾಗುವಂತೆ ಪಂಚುಗಂಗೊಳ್ಳಿಯವರು ಕೆಳಗಿನ ಮಹತ್ವದ ಅಂಶವನ್ನು ತಿಳಿಸುತ್ತಾರೆ.

ಬಾರ್ನಿಯಾ (BORNEO) ಜನಾಂಗದ ಜನರಲ್ಲಿ ಒಂದು ಕೌತುಕದ ಕ್ರಮ ರೂಢಿಯಲ್ಲಿದೆ. ಸ್ತ್ರೀಗೆ ಹೆರಿಗೆಯಾಗುವ ಸಮಯದಲ್ಲಿ ಅವರು ಮಾಟಗಾರನೊಬ್ಬನನ್ನು ಕರೆಸುತ್ತಾನೆ. ಅವನು ತನ್ನ ಹೊಟ್ಟೆಯ ಮೇಲೆ ದೊಡ್ಡದೊಂದು ಕಲ್ಲನ್ನು ಬಟ್ಟೆಯಿಂದ ಕಟ್ಟಿಕೊಂಡು ಗರ್ಭಿಣಿಗೆ ಹೆರಿಗೆಯಾಗುವ ತನಕ ತಾನೂ ಮಗು ಹೆರುವವನಂತೆ ನಟಿಸುತ್ತಾನೆ. ಹೀಗೆ ಮಾಡುವುದರಿಂದ ಸ್ತ್ರೀಗೆ ಹೆರಿಗೆ ಸಮಯದಲ್ಲಿ ವೇದನೆ ಕಮ್ಮಿಯಾಗಿ ಸುಲಭದಲ್ಲಿ ಹೆರಿಗೆಯಾಗುವುದೆಂದು ಆ ಜನ ನಂಬುತ್ತಾರೆ.

[27]ಅರ್ಚನೆಯ ಮಾಡಿದಲ್ಲಿ ಭಕ್ತಿ ನಾಸ್ತಿ,
ಪೂಜೆಯ ಮಾಡಿದಲ್ಲಿ ಪುಣ್ಯ ನಾಸ್ತಿ,
ನಾನಾ ವಿಚಾರವನರಿದಲ್ಲಿ ಭವಂ ನಾಸ್ತಿ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ನಾನೆಂಬುದನರಿತಲ್ಲಿ, ತಾ ನಾಸ್ತಿಯಾಯಿತ್ತು.[27]

ಬಬ್ಬಿ ಬಾಚಯ್ಯ – ಸ.ವ.ಸಂ. 8 ವಚನ 386 ಪುಟ ಸಂಖ್ಯೆ 137

(ಬಿಬ್ಬಿಬಾಚಯ್ಯ 12ನೇ ಶತಮಾನಕ್ಕೆ ಸೇರಿದವರನಾಗಿದ್ದು, ಗುಲಬುರ್ಗಾ ಜಿಲ್ಲೆಯ ಗೊಬ್ಬೂರಿನಲ್ಲಿ ಹುಟ್ಟಿದನು, ಈತನ ವಚನಗಳ ಅಂಕಿತ ಏಣಾಂಕಧರ ಸೋಮೇಶ್ವರಲಿಂಗ. ಈತನ ಒಟ್ಟು ವಚನಗಳು ೨೩ ಬೆಡಗಿನ ವಚನಗಳಿಂದ ಕೂಡಿದೆ. ಹಿರಿಯ ಶರಣ ಪ್ರಸಾದಿ ಎಂದೆನಿಸಿದ ವಚನಕಾರನಾಗಿದ್ದಾನೆ. ಪ್ರಸಾದ ಪ್ರಸಾದಿ ಬಿಬ್ಬಿಬಾಚಯ್ಯ ನೆಂಬ ವಚನದ ಸಾಲುಗಳ ಮೂಲಕ ವ್ಯಕ್ತವಾಗುತ್ತದೆ. ಈತನ ವಚನಗಳ ಗಾತ್ರವು ಚಿಕ್ಕವಾಗಿದ್ದು, ಅಭಿವ್ಯಕ್ತಿಯಲ್ಲಿ ಸರಳತೆ ಹಾಗೂ ಪರಿಣಾಮ ತೀವ್ರತೆಗಳನ್ನು ಪಡೆದಿರುತ್ತದೆ. ಈತನ ಎಲ್ಲಾ ವಚನಗಳನ್ನು ಕ್ರೀಜ್ಞಾನ ಸಮರ್ಪಣಾಸ್ಥಲ, ಐಕ್ಯನಾಭಾವಲಿಂಗಸ್ಥಲ, ಅಂಗಭಾವಜ್ಞಾನಲೇಪಸ್ಥಲ, ಅಂಗಲಿಂಗಸ್ಥಲ ಸಮರ್ಪಣ, ಸರ್ವಭಾವಸ್ಥಲ ಸಮರ್ಪಣ, ಐಕ್ಯಾನುಭಾವಸ್ಥಲ, ಹೀಗೆ ಆರು ಸ್ಥಲಗಳಲ್ಲಿ ಸಮಾವೇಶಗೊಳಿಸಿರುವುದು ಕಂಡುಬರುತ್ತದೆ)

ಬಿಬ್ಬಿಬಾಚಯ್ಯನವರು ಪೂಜೆ, ಪ್ರಾರ್ಥನೆ, ಅರ್ಚನೆಗೆ ಸಂಬಂಧಿಸಿದಂತೆ ಮೂಢನಂಬಿಕೆಗಳಿಗೆ ವೈಚಾರಿಕವಾಗಿ ಈ ವಚನವನ್ನು ವಿಶ್ಲೇಷಿಸುತ್ತಾರೆ. ಪ್ರಾರ್ಥನೆ ಎಲ್ಲಾ ಧರ್ಮಗಳಲ್ಲೂ ಸಾಮಾನ್ಯವಾಗಿರುವ ಒಂದು ಪ್ರಮುಖ ಧಾರ್ಮಿಕ ವಿಧಿ. ಇದು ಮೂಲತಃ ಒಂದು ಮಾಂತ್ರಿಕ ಕ್ರಿಯೆ. ಕಣ್ಣಿಗೆ ಕಾಣದ ಒಂದು ಶಕ್ತಿ (ದೇವರು) ಇದೆ ಎಂದು ನಂಬಿ ಅದನ್ನು ಒಲಿಸಿಕೊಳ್ಳುವುದೇ ಪ್ರಾರ್ಥನೆ ಮಾಡುವುದರ ಮೂಲೋದ್ದೇಶ. ಪ್ರಾರ್ಥನೆ, ಭಜನೆ, ಕುಣಿತ, ಹಾಡು, ಮಂತ್ರೋಚ್ಚಾರಣೆ, ಧ್ಯಾನ ಮೊದಲಾದ ರೂಪಗಳಲ್ಲಿರುತ್ತದೆ.

ಹಲವು ಧರ್ಮಗಳಲ್ಲಿ ಹಲವು ರೀತಿಯ ಭಜನಾ ಕ್ರಮಗಳಿವೆ. ಹಿಂದೂಗಳು ದೇವರ ವಿಗ್ರಹ, ಚಿತ್ರಗಳ ಎದುರು ಕುಳಿತು, ನಿಂತು, ಬಗ್ಗಿ ಅಥವಾ ಅಡ್ಡಬಿದ್ದು ಎರಡೂ ಕೈ ಜೋಡಿಸಿ ಪ್ರಾರ್ಥಿಸುತ್ತಾರೆ. ಮುಸ್ಲಿಂ ಧರ್ಮದಲ್ಲಿ ಭಕ್ತರು ದಿನಕ್ಕೆ ಐದು ಬಾರಿ ಮೆಕ್ಕ ಕಡೆ ಮುಖ ಮಾಡಿ ನೆಲದ ಮೇಲೆ ಮಂಡಿಯೂರಿ ನೆಲಕ್ಕ ಹಣೆ ತಾಗಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ. ಕ್ರೈಸ್ತರು ನಿಂತು, ಕುಳಿತು ಅಥವಾ ಮೊಣಕಾಲೂರಿ ಕೈಯನ್ನು ಶಿಲುಬೆಯ ರೂಪದಲ್ಲಿ ಎದೆಗೆ ತಾಗಿಸಿ ಪ್ರಾರ್ಥಿಸುತ್ತಾರೆ. ಗ್ರೀಕ್ ಹಾಗೂ ಯಹೂದಿಯರು ಎರಡೂ ಕೈಗಳನ್ನು ಮೇಲಕ್ಕೆತ್ತಿ ಪ್ರಾರ್ಥಿಸುತ್ತಾರೆ.

ತಮಗಿಲ್ಲದಿದ್ದು ತಮಗೆ ಸಿಗಲಿ ಎಂದು ದೇವರನ್ನು ಅಂಗಲಾಚುವುದೇ ಪ್ರಾರ್ಥನೆಗಳ ಮೂಲ ಗುರಿ **ಮಳೆ ಬೆಳೆ ಸರಿಯಾಗಿ ಬರುವಂತೆ, ಕಾಯಿಲೆಗಳಿದ್ದರೆ ಅವು ಗುಣವಾಗುವಂತೆ, ಕೆಟ್ಟ ಕೆಲಸ ಮಾಡಿದ ಪಾಪಪ್ರಜ್ಞೆ ಕಾಡುತ್ತಿದ್ದರೆ, ಪರಿಹಾರ ನೀಡುವಂತೆ, ಉದ್ಯೋಗ, ವ್ಯವಹಾರಗಳಲ್ಲಿ ಏಳಿಗೆ ಸಿಗುವಂತೆ, ಸುಖ, ಸಂಪತ್ತು ಇಲ್ಲದಿದ್ದರೆ ಅವು ಸಿಗುವಂತೆ ಸಂತಾನವಿಲ್ಲದಿದ್ದರೆ ಮಕ್ಕಳಾಗಲಿ ಎಂದು ಕಾಣದ ಶಕ್ತಿಯನ್ನು ಬೇಡಿಕೊಳ್ಳುವುದೇ ಪ್ರಾರ್ಥನೆಗಳ ಉದ್ದೇಶ.** ಪೂಜೆ, ಪ್ರಾರ್ಥನೆ, ಅರ್ಚನೆಗೆ ಸಂಬಂಧಿಸಿದಂತೆ ಪಂಚುಗಂಗೊಳ್ಳಿಯವರು ಸ್ವಾರ್ಥ ಸಾಧನೆಗಾಗಿ ಧಾರ್ಮಿಕ ವಿಧಿಗಳನ್ನು ಹೇಗೆ ಬಳಸುತ್ತಾರೆ ಎಂಬುವುದನ್ನು ದೃಷ್ಟಾಂತದ ಮೂಲಕ ಈ ರೀತಿ ವಿವರಿಸುತ್ತಾರೆ.

'ಒಬ್ಬ ಡಾಕ್ಟರು ತನ್ನ ಉದ್ಯೋಗದಲ್ಲಿ ಹೆಚ್ಚು ಹೆಚ್ಚು ಗಳಿಕೆಯಾಗಲಿ ಎಂದು ಪ್ರಾರ್ಥಿಸಿದರೆ ಅದರ ಅರ್ಥವೇನು ? ಊರಿನ ಜನರು ಹೆಚ್ಚು ಹೆಚ್ಚು ರೋಗ, ರುಜಿನಗಳಿಗೆ ಬಲಿಯಾಗಲಿ ಎಂದಲ್ಲವೇ ? ವಕೀಲನೊಬ್ಬ ತನ್ನ ಪ್ರಾಕ್ಟೀಸ್ ಲಾಭದಾಯಕವಾಗಿ ಮುಂದುವರಿಯಲಿ ಎಂದು ಪ್ರಾರ್ಥಿಸಿದರೆ ಊರಿನ ಜನರು ಪರಸ್ಪರ ಜಗಳ, ವೈಮನಸ್ಸು ಬೆಳೆಸಿಕೊಂಡು ಹೆಚ್ಚು ಹೆಚ್ಚು ದಾವೆಗಳನ್ನು ಹೂಡಲಿ ಎಂದು ಅರ್ಥವಲ್ಲವೇ ? ಶರಾಬು ಮಾಡುವವ ತನ್ನ ದಂಧೆಯಲ್ಲಿ ಹೆಚ್ಚು ಹೆಚ್ಚು ಲಾಭ ಬರಲಿ ಎಂದು ದೇವರನ್ನು ಪ್ರಾರ್ಥಿಸಿದರೆ ಊರ ಜನರು ಹೆಚ್ಚು ಹೆಚ್ಚು ಶರಾಬು ಕುಡಿದು ಅವರು ಆಸ್ತಿ ಪಾಸ್ತಿ, ಹೆಂಡತಿ, ಮಕ್ಕಳು ಹಾಳಾಗಲಿ ಎಂದು ಬಯುಸಿದಂತಲ್ಲವೇ ? ಯಾವ ಡಾಕ್ಟರುಗಳು ಊರಲ್ಲಿ ರೋಗ ರುಜಿನಗಳು ಕಾಣಿಸಿಕೊಳ್ಳದೆ ಜನರೆಲ್ಲ ಆರೋಗ್ಯದಿಂದಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತಾರೆ ? ಎಷ್ಟು ಜನ ವಕೀಲರು ಜನರು ಪರಸ್ಪರ ಕಚ್ಚಾಡದೆ, ಕೋರ್ಟ್ ಕಚೇರಿಗಳ ಮೆಟ್ಟಿಲು ಹತ್ತದೆ ಸ್ನೇಹ, ವಿಶ್ವಾಸದಿಂದರಲಿ ಎಂದು ಕಾಣದ "ಆ ಶಕ್ತಿ' ಗೆ ಪ್ರಾರ್ಥನೆ ಸಲ್ಲಿಸುತ್ತಾರೆ ? ಜನರಲ್ಲಿ ಶರಾಬು ಕುಡಿತದ ದುಶ್ಚಟ ಕಮ್ಮಿಯಾಗಲಿ ಎಂದು ಯಾವ ಶರಾಬು ಮಾರಾಟಗಾರ ದೇವರಲ್ಲಿ ಅಂಗಲಾಚುತ್ತಾನೆ ? ಪ್ರಾರ್ಥನೆಯು ಸ್ವಾರ್ಥ ಸಾಧನೆಗಾಗಿ ಬಳಸ್ಪಡುವ ಒಂದು ಧಾರ್ಮಿಕ ವಿಧಿಯಷ್ಟೇ? [f]

ಧರ್ಮಗುರು – ಘೋಷಣೆ – ನಂಬಿಕೆ – ಮೂಢನಂಬಿಕೆ ಮತ್ತು ವಚನಗಳು

ಃ1970ರ ಒಂದು ದಿನ ವಾಟಿಕನ್ ಚರ್ಚಿನ ಧರ್ಮಗುರು ಘೋಷಣೆಯೊಂದನ್ನು ಹೊರಡಿಸಿ ಒಂದು ಪ್ರಾರ್ಥನಾ ಸಭೆಯನ್ನು ಏರ್ಪಡಿಸಿದ್ದಾಗಿ ಸಾರಿದನು. ಈ ಪ್ರಾರ್ಥನೆಯ ಉದ್ದೇಶ ಕಾಯಿಲೆ, ಹಸಿವು, ಬಡತನ, ಪರಿಣಾಮ ಅನಾರೋಗ್ಯ ಮತ್ತಿತರ ಸಮಸ್ಯೆಗಳಿಂದ ಬಳಲುತ್ತಿದ್ದವರನ್ನು ಪಾರು ಮಾಡುವ ಸಲುವಾಗಿ ಅಲ್ಲ. ಬದಲಿಗೆ ಕೆಲವು ತಾಂತ್ರಿಕ ತೊಂದರೆಗಳಿಂದಾಗಿ ಭೂಮಿಗೆ ಮರಳಿ ಬರಲು ತಿಣುಕಾಡುತ್ತಿದ್ದ ಅಪೋಲೋ – ೧೨ ಉಪಗ್ರಹದೊಳಗಿನ ಮೂವರು ಗಗನಯಾತ್ರಿಗಳ ಸುರಕ್ಷತೆಗಾಗಿ, ಆ ಮೂವರೂ ಯಾವ ಅಪಾಯವಿಲ್ಲದೆ ಭೂಮಿಗಿಳಿದರು. ಅವರು ಸುರಕ್ಷಿತವಾಗಿ ಭೂಮಿಗಿಳಿಯಲು ನಾಸ (NASA)ದ ವೈಜ್ಞಾನಿಕ ಪ್ರಯತ್ನ ಕಾರಣವಾಯಿತೋ ಅಥವಾ ಪೋಪ್‌ನ ಪ್ರಾರ್ಥನೆ ಕಾರಣವಾಯಿತೋ ಎಂಬುದನ್ನು ನೀವೇ ತೀರ್ಮಾನಿಸಬಹುದು. ಭಾರತದ ಮೊತ್ತಮೊದಲ ಉಪಗ್ರಹವನ್ನು ಹಾರಿಸುವಾಗ ತೆಂಗಿನಕಾಯಿ ಒಡೆದು ಪ್ರಾರ್ಥನೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ರಾಕೆಟ್ ಮೂಲಕ ಉಪಗ್ರಹವನ್ನು ಆಕಾಶಕ್ಕೆ ಹಾರಿಸುವ ಕ್ರಿಯೆ ಭೂಮಿಯ ಗುರುತ್ವಾಕರ್ಷಣಾ ಶಕ್ತಿಯನ್ನು ಮೀರಿ ಅಥವಾ ಅದಕ್ಕೆ ವಿರುದ್ಧವಾಗಿ ಹೋಗುವುದು ಎಂದರ್ಥ. ಪ್ರಾಕೃತಿಕ ನಿಯಮವಾದ ಈ ಗುರುತ್ವಾಕರ್ಷಣ ಶಕ್ತಿಯು ದೇವರು ಮಾಡಿದ ನಿಯಮವೆಂದು ಭಾವಿಸಿದರೆ ಆ ಶಕ್ತಿ ಅಥವಾ ನಿಯಮವನ್ನು ಮೀರಿ ಹೋಗುವುದು ದೇವರ ಇಚ್ಛೆಗೆ ವಿರುದ್ಧವಾಗಿ ಹೋಗುವುದು ಎಂದರ್ಥವಲ್ಲವೇ ? ದೇವರ ಇಚ್ಚೆಯನ್ನು ಮೀರಿಹೋಗುವ ಉಪಗ್ರಹ ಉಡ್ಡಯಣ ಕ್ರಿಯೆ ಯಶಸ್ವಿಯಾಗಲಿ ಎಂದು ದೇವರನ್ನು ಪ್ರಾರ್ಥಿಸಿದರೆ ಆ ಪ್ರಾರ್ಥನೆ ಫಲಿಸೀತೆ? ಃ ಎನ್ನುವ ಈ ಪ್ರಶ್ನೆಗೆ ಮನುಮುನಿಗುಮ್ಮಟದೇವರ ವಚನದಲ್ಲಿ ಉತ್ತರ ದೊರಕುತ್ತದೆ.

(**ಮನುಮುನಿಗುಮ್ಮಟ ದೇವ** 12ನೇ ಶತಮಾನಕ್ಕೆ ಸೇರಿದವನಾಗಿದ್ದು, ಈತನ ವಚನಗಳ ಅಂಕಿತ **"ಗುಡಿಯ ಗುಹೆಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ"**, ಮೂಲತಃ ಜೈನನಾಗಿರಬಹುದಾದ ಈತನ ಜೀವನ ವೃತ್ತಾಂತ ಸಿಗುವುದಿಲ್ಲ. ಈತನ ವಚನಗಳನ್ನು **'ಆತ್ಮನರಿವು ಭಾವಸ್ಥಲ' 'ಆತ್ಮ ಐಕ್ಯನಸ್ಥಲ', 'ಪಿಂಡಜ್ಞಾನ ಸಂಬಂಧ'** ಶೀರ್ಷಿಕೆಗಳ ಅಡಿಯಲ್ಲಿ ಸಂಕಲಿಸಲಾಗಿದ್ದು, ಆರಂಭದಲ್ಲಿ ಗಧ್ಯಭಾಗವನ್ನು ಜೋಡಿಸಲಾಗಿದೆ. ಈತನು ಸಹ ಸುಂದರವಾದ, ಧ್ವನಿಪೂರ್ಣವಾದ ಬೆಡಗಿನ ವಚನಗಳನ್ನು ಬರೆಯುತ್ತಾನೆ. ಇವನ ವಚನಗಳಲ್ಲಿ **ಏಕದೇವೋಪಾಸನೆ, ಪರಮತದೂಷಣೆ, ದಯವೇ ಧರ್ಮದ ಮೂಲ** ಈ ಎಲ್ಲಾ ಸಂಗತಿಗಳನ್ನು ವಚನದ ಮೂಲಕ ಅಭಿವ್ಯಕ್ತಿಗೊಳಿಸುತ್ತಾನೆ)

[28]ಕಾಡುಗುರಿ [ತಾ]ನೆಯಾಗಿ ಬಂದು,

ಊರೊಳಗೆ ಮೂರು ಮರಿಯನೀಯಿತ್ತು.

ಅವರ ವರ್ಣ ಒಂದೆಡ, ಒಂದು ಕಾಡ,

ಒಂದು ಎಲ್ಲರ ಕೂಡಿದ ಬಣ್ಣ

ಹೆಂಗುರಿ ಸತ್ತಿತ್ತು, ಮರಿಗೆ ಒಡೆಯರಿಲ್ಲ.

ಆ ಮರಿಯ ಕಾವಡೆ,

ಕಾಲಿಲ್ಲದೆ ಕೈಯಿಲ್ಲದೆ ಕಣ್ಣಿಲ್ಲದೆ ಕಾಯಬೇಕು,

ಆ ಮರಿ ಅರಿದು ನಮಗೆ ಇನ್ನಾರು ಇಲ್ಲಾ ಎಂದು

ಎಡಕಾಡನೊಳಗಡಗಿ, ಕಾಡ ನಾನಾ ವರ್ಣದೊಳಗಡಗಿ,

ನಾಡು ನಾದದೊಳಗಡಗಿ, ನಾನಾ ವರ್ಣ ನಾಡಿನೊಳಗಡಗಿ,

ನಾದ ಸುನಾದದಲ್ಲಿ ಅಡಗಿ, ಸುನಾದಸ ಸುರಾಳಮವಾಗಿ ಇದ್ದಲ್ಲಿ,

ಗುಡಿಯ ಗುಹೆಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ,

ನೀ ನಿರಾಳವಾಗಿ ಇದ್ದೆ.[28]

ಮನುಮುನಿ ಗುಮ್ಮಟ ದೇವ– ಸ.ವ.ಸಂ –8, ವಚನ 1075 ಪುಟ ಸಂಖ್ಯೆ 362

ಮನುಮುನಿ ಗುಮ್ಮಟದೇವ ಈ ವಚನಕಾರ ಪೂಜೆ ಪ್ರಾರ್ಥನೆಯ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾ ವ್ಯವಹಾರಿಕ ತನವನ್ನು ಪ್ರಶ್ನೆ ಮಾಡುತ್ತಾ ಹೇಗೆ ಇವು ಮೌಢ್ಯವಾಗಿದೆ ಎಂಬುವುದನ್ನು ಪ್ರತಿಪಾದಿಸುತ್ತಾರೆ. [h]ಪೂಜೆ ಎಲ್ಲಾ ಧರ್ಮಗಳಲ್ಲೂ ಪ್ರಾರ್ಥನೆಯಷ್ಟೇ ಮುಖ್ಯವಾಗಿರುವ ಒಂದು ಕ್ರಿಯೆ. ಇದು ಕೂಡ ಮೂಲತಃ ಒಂದು ಮಾಂತ್ರಿಕ ಕ್ರಿಯೆ. ಕೆಲವು ಸೂತ್ರ, ವಿಧಿವಿಧಾನಗಳ ಪ್ರಕಾರ **ಹೂ, ಹಣ್ಣು, ಕಾಯಿ, ಹಾಲು, ತುಪ್ಪ, ಮಾಂಸ ಇತ್ಯಾದಿಗಳನ್ನು** ಅಗೋಚರ ಶಕ್ತಿ (ದೇವರು) ಗಳಿಗೆ ಅರ್ಪಿಸಿ ಅವುಗಳನ್ನು ಒಲಿಸಿಕೊಂಡು ಸ್ವಾರ್ಥ ಸಾಧನೆ ಮಾಡಿಕೊಳ್ಳುವುದೇ ಪೂಜೆಗಳ ಮೂಲೋದ್ದೇಶ. ಒಂದು ಧರ್ಮದ ಎಲ್ಲಾ ಸದಸ್ಯರೂ ನೇರವಾಗಿ ಪೂಜೆ ಮಾಡುವಂತಿಲ್ಲ. ಪೂಜೆ ಮಾಡಲು ಹಿಂದೂ ಧರ್ಮದಲ್ಲಿ ಬ್ರಾಹ್ಮಣರು (ಅರ್ಚಕರು) ಇದ್ದರೆ, ಕ್ರೈಸ್ತ ಧರ್ಮದಲ್ಲಿ ಧರ್ಮಗುರುಗಳು, ಮುಸ್ಲಿಂ ಧರ್ಮದಲ್ಲಿ ಮೌಲಿಗಳು ಇರುತ್ತಾರೆ. **'ದೇವರ ಏಜೆಂಟರ'** ಮೂಲಕ ಪೂಜೆ ಮಾಡಿಸಿಕೊಂಡರೆ ಮಾತ್ರವೇ ಆ ಪೂಜೆ ಸಾರ್ಥಕವಾಗಿ ಪೂಜೆ ಮಾಡಿಸಿದವರು ಧನ್ಯರಾಗಬಹುದು. **ಈ ವ್ಯವಸ್ಥೆ ಮಾರುಕಟ್ಟೆಯಲ್ಲಿರುವ ಗ್ರಾಹಕ, ಉತ್ಪಾದಕ ಹಾಗೂ ಮಧ್ಯವರ್ತಿಗಳ** ನಡುವಿನ ಸಂಬಂಧದಂತಿರುತ್ತದೆ.[h] ವಚನಕಾರರು ಹೇಳುವಂತೆ ಪೂಜೆ ಮತ್ತು ಪ್ರಾರ್ಥನೆಗಳು **ವ್ಯವಸ್ಥಿತ ಮಾರುಕಟ್ಟೆ** ಯಾಗಿರುವ ಪ್ರಸಂಗವನ್ನು ಅಂದೇ ಸೂಚಿಸಿರುವುದು ಗಮನಾರ್ಹ.

ಸಮಾರಂಭ, ಕಾರ್ಯಕ್ರಮ, ವ್ಯವಹಾರಗಳು, ವ್ಯವಹಾರಗಳು, ಶುರುವಾಗುವ ಮೊದಲು ಪೂಜೆ ನಡೆಸುವುದು ತೀರಾ ಸಾಮಾನ್ಯ ಗೃಹಪ್ರವೇಶ ಮಾಡುವಾಗ, ಆಸ್ಪತ್ರೆ, ಹೋಟೆಲ್‌ಗಳನ್ನು ತೆರೆಯುವಾಗ, ಸೇತುವೆ, ರೈಲು ಮಾರ್ಗಗಳನ್ನು ಉದ್ಘಾಟಿಸುವಾಗ, ಕೈಗಾರಿಕೆಗಳನ್ನು ಶುರು ಮಾಡುವಾಗ, ಮದುವೆ ಮುಂಜಿಗಳನ್ನು ನಡೆಸುವಾಗ ಪೂಜೆ ಅಗತ್ಯ ನಡೆಯಲೇಬೇಕು. (ಪೂಜೆಗಳನ್ನು ನಡೆಸಿದ ನಂತರವೂ ಕೈಗಾರಿಕೆಗಳು ನಷ್ಟ ಹೊಂದಿ ಮುಚ್ಚುವುದು, ಮದುವೆಗಳು ವಿಚ್ಛೇದನಗಳಲ್ಲಿ ಮುಗಿಯುವುದು, ಸೇತುವೆಗಳು ಮುರಿದು ಬೀಳುವುದು ಬೇರೆ ಮಾತು) ಅಷ್ಟೇಕೆ **ಶರಾಬು ಅಂಗಡಿ, ಬಾರು, ಗ್ಯಾಂಬ್ಲಿಂಗ್ ಕ್ಲಬ್** ಮುಂತಾದ ಸಮಾಜವನ್ನು ದುರಾಭ್ಯಾಸದ ಚಟಕ್ಕೆ ಬೀಳಿಸುವ ವ್ಯವಹಾರಗಳೂ ಪೂಜೆಯಿಂದಲೇ ಶುರುವಾಗುತ್ತವೆ.

ಪೂಜೆ ಮಾಡಲು ಉಪಯೋಗಿಸುವ ವಸ್ತುಗಳನ್ನು ಪರಿಶೀಲಿಸಿದರೆ ಒಂದು ಸ್ವಾರಸ್ಯಕರ ಅಂಶವು ಕಾಣಿಸುತ್ತದೆ. ಪ್ರತಿಯೊಂದು ಪೂಜೆಯಲ್ಲೂ ಸಾಮಾನ್ಯವಾಗಿ ಜನರು ತಾವು ತಿನ್ನಲು ಬಳಸುವ ವಸ್ತುಗಳನ್ನೇ ಉಪಯೋಗಿಸುತ್ತಾರೆ. **ಉದಾ : ಹಾಲು, ಜೇನುತುಪ್ಪ, ತುಪ್ಪ, ಹಣ್ಣು, ಕಾಯಿ, ಎಣ್ಣೆ, ಕುರಿ, ಕೋಳಿ, ಕೋಣ, ಆಡಿನ ಮಾಂಸ, ಧಾನ್ಯ, ಶರಾಬು, ಬೇಯಿಸಿದ ಖಾದ್ಯಗಳು ಇತ್ಯಾದಿ. ಯಾವ ಪೂಜೆಯಲ್ಲೂ ತಿನ್ನಲಾಗದ ಕಾಡು ಫಲಗಳನ್ನಾಗಲೀ, ನಾಯಿ, ಬೆಕ್ಕು, ಇಲಿ, ಹೆಗ್ಗಣ, ಜಿರಳೆಗಳ ಮಾಂಸವನ್ನಾಗಲೀ, ನೈವೇದ್ಯಕ್ಕೆ ಬಳಸುವುದಿಲ್ಲ.** ಮನುಷ್ಯರು ತಿನ್ನಲಾಗದ ವಸ್ತುಗಳನ್ನು ದೇವರೂ ತಿನ್ನಲಾರ ಎಂಬ ಭಾವನೆ ಇದ್ದಿರಬಹುದು. ಅಥವಾ ಪೂಜೆಯಿಂದ ಬೇರೇನೂ ಸಾಧಿಸಲಾಗದಿದ್ದರೂ ಪೂಜೆಯ ನೆಪದಲ್ಲಿ ಒಂದಷ್ಟು ಹೊಟ್ಟೆಯಾದರೂ ತುಂಬಲಿ ಎಂಬ ಲೆಕ್ಕಾಚಾರವಿದ್ದಿರಬಹುದು. ಪೂಜೆಯಿಂದ ಬೇರೇನೂ ಸಾಧಿಸಲಾಗದಿದ್ದರೂ ಪೂಜೆ ನೆಪದಲ್ಲಿ ಹೊಟ್ಟೆ ತುಂಬಿಸಿಕೊಳ್ಳುವ ಪರಿಯನ್ನು ಬಹುರೂಪಿ ಚೌಡಯ್ಯ ತನ್ನದೇ ಆದ ವಿಶೇಷತೆಯೊಂದಿಗೆ ದೃಢಪಡಿಸಿದ್ದಾನೆ.

(**'ಬಹುರೂಪಿ'** ಕಾಯಕದ ಜನಪದ ಕಲಾವಿದ ಶರಣ **ಬಹುರೂಪಿ 'ಚೌಡಯ್ಯ ರೇಕಣ್ಣ ಪ್ರಿಯ ನಾಗಿನಾಥ'** ಅಂಕಿತದಲ್ಲಿ ವಚನ ರಚಿಸಿದ್ದಾನೆ. **ರೇಕಳಿಕೆ ಗ್ರಾಮದಲ್ಲಿ** ಹುಟ್ಟಿ ಬೆಳೆದ ಈತನ ಕಾರ್ಯಕ್ಷೇತ್ರ **ಕಲ್ಯಾಣವಾಗಿದ್ದಿತು.** ಈತನ ವಚನಾಂಕಿತವು **ದೀಕ್ಷಾಗುರು ರೇಕನಾಥ, ಜ್ಞಾನಗುರು ನಾಗಿನಾಥ** ಇವರ ಸಂಯುಕ್ತ ಹೆಸರುಗಳಿಂದ ಕೂಡಿದುದ್ದಾಗಿದೆ. ಈತನ ವಚನಗಳಲ್ಲಿ **ಲಿಂಗಾಂಗ ಸಾಮರಸ್ಯ ವೀರಶೈವ ನಿಷ್ಠೆ, ಶರಣ ವಿಧೇಯತೆ, ಜಂಗಮ ನಿಷ್ಠೆ, ನೇರ ಹಾಗೂ ನಿಷ್ಠುರ ಸ್ವಭಾವಗಳು ಕಂಡು ಬರುತ್ತದೆ.** ಈತನ ಬೆಡಗಿನ ವಚನಗಳಲ್ಲಿ ಸರಳ ಹಾಗೂ ಸೊಗಸಾದ ಕೆಲವು ವಚನಗಳು ರಚಿತವಾಗಿವೆ. ತನ್ನ ಹೆಚ್ಚಿನ ವಚನಗಳಲ್ಲಿ **ಬಸವಣ್ಣನವರನ್ನೇ ಸ್ತುತಿಸಿರುವ ಚೆನ್ನಬಸವಣ್ಣ, ಪ್ರಭುದೇವ, ಅಜಗಣ್ಣ, ಮಡಿವಾಳ ಮಾಚಿದೇವ ಮುಖವಾಡದಯ್ಯಗಳನ್ನು ಪ್ರಾಸಂಗಿಕವಾಗಿ ಭಕ್ತಿಯಿಂದ ಸ್ಮರಿಸುತ್ತಾನೆ**).

[29]ವೇಧಿಸಿದ ವೇದಂಗಳೆಲ್ಲ ಉರಿದುಲಿದು ನಿಂದವು.
ಸಾಧಿಸಿದ ಶಾಸ್ತ್ರಂಗಳೆಲ್ಲ ಸೋಹೋ ಎಂದಡಗಿದವು.
ವಿದ್ಯಾಮುಖ ಪ್ರಣಮವು ಸಿದ್ದ ಸಿದ್ದ ಎಂದು
ಕದ್ದ ಕಳ್ಳರಂತೆ ತಡವಡಿಸುತ್ತಿರ್ದವು ನೋಡಾ.
ಅರ್ಧನಾರೀಶ್ವರನ ರೂಪು ಇಂತೆಂದು
ಶುದ್ಧವಾಯಿತ್ತೀ ಲೋಕದೊಳಗೆ.[29]

ಬಹುರೂಪಿ ಚೌಡಯ್ಯ ಸ.ವ.ಸಂ. 8, ವಚನ 178 ಪುಟ ಸಂಖ್ಯೆ 71

ಪೂಜೆಯು ಹಲವು ಬಾರಿ ಜನ ಕಲ್ಯಾಣದ ನೆಪದಲ್ಲಿ ಯಜ್ಞ, ಯಾಗ, ಹೋಮ ಮುಂತಾದ ವಿಸ್ತಾರಿತ ರೂಪುಗಳನ್ನು ಪಡೆಯುತ್ತದೆ. ಪೂಜಾಕ್ರಮವು ವಿಸ್ತರಿಸಿದಂತೆ ಬಳಸುವ ಖಾದ್ಯ ಯೋಗ್ಯ ಪದಾರ್ಥಗಳ ಬಳಕೆಯೂ ಹೆಚ್ಚುತ್ತದೆ. ಜನಕಲ್ಯಾಣಕ್ಕಾಗಿ ನಡೆಯುವ ಹೋಮ, ಯಾಗ, ಯಜ್ಞಗಳಲ್ಲಿ ಲಕ್ಷಗಟ್ಟಲೆ ತೆಂಗಿನಕಾಯಿ, ಟನ್‌ಗಟ್ಟಲೆ ತುಪ್ಪ, ಲಾರಿಗಟ್ಟಲೆ ಕಟ್ಟಿಗೆಗಳನ್ನು ಬೆಂಕಿಗೆ ಹಾಕಿ ಬೂದಿ ಮಾಡಲಾಗುತ್ತದೆ. ತಿನ್ನಲು ಒಂದು ಹೊತ್ತಿನ ಕೂಳಿಗೂ ಗತಿಯಿಲ್ಲದೆ ಹಸಿವೆಯಿಂದ ಸಾಯುವ ಅಸಂಖ್ಯಾತ ಜನರಿರುವ ಈ ದೇಶದಲ್ಲಿ ಪೂಜೆಗಳ ನೆಪದಲ್ಲಿ ಖಾದ್ಯ ಯೋಗ್ಯ ವಸ್ತುಗಳನ್ನು ಪೋಲು ಮಾಡಲಾಗುತ್ತದೆ.

[30]ಮಡಿಕೆ ಮಣ್ಣಾಗಲರಿಯದು, ವಹ್ನಿ ಕಾಷ್ಠ ವಾಗಲರಿಯದು,
ಮುತ್ತು ನೀರಾಗಲರಿಯದು, ಸತ್ಯ ಗುರುವಿನಿಂದುಪದೇಶವಡೆದ
ನಿತ್ಯ ಶರಣನ ಜಿಹ್ವೆ ಪ್ರಸಾದ ಮಂತ್ರವಾಗಿರ್ದು ಉಚ್ಛಿಷ್ಟವಾಗಲರಿಯದು
ನಿರಂಜನ ಚನ್ನಬಸವಲಿಂಗಾ.[30]

ಸಂಗನ ಬಸವಯ್ಯ ಸಂ.ವ.ಸಂ. 12, ವಚನ 93, ಪುಟ – 29.

ಸಂಗನ ಬಸವಯ್ಯನ ಈ ವಚನದಲ್ಲಿ ಪಂಚೀಕರಣ ತತ್ವಕ್ಕೆ ಸಂಬಂಧಿಸಿದಂತೆ ನಿಸರ್ಗ ಮತ್ತು ಕೃಷಿ ಆದರಿಸಿದ ನಂಬಿಕೆಗಳು ಬಿತ್ತರವಾಗಿವೆ.

ಮಾನವ ಚರಿತ್ರೆಯಲ್ಲಿ ಅಗೋಚರ, ಅತಿಮಾನುಷ್ಯ ಶಕ್ತಿಗಳನ್ನು ಸಂಪ್ರೀತಗೊಳಿಸುವ ಸಲುವಾಗಿ ನರಬಲಿ ನೀಡುವ ಪದ್ದತಿಯ ಬಗ್ಗೆ ಪ್ರಸ್ತಾಪಗಳು ಕಾಣಸಿಗುತ್ತವೆ. ಈ ಪದ್ಧತಿ ಈಗ ನಶಿಸಿದೆ ಎಂದರೂ ಸಂಪೂರ್ಣವಾಗಿ ಇಲ್ಲವಾಗಿದೆ ಎಂದು ಹೇಳಲಾಗುವುದಿಲ್ಲ. ಈಗಲೂ ಆಗೊಮ್ಮೆ ಈಗೊಮ್ಮೆ, ಚಿಕ್ಕ ಮಕ್ಕಳನ್ನು, ಮೈ ನೆರೆಯದ ಅಥವಾ ಕನ್ಯಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳನ್ನು ಒಂದಲ್ಲ ಒಂದು ಉದ್ದೇಶಕ್ಕಾಗಿ ಬಲಿ ನೀಡಿದ ಪತ್ರಿಕಾ ವಾರ್ತೆಗಳು ಬರುತ್ತಿವೆ. ಇನ್ನೂ ನಾಗರಿಕತೆ ಸೋಂಕದ ಹಲವು ಜನಾಂಗಗಳಲ್ಲಿ ನರಬಲಿ ನೀಡುವುದು ಆಗಾಗ್ಗೆ ನಡೆಯುತ್ತಿದೆ. ಸಾವು, ನೋವು, ನಷ್ಟಗಳ ಬಗೆಗಿನ

ಭಯದ ಜತೆಯಲ್ಲಿ ಪ್ರಕೃತಿಯನ್ನು ತಪ್ಪಾಗಿ ಅರ್ಥೈಸುವುದೇ ಮನುಷ್ಯ ನರಬಲಿ ನೀಡುವುದಕ್ಕೆ ಕಾರಣವಾಗಿದೆ. ಮೌಢ್ಯತೆಯ ಪರಮಾವಧಿಯಾದ ಮನುಷ್ಯ ನರಬಲಿ ಪ್ರಸಂಗವನ್ನು ಬಸವಣ್ಣನಿಂದ ಹಿಡಿದು ಮೆಕ್ಸಿಕೋ ನಗರದವರೆವಿಗೂ ಇರುವ ಬಲಿ ನೀಡುವ ಪದ್ಧತಿಯ ಬಗ್ಗೆ ಅತ್ಯಂತ ಕ್ರೂರ ನಂಬಿಕೆ ಮೌಢ್ಯವಾಗಿ ಕಾಣುತ್ತಿದೆ ಇದನ್ನು ಮುಂದಿನ ಅಂಶಗಳ ಮೂಲಕ ಪುರಾತನ ಕಾಲದ ಮೆಕ್ಸಿಕೋ ದೇಶದ ಜನರ ನಂಬಿಕೆಯಿಂದಲೂ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಪುರಾತನ ಕಾಲದ ಮೆಕ್ಸಿಕೋ ದೇಶದ ಜನ ಸೂರ್ಯನು ಎಲ್ಲಾ ಜೀವಿಗಳಿಗೂ ಮೂಲಧಾತುವೆಂದು ತಿಳಿದು, ಈ ಮೂಲಧಾತು ನಿರಂತರವಾಗಿ ಹರಿಯಲು ಅವನು ಪ್ರತಿಫಲದ ರೂಪದಲ್ಲಿ ನರಬಲಿಯನ್ನು ಬೇಡುತ್ತಾನೆ ಎಂದು ನಂಬಿಸಿದ್ದರು. ಅಂತೆಯೇ ಅವರು ಸೂರ್ಯನನ್ನು ತೃಪ್ತಿಪಡಿಸಲು ಮನುಷ್ಯರ ಹೃದಯಗಳನ್ನು ಅರ್ಪಿಸುತ್ತಿದ್ದರು. ಈ ಕಾರ್ಯಕ್ಕಾಗಿ ಅವ್ಯಾಹತವಾಗಿ ನರಬಲಿ ಕೊಡುವುದು ನಡೆಯುತ್ತಿತ್ತು. ಜೋಳದ ಬೆಳೆಯನ್ನು ಮನುಷ್ಯನ ಜೀವದೊಂದಿಗೆ ಸಮೀಕರಿಸಿ ಜೋಳ ಬಿತ್ತನೆ ಕಾಲದಲ್ಲಿ ನವಜಾತ ಶಿಶುಗಳನ್ನು ತೆನೆಯೊಡೆಯುವ ಕಾಲದಲ್ಲಿ ಬೆಳೆದ ಮಕ್ಕಳನ್ನು ಹಾಗೂ ತೆನೆ ಬಲಿತಾಗ ಮುದುಕರನ್ನು ಬಲಿಕೊಟ್ಟು ಹೆಚ್ಚಿನ ಫಸಲು ಪಡೆಯಬಹುದೆಂಬ ನಂಬಿಕೆಯನ್ನು ಯುರೋಪಿನ ಕೆಲವು ಜನಾಂಗಗಳು ಬೆಳೆಸಿಕೊಂಡಿದ್ದವು. ಈಕ್ವೆಡಾರಿನ ಕೆಲವು ಪ್ರದೇಶದಲ್ಲಿ ಬೆಳೆಯ ಕೊಯ್ಲಿನ ಸಮಯದಲ್ಲಿ ಸಹಸ್ರಾರು ಮಕ್ಕಳನ್ನು ಬಲಿ ನೀಡುವ ಪದ್ಧತಿ ಇತ್ತು. ಭಾರತದಲ್ಲೂ ಹಲವೆಡೆ ಬೀಜ ಬಿತ್ತನೆ ಕಾಲದಲ್ಲಿ ಗಂಡರಸ ರಕ್ತ ಹಾಗೂ ಹೃದಯಗಳನ್ನು ಅರ್ಪಿಸುವ ಕ್ರಮವೊಂದಿತ್ತು. ಈಜಿಪ್ಟ್‌ನಲ್ಲಿ ಓಸಿರಿಸ್ ಎಂಬ 'ಬೆಳೆ ದೇವತೆ' ಯನ್ನು ಸಂತೋಷ ಗೊಳಿಸಲು ಕೆಂಗೂದಲಿನ ಜನರನ್ನು ಹಿಡಿದು, ಸುಟ್ಟು, ಬೂದಿಯನ್ನು ಹೊಲದಲ್ಲಿ ಹರಡುತ್ತಿದ್ದರು. ಉತ್ತಮ ಫಸಲು ತೆಗೆಯಲು ನರಬಲಿಯ ಹಲವು ವಿಧಾನಗಳು, ಆಫ್ರಿಕಾ, ಯುರೋಪ್, ಏಷ್ಯಾ ಖಂಡದ ಹಲವು ಪ್ರದೇಶಗಳಲ್ಲಿ ಅನುಸರಿಸಲ್ಪಡುತ್ತಿದ್ದವು.

> [31]**ಚಂದ್ರಮನಂತೆ ಕಳೆ ಸಮನಿಸಿತ್ತೆ ನಗೆ,**
> **ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ,**
> **ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು.**
> **ಇನ್ನೆಂದಿಂಗೆ ಮೋಕ್ಷವಹುದೊ ಕೂಡಲಸಂಗಮದೇವಾ ?**[31]
>
> **ಬಸವಣ್ಣ, ಸಂ.ವ.ಸಂ. 1, ವಚನ ಸಂಖ್ಯೆ –9, ಪುಟ –6.**

ಉತ್ತಮ ಫಸಲು, ಸಕಾಲದಲ್ಲಿ ಮಳೆ, ಉತ್ತಮ ಸಂತಾನ ಪಡೆಯಲು ಹಾಗೂ ಬರಗಾಲ, ರೋಗ, ಪ್ರವಾಹ ಮುಂತಾದ ಪ್ರಾಕೃತಿಕ ವಿಕೋಪಗಳನ್ನು ದೂರವಿಡಲು ನಡೆಸಲ್ಪಡುತ್ತಿದ್ದ ನರಬಲಿ ನಾಗರಿಕತೆ ಬೆಳೆದಂತೆ '**ಪ್ರಾಣಿ ಬಲಿ**'ಯ ರೂಪು ಪಡೆದು ಇನ್ನೂ ಅಸ್ತಿತ್ವದಲ್ಲಿದೆ. **ಗೃಹಪ್ರವೇಶ, ಹೊಸ ಸೇತುವೆ, ಹೋಟೆಲ್, ಥಿಯೇಟರ್, ಕೈಗಾರಿಕೆ** ಮುಂತಾದವುಗಳನ್ನು ಉದ್ಘಾಟಿಸುವಾಗ **ಕುರಿ, ಕೋಳಿ,**

ಆಡುಗಳನ್ನು ಬಲಿಕೊಡುವ ಕ್ರಮ ಈಗಲೂ ಅವ್ಯಾಹತವಾಗಿ ನಡೆಯುತ್ತಿದೆ. ಊರಿನ ಸಾಂಕ್ರಾಮಿಕ ರೋಗಗಳನ್ನು ಹೊರದೂಡಲು ನಡೆಯುವ ಮಾರಿಜಾತೆಗಳಂದು ಸಹಸ್ರಾರು ಕುರಿ, ಕೋಳಿ, ಕೋಣ, ಆಡುಗಳನ್ನು ಬಲಿ ನೀಡುವ ಪದ್ದತಿ ಈ ಇಪ್ಪತ್ತೊಂದನೇ ಶತಮಾನದಲ್ಲೂ ಉಳಿದುಕೊಂಡಿದೆ. ಇದರೊಂದಿಗೆ ದೇವರು, ದೆವ್ವ, ಭೂತ, ಪಿಶಾಚಿಗಳ ಪೂಜಾ ಸಮಯದಲ್ಲಿ ಹಣ್ಣು ಹಂಪಲುಗಳನ್ನು ನೈವೇದ್ಯ ನೀಡುವುದು ಅಹಿಂಸಾ ರೂಪದ ಬಲಿ ಅಥವಾ ಪ್ರಾಣಿ ಬಲಿಯು ಸುಧಾರಿತ ರೂಪ ಎನ್ನಬಹುದು ನರಬಲಿಯಂತೆ, ಪ್ರಾಣಿಬಲಿಯು ಕೂಡ ಕ್ರೂರ ನಂಬಿಕೆಯಾದುದ್ದನ್ನು ಬಸವಣ್ಣನವರು ಸರಳ ಮತ್ತು ಸ್ಪಷ್ಟ ನುಡಿಗಳೊಂದಿಗೆ ಅನ್ಯದೈವಕ್ಕೇರಗಿದಡೆ ಹೊಳ್ಳಕುಟ್ಟ ಕೈ ತೊಟ್ಟೆಯಾದಂತೆ ಆಯಿತ್ತಯ್ಯಾ ಎಂದು ಅಸಮಾಧಾನದಿಂದಲೇ ಕುರಿ, ಕೋಳಿ, ಆಡು ಬಲಿ ನೀಡುವ ಪದ್ಧತಿ ಬಗ್ಗೆ ತಿಳಿಸುತ್ತಾರೆ.

[32]ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ,
ರಸವ ಹಡೆಯಲು ಬಾರದು,
ಮಲಲಿ ಹೊಸೆದಡೆ ಹೊಸೆದಂತಲ್ಲದೆ,
ಸರವಿಯ ಹಡೆಯಲುಬಾರದು,
ನೀರ ಕಡೆದಡೆ ಕಡೆದಂತಲ್ಲದೆ,
ಬೆಣ್ಣೆಯ ಹಡೆಯಲುಬಾರದು.
ನಮ್ಮ ಕೂಡಲಸಂಗಮದೇವನಲ್ಲದೆ
ಅನ್ಯದೈವಕ್ಕೆರಗಿದಡೆ
ಹೊಳ್ಳ ಕುಟ್ಟ ಕೈ ಹೊಟ್ಟೆಯಾದಂತೆ ಆಯಿತ್ತಯ್ಯಾ.[32]
ಬಸವಣ್ಣ, ಸಂ.ವ.ಸಂ. 1, ವಚನ ಸಂಖ್ಯೆ –553, ಪುಟ –137.

ವಚನಕಾರರು ನಿಸರ್ಗ ಮತ್ತು ಕೃಷಿಪದ್ಧತಿಯನ್ನು ನಂಬಿ ವಿಗ್ರಹ ಆರಾಧನೆ ವಿರೋಧಿಸಿರುವುದನ್ನು ಶಿವಲೆಂಕ ಮಂಚಣ್ಣ ಸ್ವಾರಸ್ಯವಾಗಿ ನೀಡಿರುತ್ತಾರೆ.

ಪ್ರಾಕೃತಿಕ ನಿಯಮಗಳನ್ನು ಮೀರಿ ನಡೆಯುವ ಘಟನೆಗಳಿಗೆ ಪವಾಡಗಳು ಎನ್ನುತ್ತಾರೆ. ಅಂತೆಯೇ ಪವಾಡಗಳು ಪ್ರಕೃತಿಯಲ್ಲಿ ನಡೆಯದೆ ಮುಗ್ಧರು, ಅಮಾಯಕರು, ಅಜ್ಞಾನಿಗಳು, ಮೂರ್ಖರು, ಮತಿಭ್ರಮಣೆಗೊಂಡವರ ಮನಸ್ಸುಗಳಲ್ಲಿ ಮಾತ್ರವೇ ನಡೆಯುತ್ತವೆ. ಏಕೆಂದರೆ ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ ಒಂದಲ್ಲ ಒಂದು ಪ್ರಾಕೃತಿಕ ನಿಯಮಕ್ಕೆ ಖಡಾಖಂಡಿತವಾಗಿ ಒಳಪಟ್ಟಿರುತ್ತದೆ. ಕೆಲವು ಅಮಾಯಕರಿಗೆ ಒಂದು ನಿರ್ದಿಷ್ಟ ಪ್ರಾಕೃತಿಕ ನಿಯಮದ ಅರಿವಿಲ್ಲದೆ ಆ ಪ್ರಾಕೃತಿಕ ನಿಯಮಕ್ಕನುಸಾರವಾಗಿ ನಡೆಯುವ ಯಾವುದಾದರೂ ಒಂದು ಘಟನೆ ಪವಾಡವಾಗಿ ಕಾಣಿಸುವ ಸಾಧ್ಯತೆ ಇದೆ. ಉದಾಹರಣೆಗೆ ವಿಗ್ರಹಗಳು ದ್ರವನ್ನು ಹೀರುವುದು, ಬೆಂಕಿ ಕೆಂಡದ ಮೇಲೆ ನಡೆಯುವುದು ಇತ್ಯಾದಿ.

ಪವಾಡಗಳು ಕೇವಲ ಮನಸ್ಸಿನ ಭ್ರಮೆ, ಸುಳ್ಳುಗಳ ಪ್ರಚಾರವಲ್ಲದೆ ಬೇರೇನೂ ಅಲ್ಲ. ಪ್ರಾಕೃತಿಕ, ವೈಜ್ಞಾನಿಕ ನಿಯಮಗಳನ್ನು ಮೀರಿದ ಘಟನೆಗಳು ನಡೆಯಬೇಕು. ಎಂಬ **'ಬಯಕೆಯ'** (WISHFUL THINKING) ಫಲವಾಗಿ ಕೆಲವು ಪವಾಡಗಳು ನಡೆಯುತ್ತವೆ'. ಈ ಪವಾಡಗಳು ವಾಸ್ತವದಲ್ಲಿ ನಡೆಯದೆ ಭ್ರಮಾಧೀನ ಮನಸ್ಸಿಗೆ ನಡೆದಂತೆ ಭಾಸವಾಗುತ್ತವೆ. ಲಾಭದ ಉದ್ದೇಶಕ್ಕಾಗಿ ಪ್ರಜ್ಞಾಪೂರ್ವಕವಾಗಿ ವ್ಯವಸ್ಥಿತವಾಗಿ ಹರಡಿದ ವಂಚನೆಯ ಜಾಲದ ಫಲವಾಗಿ ಪವಾಡಗಳು ನಡೆಯುತ್ತವೆ. ಹಲವು ಮಂದಿರ, ಚರ್ಚು, ಮಸೀದಿಗಳು ಹೆಚ್ಚಿನ ಭಕ್ತರನ್ನು ಆಕರ್ಷಿಸಿ ಹೆಚ್ಚು ಹೆಚ್ಚು ಪ್ರಸಿದ್ಧಿ, ಹಣ ಗಳಿಸಲು ಪವಾಡಗಳ ಬಗ್ಗೆ ಕಟ್ಟುಕಥೆಗಳನ್ನು ಹರಡುತ್ತವೆ. ಮನೆಯ ಗೋಡೆಯಲ್ಲಿ ನೇತುಹಾಕಿದ ಪುಟಪರ್ತಿ ಸಾಯಿಬಾಬಾನ ಪೋಟೋದಿಂದ ಬೂದಿ ಉದುರುವುದು, ಶಿರಡಿ ಸಾಯಿಬಾಬಾನ ದೇವಸ್ಥಾನಕ್ಕೆ ಹೋದರೆ ಕುಷ್ಠ ರೋಗಿಗಳು, ಅಂಧರು, ಗುಣಮುಖರಾಗುವುದು, ಚರ್ಚೊಂದರಲ್ಲಿರುವ ಮೇರಿಯ ವಿಗ್ರಹದ ಕಣ್ಣುಗಳಿಂದ ರಕ್ತ ಸೋರುವುದು ಮೊದಲಾದ ಪವಾಡಗಳು ವಂಚನೆಗಳಲ್ಲದೆ ಬೇರೇನೂ ಅಲ್ಲ.

[33]ಧ್ಯಾನ ಧಾರಣ ಸಮಾದಿ ಯೋಗಂಗಳಿಂದ ಕಾಬುದು ತನುಪ್ರಾಪ್ತಿ ಐಸೆ ?
ಅದು ಸ್ಥೂಲ ಸೂಕ್ಷ್ಮ ಕಾರಣಕ್ಕೆ ಘಟಿಯೋಗಸಂಬಂಧ.
ಅದು ಬ್ರಹ್ಮನ ಭಿತ್ತಿ, ವಿಷ್ಣುವಿನ ಆಗು, ರುದ್ರನ ಚೇಗೆ,
ಅದು ಗುರು ಚರ ಪರಕ್ಕೆ ಕೊಟ್ಟ ಹಸಿಗೆ,
ಸಾಕಾರದಲ್ಲಿ ಕಂಡು, ನಿರಾಕಾರದಲ್ಲಿ ಅರಿದು,
ಬೆಳಗಿನ ಬಯಲಿಲ್ಲಿ ನಿರವಯಾಂಗನಾಗಿ ಇರಬೇಕು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವನರಿವುದಕ್ಕೆ ॥[33]

ಶಿವಲೆಂಕಮಂಚಣ್ಣ, ಸ.ವ.ಸಂ. 9, ವಚನ ಸಂಖ್ಯೆ –152, ಪುಟ –58

ದೇವಮಾನವರು ಎನಿಸಿಕೊಂಡ **ಢೋಂಗಿ ಬಾಬಾಗಳು, ಸಿದ್ಧರು, ಮಹರ್ಷಿಗಳು, ಸ್ವಾಮಿಗಳು, ಜಗದ್ಗುರುಗಳು ತಮ್ಮ ಭಕ್ತರು** ಅನುಯಾಯಿಗಳ ಸಂಖ್ಯೆಯನ್ನು ಓಡಿಸಬಲ್ಲೆವು, ಶೂನ್ಯದಿಂದ **ಬೂದಿ, ವಾಚು, ಸರ, ಬಳೆ ಇತ್ಯಾದಿಗಳನ್ನು ಸೃಷ್ಟಿಸಬಲ್ಲೆವು,** ಸಂತಾನಹೀನರಿಗೆ ಮಕ್ಕಳನ್ನು ನೀಡಬಲ್ಲೆವು ಎಂಬಿತ್ಯಾದಿ ಸುಳ್ಳುಗಳನ್ನು ತಮ್ಮ ಭಂಟರ ಮೂಲಕ ಪ್ರಚಾರಪಡಿಸುತ್ತಾರೆ. ವೈಜ್ಞಾನಿಕ ಮನೋಭಾವದ ಕೊರತೆಯಿಂದಾಗಿ ಸಾಮಾನ್ಯ ಜನರು ಈ ಸುಳ್ಳುಗಳನ್ನು ಪವಾಡಗಳೆಂದು ನಂಬುತ್ತಾರೆ.

ಬಸವಣ್ಣ ಮತ್ತು ಶಿವಲೆಂಕಮಂಚಣ್ಣನವರು ತಿಳಿಸಿದಂತೆ ಅವತಾರ ಪುರುಷರ ಬಗ್ಗೆ ವ್ಯವಸ್ಥಿತ ಪ್ರಚಾರ ಮೌಢ್ಯತೆಗೆ ಕಾರಣವಾದುದ್ದನ್ನು ಡಾ.ಹೆಚ್. ನರಸಿಂಹಯ್ಯರವರು ಹೀಗೆ ಹೇಳಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯ ವೈಸ್ ಚಾನ್ಸಲರ್ ಆಗಿದ್ದ **ಶಿಕ್ಷಣ ತಜ್ಞ ಡಾ. ಹೆಚ್. ನರಸಿಂಹಯ್ಯನವರ** ನೇತೃತ್ವದಲ್ಲಿ ಹನ್ನೆರಡು ಜನರ ಒಂದು ಸಮಿತಿ ನಿರ್ಮಾಣವಾಗಿ ಈ **'ಮರಿ ಸಾಯಿಬಾಬಾ'**ನ ನಿಜಬಣ್ಣ ಬಯಲು ಮಾಡಲು ನಿರ್ಧರಿಸಿತು. ಅದರಂತೆ ಸಮಿತಿಯ ಮೂವರು ಸದಸ್ಯರು ಜುಲೈ 15, ಗುರುವಾರ

1978 ರಂದು ದರ್ಶನಾರ್ಥಿಗಳೆಂದು ಅವನ ಆಶ್ರಮಕ್ಕೆ ಹೋಗಿ ಭಜನೆ ಮಾಡುತ್ತಿದ್ದ ಇತರ ಭಕ್ತರೊಂದಿಗೆ ಸೇರಿಕೊಂಡರು. ಅಂದು ಯಾವ ಪವಾಡವೂ ನಡೆಯಲಿಲ್ಲ. ಮಲಗಿದ್ದ **'ಮರಿ ಸಾಯಿಬಾಬಾ'** ಎದ್ದು ಕುಳಿತ. ಭಕ್ತಗಣ ಇನ್ನೇನು ಎದ್ದು ಹೋಗಲಿತ್ತು. ಅಷ್ಟರಲ್ಲಿ ಸಮಿತಿಯ ಒಬ್ಬರಿಗೆ **'ಮರಿ ಸಾಯಿಬಾಬಾ'** ಪದೇ ಪದೇ ತನ್ನ ಸೊಂಟಕ್ಕೆ ಕೈಹಾಕಿಕೊಳ್ಳುತ್ತಿದ್ದುದು ಕಾಣಿಸಿತು. ಜತೆಗೆ ಅವನು ಸೊಂಟದಲ್ಲಿ ಒಂದು ಲಾಡಿ ನೋತಾಡುವುದೂ ಗೋಚರಿಸಿತು. ಕುತೂಹಲ, ಅನುಮಾನಗೊಂಡ ಆ ಸದಸ್ಯರು **'ಮರಿ ಸಾಯಿಬಾಬಾ'**ನ ಬಳಿ ಹೋಗಿ, ಆ ಲಾಡಿಯನ್ನು ಎಳೆದರು. ಅಷ್ಟೇ । ಅವನ ಒಳ ಉಡುಪಿನಿಂದ ಬುರಬುರನೆ ಬೂದಿ ನೆಲಕ್ಕೆ ಉದುರಿತು । ಭಕ್ತರ ಎದುರು ಬಟ್ಟಂಬಯಲಾದ ಆ **'ಮರಿ ಸಾಯಿಬಾಬಾ'**ನ ಅವತಾರ ಅಂದಿಗೆ ಕೊನೆಗೊಂಡಿತು ।

'ಅವತಾರ ಪುರುಷರು ಅಲ್ಲಲ್ಲಿ ಆಗಾಗ್ಗೆ ಕಾಣಸಿಗುತ್ತಾರೆ. ಇವರಿಗೆ ವ್ಯವಸ್ಥಿತ ಪ್ರಚಾರ ನೀಡಲು ಕೆಲವು ಪ್ರತಿಷ್ಠಿತ ಏಜೆಂಟರೂ ಇರುತ್ತಾರೆ. ಇಸ್ರೇಲಿನ **'ಅತೀಂದ್ರಿಯ ಮಾನವ'** ಯೂರಿಗೆಲ್ಲರ್‌ಗೆ ನ್ಯೂಯಾರ್ಕಿನ ಡಾ. ಆಂಡ್ರಿಜಾ ಪುಹಾರಿಚ್ ಇದ್ದರೆ, ಸತ್ಯ ಸಾಯಿಬಾಬಾ **'ಜೀವಂತ ದೇವರು'** ಎಂದು ಪ್ರಚಾರ ನೀಡಲು ಡಾ.ಎನ್. ಭಗತವಂತರಂತಹ ಅವೈಜ್ಞಾನಿಕ ವಿಜ್ಞಾನಿ, ಗೋಕಾಕರಂತಹ ಸಾಹಿತಿಗಳು ಇರುತ್ತಾರೆ. ಆದರೆ ಒಂದು ಸಮಾಧಾನದ ಸಂಗತಿಯೆಂದರೆ ಈ **'ಅವತಾರ ಪುರುಷ'ರ** ಬಣ್ಣ ಬಯಲು ಮಾಡಲು ಹಲವು ವಿಜ್ಞಾನಿಗಳೂ, ವಿಚಾರವಾದಿಗಳು ಹುಟ್ಟಿಕೊಳ್ಳುವುದು. **'ಟೆಲಿಪತಿ ಶಕ್ತಿ'** ಯಿಂದ ಮೊಳೆ, ಚಮಚ, ಬೀಗದ ಕೈಗಗಳನ್ನು ಬಗ್ಗಿಸುವುದು, **'ಸೈಕೋಕೈನೆಸಿಸ್ ಶಕ್ತಿ'**ಯಿಂದ ಸಾವಿರಾರು ಮೈಲಿ ದೂರಕ್ಕೆ ತನ್ನ ಮಾನಸಿಕ ಆಲೋಚನೆಗಳನ್ನು ರವಾನಿಸುವುದು, ಅತೀಂದ್ರಿಯ ಶಕ್ತಿಯಿಂದ ಒಂದು ವಸ್ತು ತನ್ನಷ್ಟಕ್ಕೆ ತಾನು ಒಂದಡೆಯಿಂದ ಇನ್ನೊಂದೆಡೆಗೆ ಹಾರುವಂತೆ ಮಾಡುವುದು ಮುಂತಾದ ಪವಾಡ ಶಕ್ತಿಗಳು ತನಗಿವೆ ಎಂದು ಹೇಳಿ ಜಗತ್ತಿನ ಹಲವು ವಿಜ್ಞಾನಿಗಳು, ಪತ್ರಕರ್ತರನ್ನು ವಂಚಿಸಿದ ಯೂರಿಗೆಲ್ಲರ್‌ನನ್ನು ವಿಚಾರವಾದಿ ಜೇಮ್ಸ್ ರಾಂಡಿ ಬಯಲಿಗೆಳೆದರು. ತಾನೊಬ್ಬ ದೇವರ ಅವತಾರ. ತನಗೆ ಪವಾಡ ಶಕ್ತಿಗಳಿವೆ ಎಂದು ಬೂಟಾಟಿಕೆ ತೋರಿಸಿದ ಸತ್ಯ ಸಾಯಿಬಾಬಾನನ್ನು ಡಾ.ಅಬ್ರಾಹಂ ಕಪೂರ್, ಪಿ.ಸಿ. ಸರ್ಕಾರ್, ಡಾ. ಹೆಚ್ ನರಸಿಂಹಯ್ಯನವರು ಬೆತ್ತಲೆಗೊಳಿಸಿದರು. ಹೊಟ್ಟೆಯ ಮೇಲೆ ಚಿಕ್ಕದೊಂದು ಟೇಪ್‌ರೆಕಾರ್ಡರ್ ಅದರ ಮೇಲೆ ದಿಂಬು, ಅದರ ಮೇಲೆ ಉದ್ದ ನಿಲುವಂಗಿ ತೊಟ್ಟು ತನ್ನ **'ಗರ್ಭದೊಳಗಿನ ಭ್ರೂಣ ಕುರಾನು ಪಠಿಸುತ್ತದೆ'** ಎಂದು ಹೇಳಿ ಇಂಡೋನೇಶಿಯಾದ ಜನರನ್ನು ಮರುಳುಗೊಳಿಸಿದ ಒಬ್ಬಳು ಮುಸ್ಲಿಂ ಸ್ತ್ರೀಯ ಒಳ ರಹಸ್ಯವನ್ನು ಅಲ್ಲಿನ ವಿಜ್ಞಾನಿಗಳು ಹೊರಗೆಳೆದರು. ತಾನೊಬ್ಬ ಸಂತ, ದೇವಮಾನವನೆಂದು ಹೇಳಿಕೊಂಡ **ಚಂದ್ರಸ್ವಾಮಿಯಂತಹ** ಬೂಟಾಟಿಕೆಗಾರರನ್ನು ಲಕ್ನೂ ಭ್ಯಾ ಪಾಠಕ್ ಕೋರ್ಟಿಗೆ ಎಳೆದು, ತಿಹಾರ್ ಜೈಲಿಗೆ ಕಳಿಸಿದರು.[i]

[34] ಪದಾರ್ಥದೊಳಗೆ ಪ್ರಸಾದರೂಪುಂಟು,

ಪ್ರಸಾದದೊಳಗೆ ಪದಾರ್ಥರೂಪುಂಟು,

ಉಂಟು ಇಲ್ಲಾಯೆಂಬುವರು ನೀವು ತಿಳಿದು ನೋಡಿರಯ್ಯಾ,

ನಾವಿದನರಿಯೆವಯ್ಯಾ

ಸೋಮಭೀಮೇಶ್ವರಲಿಂಗವು ತಾವೇ ಬಲ್ಲರು.[34]

ಸೋಮಭೀಮೇಶ್ವರ ಲಿಂಗ-ಸಂ.ವ.ಸಂ.12, ವಚನ ಸಂಖ್ಯೆ -1465, ಪುಟ -1

ಈ ವಚನದಲ್ಲಿ **ಪ್ರಸಾದ ಮತ್ತು ಪದಾರ್ಥ** ಮತ್ತು **ಪ್ರಸಾದ** ಎಂಬ ಅವಿನಾಭಾವ ಸೂಚಿಸುತ್ತವೆ ಸಂತೋಷ, ನೆಮ್ಮದಿ, ಧೈರ್ಯದ ಮನೋಭಾವದಲ್ಲಿನ ನಂಬಿಕೆಯನ್ನು ವಿವರಿಸುತ್ತದೆ.

ಶೂನ್ಯದಿಂದ ಯಾವುದೇ ವಸ್ತುವನ್ನು ಸೃಷ್ಟಿಸುವುದಾಗಲೀ, ಯಾವುದೇ ವಸ್ತುವನ್ನು ಶೂನ್ಯ (ನಾಶ) ಗೊಳಿಸುವುದಾಗಲೀ ಸಾಧ್ಯವಿಲ್ಲವೆಂಬ ಮೂಲಭೂತ ಪ್ರಾಕೃತಿಕ ನಿಯಮದ ಅರಿವಿಲ್ಲದ ಜನ ಪವಾಡಗಳನ್ನು ನಂಬುತ್ತಾರೆ. ಇಂತಹವರು ಪವಾಡಗಳನ್ನು ರುಜುವಾತು ಪಡಿಸಲು ವೈಜ್ಞಾನಿಕ ಸಾಕ್ಷ್ಯಾಧಾರಗಳಿಲ್ಲವೆಂಬ ಅಂಶವನ್ನು ಪರಿಗಣಿಸುವುದಿಲ್ಲ. ಬಹುತೇಕ ಜನ ಪವಾಡಗಳನ್ನು ನಂಬಲು ಸಾಕ್ಷ್ಯಾಧಾರಗಳ ಅಗತ್ಯ ಅಷ್ಟಾಗಿ ಇಲ್ಲ ಎಂದು ವಾದಿಸುತ್ತಾರೆ. ಯಾವುದನ್ನು ನಂಬುವುದರಿಂದ ಹೆಚ್ಚು ಸಂತೋಷ, ನೆಮ್ಮದಿ, ಧೈರ್ಯ ಸಿಗುತ್ತದೋ ಅದನ್ನು ನಂಬಬೇಕೆಂಬ ಮನೋಭಾವವನ್ನು ಹಲವರು ಬೆಳೆಸಿಕೊಂಡಿದ್ದಾರೆ. ಇಂತಹ ಸಂತೋಷ, ನೆಮ್ಮದಿ, ಧೈರ್ಯ, ಶರಾಬು ಕುಡಿದಾಗ, ಗಾಂಜಾ, ಎಲ್.ಎಸ್.ಡಿ. ಭಂಗಿ ಮೊದಲಾದ ವಸ್ತುಗಳು ದೇಹಕ್ಕೆ ಹೇಗೆ ಹಾನಿಕಾರಕವೋ ಹಾಗೆಯೇ ಮೂಢನಂಬಿಕೆಗಳು ಸಮಾಜಕ್ಕೆ ಹಾನಿಕಾರಕ.

ವಚನಗಳು – ಮೂಢನಂಬಿಕೆ – ಪವಾಡ

[35]ಅಚ್ಚಮುತ್ತೈದೆ ಮೆಚ್ಚಿದ ಗಂಡನ ಕೈವಿಡಿದು

ಬಿಸಿಲು ಬೆಳದಿಂಗಳದಲ್ಲಿ ಸಸಿನೆ ನಡೆವಳು ನೋಡಾ.

ನೀರ ಜಲದಲ್ಲಿ ತೊಳೆದು ಗುರುನಿರಂಜನ ಬಸವಲಿಂಗದಭಿಷೇಕವ

ನಿತ್ಯ ಮಾಡುವಳು ನೋಡಾ.[35]

ಸಂಗನಬಸವಯ್ಯ, ಸ.ವ.ಸಂ-12, ವಚನ 246, ಪುಟ – 74.

ವಚನಕಾರರು **ಪಂಚೀಕರಣ ತತ್ವವನ್ನು** ಅನುಮೋದಿಸುತ್ತಲೇ ಮಾಟ ಮಂತ್ರ ಪವಾಡಗಳಿಗೆ ಸ್ಪಷ್ಟ ಚಿಂತನೆ ನೀಡಿರುತ್ತಾರೆ. ಅಚ್ಚಮುತ್ತೈದೆ ಎಂಬ ಪರಿಕಲ್ಪನೆ ಜೀವನ ಪದ್ಧತಿ, ಜೀವನ ಕ್ರಮವನ್ನು ಕುರಿತಾದ ನಂಬಿಕೆಗಳು ಪ್ರಬಲವಾದ ನವ ಸಮಾಜ ನಿರ್ಮಾಣದ ನಂಬಿಕೆಗಳು ಎಂದು ದೃಢಪಡಿಸುತ್ತಾರೆ.

ಕೆಲವರಿಗೆ ಕೆಟ್ಟ ಆಲೋಚನೆಗಳನ್ನು ಮಾಡದಿದ್ದರೆ ತಿಂದ ಅನ್ನ ಜೀರ್ಣವಾಗೊಲ್ಲ ಅಂತಾರಲ್ಲ ಹಾಗೆ, ಹಳ್ಳಿಗಳಲ್ಲಿ ಕೆಲವರ ಬಗ್ಗೆ ದ್ವೇಷ, ಅಸೂಯೆ ಹೊಂದಿರುವವರು ಮಾಟ – ಮಂತ್ರ ಮಾಡಿಸಿ ವಾಮಾಚಾರಗಳ ಮೂಲಕ ಖುಷಿ ಪಡುವವರಿದ್ದಾರೆ. **ವಾಮಾಚಾರ ಮಾಡುವವರಲ್ಲಿ ಹೋದಾಗ ತಿಥಿ / ಅಮಾವಾಸೆ / ನಕ್ಷತ್ರಗಳನ್ನು ಗುಣಿಸಿದಂತೆ ನಟಿಸಿ, ಸಾಕಷ್ಟು ಹಣ ಕಿತ್ತು, ಸಾವಿರಾರು ರೂ. ಖರ್ಚು ಮಾಡಿಸಿ ಸಾಮಾನುಗಳನ್ನು ತರಿಸಿ ನಮಗಾಗದವರ ಮೇಲೆ ಪ್ರಯೋಗಿಸಿದ್ದೇನೆ,** ಇನ್ನು ಕೆಲವೇ ದಿನಗಳಲ್ಲಿ ಶತ್ರುಗಳು ಸಂಕಷ್ಟಕ್ಕೆ ಗುರಿಯಾಗುತ್ತಾರೆಂದು ನಂಬಿಸುತ್ತಾನೆ.

ವಾಮಾಚಾರಿಗಳು ಮನೋಶಾಸ್ತ್ರಜ್ಞರಿದ್ದಂತೆ. ದುರ್ಬಲ ಮನಸ್ಸಿನವರ ಮೇಲೆ ಇಂತಹ ವಿಚಾರಗಳನ್ನು ಹರಿಯಬಿಡುವ ಆಪ್ತ (ಪಾಲುದಾರ)ರನ್ನು ಹೊಂದಿರುತ್ತಾರೆ. ಅವರ ವಿರುದ್ಧದ ಮನೆಯವರನ್ನು ಗುಪ್ತವಾಗಿ ಸಂಪರ್ಕಿಸಿ / ಕುಟುಂಬದವರು ಆರೋಗ್ಯವಾಗಿಲ್ಲ, ಮಕ್ಕಳ ಲಗ್ನ ನೆರವೇರೋದು ಕಷ್ಟ ಇತ್ಯಾದಿ ವಿಚಾರಗಳನ್ನು ಅವರ ತಲೆಗೆ ತುಂಬಿ ನಿಮಗಾಗದವರಾರೋ ಮಾಟ ಮಾಡಿಸಿದ್ದಾರೆ. ಹಾಗಾಗಿಯೇ ಹೀಗಾಗಿರೋದು ಅದನ್ನು ಕಿತ್ತಲ್ಲಿ ಎಲ್ಲಾ ಸರಿಹೋಗುತ್ತೆಂದು ನಂಬಿಸುತ್ತಾರೆ. ಕಾಕತಾಳೀಯವಾಗಿ ಕೆಲ ಘಟನೆಗಳು ಘಟಿಸಿದ್ದಲ್ಲಿ ವಾಮಾಚಾರರನ್ನು ಕರೆತಂದು ಮಾಟ ಕೀಳಬೇಕೆಂದು ಇವರಿಂದಲೂ ಹಣ ಕೀಳುತ್ತಾರೆ. ಹಗೆತನವಿರುವ ೩ ಕುಟುಂಬದವರ ದುರ್ಬಲ ಮನಸ್ಸನ್ನು ಇವರು ಅರಿತವರಾಗಿರುತ್ತಾರೆ. ಈ ಅಂಶ ಯಾರಲ್ಲೂ ಹೇಳಬಾರದೆಂದು ಭಯ ಹುಟ್ಟಿಸುತ್ತಾರೆ. ಮಾಟಾ ತೆಗೆಯುವುದು / ಮಾಡುವುದು ಇಂಥ ದಿನವೆಂದು ನಿಗದಿ ಮಾಡುವ ಪೂರ್ವದಲ್ಲೇ ಸದರಿಯವರ ಮನೆಗಳ ಆಯಕಟ್ಟಿನ ಜಾಗಗಳಲ್ಲಿ ಗುಪ್ತವಾಗಿ ಕೆಲವಸ್ತುಗಳನಿಟ್ಟು ಮಾಟ ಕೀಳುವ ನಾಟಕವಾಡುತ್ತಾರೆ. ತಾಮ್ರದ ಮೊಳೆ, ಲಿಂಬೆ ಹಣ್ಣು, ಅರಿಶಿಣ ಕುಂಕುಮ ಇತ್ಯಾದಿ ಸಾಮಗ್ರಿಗಳನ್ನು ಕಿತ್ತು ತೋರಿಸಿ ಪರಾರಿಯಾಗುತ್ತಾರೆ. ಇವರು ಎಷ್ಟು ನಿಷ್ಣಾತರೆಂದರೆ ದುರ್ಬಲ ಮನಸ್ಸಿನವರನ್ನು ಮಾತ್ರ ಗಾಳ ಹಾಕುತ್ತಾರೆ.

ದುರ್ಬಲಮನಸ್ಸಿನ ಮನೋಭಾವಕ್ಕೆ ವಚನಕಾರರ ವಚನಗಳು ಚಿಕಿತ್ಸಕನಂಬಿಕೆಗಳಾಗಿ ಕಟ್ಟಳೆ ಸಂಪ್ರದಾಯವಾಗಿ ಪ್ರಭಾವಬೀರಿದೆ. **ವಚನಕಾರರು ಭವಿಷ್ಯ, ಚಿಕಿತ್ಸೆ, ಪುರಾಣ, ಸಂಪ್ರದಾಯ, ಪವಾಡ, ನಂಬಿಕೆ, ಮೌಢ್ಯತೆ, ಕಟ್ಟಳೆ, ಸ್ವಪ್ನ, ಅಚ್ಚಮುತ್ತೈದೆ ಈ ಎಲ್ಲವನ್ನು ಜನಸಾಮಾನ್ಯರು ತಮ್ಮ ಗ್ರಹಿಕೆಯ ನೆಲೆಯಲ್ಲಿ ವೈಚಾರಿಕಾ ವ್ಯಕ್ತಿತ್ವ ಪಡೆದಿದ್ದನ್ನು** ನಿರೂಪಿಸುತ್ತಾರೆ.

[36]ಅಯ್ಯಾ, ನೆಲಜಲಾಗ್ನಿ ಮರುತಾಕಾಶವಿಲ್ಲದ
ಪಂಚವರ್ಣಿಗೆಯ ಗರ್ದುಗೆಯ ಹಾಸಿ,
ಪಶ್ಚಿಮದತ್ತ ಸ್ವಾಚ್ಛಾಲಯದ ಸ್ವಯಾನಂದ ಮೂರುತಿಯ
ಎನ್ನರುವಿನಮುಖದಿಂದೆ ಕರೆತಂದು ಮೂರ್ತಿಗೊಳಿಸಿ,
ಸತ್ಯೋದಕದಿಂದೆ ಪಾದಾಭಿಷೇಕವ ಮಾಡಿ
ತ್ರಿಪುಟಿಯ ದಹಿಸಿ ಭಸಿತವ ಧರಿಸಿ, ಹೃದಯಕಮಲವನೆತ್ತಿ ಧರಿಸಿ,
ಶ್ರದ್ಧೆಧೂಪವರ್ಪಿಸಿ, ಸೋಹಂ ಎಂಬ ಚಾಮರ ಢಾಳಿಸಿ,
ಸುಜ್ಞಾನಜ್ಯೋತಿಯ ಬೆಳಗನೆತ್ತಿ
ಜಯ ಜಯ ಮಂಗಳವೆಂದು ಅರ್ಚಿಸುವೆನಯ್ಯಾ ಅನುದಿನ
ಗುರುನಿರಂಜನ ಚನ್ನಬಸವಲಿಂಗದಲ್ಲಿ ಎನ್ನ ಪ್ರಾಣಲಿಂಗಕ್ಕೆ.[36]

ಸಂಗನ ಬಸವಯ್ಯ, ಸಂ.ವ.ಸಂ.12, ವಚನ 523, ಪುಟ-159.

ವ್ಯಾಪಾರನಷ್ಟ / ಅವಿಭಕ್ತ ಕುಟುಂಬಗಳಲ್ಲಿ ಕಲಹ/ಮನೆ ಆಯುಸ್ಸು ಮುಗಿದಿದೆ ಎಂದೋ ದುರ್ಬಲ ಮನವನ್ನು ಕದಡಿ ಕಟ್ಲೆ ಮಾಡಿಸಿದರೆ ಸರಿಹೋಗುತ್ತೆಂದು ವಾಮಾಚಾರ ಮಾಡುವ ಡೋಂಗಿ ಬಾಬಾ / ಸ್ವಾಮಿಗಳು, ಹತ್ತಾರು ಸಾವಿರ ರೂ.ಗಳ ಸಾಮಾನು ತರಿಸಿ, ಸಿಪ್ಪೆ ಸಹಿತವಿರುವ ತೆಂಗಿನಕಾಯಿಗಳನ್ನು ಪೂಜಿಸಿ ಎತ್ತರ ತೊಲೆ ಮೂಲೆಗಳಲ್ಲಿ ಕಟ್ಟಿಸಿ ಹೊಸ್ತಿಲ ಮೇಲೆ ತೊಲೆಗೆ ಹೊಸಬಟ್ಟೆ ಕಟ್ಟಿಸಿದ ತೆಂಗಿನ ಕಾಯಿ ಮೇಲೆ ಓಂ / ಎಂದು ಬರೆಯಿಸಿ ಪ್ರತಿವಾರವೂ ಪೂಜಿಸುತ್ತಿರಬೇಕು ಎಂದು ಹೇಳಿ ಮನೆ ಸದಸ್ಯರಿಗೆ ತಾಮ್ರದ ತಾಯತ ಕಟ್ಟಿಕೊಳ್ಳಲು ಕೊಡುವರು.

ಇನ್ನೂ ವಿಚಿತ್ರವೆಂದರೆ ಹಳ್ಳಿಗಳಲ್ಲಿ ಕೆಲ ಡೋಂಗಿ ಸ್ವಾಮಿಗಳು ಇಡೀ ಊರಿಗೇ ಕೇಡಾಗಿದೆ, ಮುಂದಿನ ಕಟ್ ಅಮವಾಸೆಯೊಳಗೆ ಭಾರೀ ಅನಾಹುತಗಳಾಗುತ್ತವೆ. ಅದನ್ನು ಶಮನ ಮಾಡಲು ಇಡೀ ಊರಿಂದೂರಿಗೇ ಕಟ್ಲೆ ಮಾಡಿಸಲು ದುರ್ಬಲ ಮನಸ್ಸಿನ ಮುಖಂಡರನ್ನು ವಶೀಕರಣ ಮಾಡಿಕೊಂಡು ೮೦ ಸಾವಿರದ ೧ ಲಕ್ಷ ರೂ.ಗಳವರೆಗೂ ಹಣ, ವಸ್ತುಗಳನ್ನು ಬಾಚಿಕೊಂಡು, ಊರಿನ ಸುತ್ತಲೂ ಪ್ರದಕ್ಷಿಣೆ ಹಾಕಿ ೪ ದಿಕ್ಕುಗಳಲ್ಲೂ ಗುಂಡಿ ತೆಗೆಸಿ, ಕಲ್ಲುಗಳನ್ನು ಹುಗಿಸಿ ಅಗಸೆ ಬಾಗಿಲಲ್ಲಿ ದೊಡ್ಡ ಕಲ್ಲನ್ನು ಹುಗಿಸಿ ನವಧಾನ್ಯ, ನಿಂಬೆಹಣ್ಣು, ವಿಭೂತಿ, ನಂಬುವಂತಹ ವಸ್ತುಗಳನ್ನು ಗುಂಡಿಯಲ್ಲಿರಿಸಿ, ಮಣ್ಣುಮುಚ್ಚಿಸಿ ಭಯಂಕರ ಕಟ್ಪಲೆ ಮಾಡಿದ್ದೇನೆ ಇನ್ಮೇಲೆ ಎಲ್ಲಾ ಸರಿಹೋಗುತ್ತೆಂದು ಅಲ್ಲಿಂದ ಕಂಬಿ ಕೀಳುತ್ತಾರೆ.

ಈ ಪ್ರಸಂಗಗಳಲ್ಲಿನ ವಿದ್ಯಮಾನವೆಂದರೆ ದೈವದ ಹೆಸರಲ್ಲಿ ದುರ್ಬಲ ಮನಸ್ಸನ್ನು ಬಳಸಿಕೊಂಡು ತಮ್ಮ ಸಂಪನ್ಮೂಲ ಹೆಚ್ಚಿಸಿಕೊಳ್ಳುವುದೇ ಆಗಿದೆ. ಸೊಪ್ಪಿನ ತೆಂಗಿನ ಕಾಯಿ, ನಿಂಬೆಹಣ್ಣು, ಕುದುರೆ ಲಾಳ ಪೂಜಿಸಿದಾಕ್ಷಣಕ್ಕೆ, ಊರಿಗೇ ದಿಗ್ಬಂಧನ ಹಾಕಿ ರಾತ್ರೋ ರಾತ್ರಿ ಬ್ಯಾಟರಿ ಹಿಡಿದು ಕಲ್ಲು ಹುಗಿಸಿದಾಕ್ಷಣಕ್ಕೆ

ಎಲ್ಲಾ ಸೌಲಭ್ಯಗಳು ದೊರೆಯುವುದಾಗಲೀ, ಕಾಯಿಲೆ ಕಸಾಲೆಗಳು ಬರುವುದೇ ಇಲ್ಲ ಎಂದೂ ಎಲ್ಲರ ಮನೆಯ ಕಷ್ಟ ನಿವಾರಣೆ ಏನೂ ಆಗುವುದಿಲ್ಲ. ಅನಾಯಾಸವಾಗಿ ವಾಮಾಚಾರಿಗಳ ಜೋಳಿಗೆಗೆ ಲಕ್ಷಾಂತರ ರೂ.ಗಳು ಭರ್ತಿಯಾಗುತ್ತದೆ ಅಷ್ಟೆ. ಊರಿಗೆ ದಕ್ಕಿದ್ದು ತಾತ್ಕಾಲಿಕ ಸಮಾಧಾನ !

[37]ಗಂಡನುಳ್ಳ ಹೆಂಡಿರನು ಕಂಡು ಅಳುಪದಿರು ಮನವೆ

ಬಂದ ಬಸುರನೂ ಉಂಡ ಮೊಲೆಯನೂ ಕಂಡು ಮರುಗದಿರಾ ಮನವೆ.

ಉದ್ಧಂಡತನದಲ್ಲಿ ನಡೆವ ಭಂಡರನು.

ಹುಳುಗೊಂಡದಲ್ಲಿಕ್ಕುವ ಸೊಡ್ಡಳದೇವ [37]

ಸೊಡ್ಡಳಬಾಚರಸ ಸ.ವ.ಸಂ 9, ವಚನ ಸಂಖ್ಯೆ –760, ಪುಟ –232

(ಕರಣಿಕ **ಸೊಡ್ಡಳಬಾಚರಸರು** ಬಿಜ್ಜಳನ ಅರಮನೆಯಲ್ಲಿಯ ಕಣಜಗಳಿಂದ ಧಾನ್ಯ ಅಳೆದುಕೊಡುವ, ಕೊಟ್ಟುದರ ಲೆಕ್ಕ ಬರೆಯುವ ಕಾಯಕ ನಿರ್ವಹಿಸುತ್ತಿದ್ದರು. ಇವರು ಬಸವಣ್ಣನವರಿಗೆ ತೀರ ಹತ್ತಿರದವರು, ನಿಷ್ಠಾವಂತ ವ್ಯಕ್ತಿಯು ಎನಿಸಿದರು. ಅನುಭವ ಮಂಟಪದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದ ಸೊಡ್ಡಳಬಾಚರಸರು ಸೌರಾಷ್ಟ್ರದ ಸೋಮನಾಥನ ಭಕ್ತರಾಗಿದ್ದರು. ಈತನ ವಚನಗಳಲ್ಲಿ ನೀತಿ ಭೋದೆ, ಶರಣ ಸತ್ಸಂಗ, ದೈವನಿಷ್ಠೆ, ಜೀವನ ನಿಷ್ಠೆ, ಭಕ್ತಿಯ ಉತ್ಕಟತೆ, ಅನ್ಯಮತ, ಅನ್ಯದೈವ ದೂಷಣೆ ಮುಂತಾದ ವಿಷಯಗಳನ್ನು ಸಾದರ ಪಡಿಸುತ್ತಾರೆ)

ದುರ್ಬಲ ಮನಸ್ಸಿನ ಮೇಲೆ ವಚನಕಾರರು ಸಬಲತೆಯ ಹಿನ್ನಲೆಯಲ್ಲಿ ನಿಸರ್ಗ, ಕೃಷಿ, ಜೀವನಪದ್ಧತಿಯನ್ನು ಅತ್ಯಂತ ಸರಳವಾಗಿ ಸಮಾಜೀಕರಣ ಮಾಡುವತ್ತ ವಚನಗಳನ್ನು ವೈಜ್ಞಾನಿಕ ನೆಲೆಯಲ್ಲಿ ಅರ್ಥಾತ್ ಚಿಕಿತ್ಸಕ ಮಾದರಿಯಲ್ಲಿ ಜನಸಾಮಾನ್ಯರನ್ನು ಸಬಲರನ್ನಾಗಿಸಿದರು.

[38]ಜಾಗ ಸ್ವಪ್ನ ಸುಷುಪ್ತಿಯಲ್ಲಿ ವಿಶ್ವ, ತೈಜಸ ಪ್ರಾಣನಾಗಿಪ್ಪ ಕಾರಣ,

ಅಹೋರಾತ್ರಿಯ್ಲಿ ನಿಮ್ಮ ನೆನಹೆನಗೆ,

ಚೆನ್ನಬಂಕೇಶ್ವರಲಿಂಗವೆ, ಎನ್ನ ಸಜ್ಜನಿಕೆಯ ದಿಟವ ಮಾಡನ್ನ ತಂದೆ॥[38]

ಸುಂಕದ ಬಂಕಣ್ಣ ಸ.ವ.ಸಂ.–9, ವಚನ ಸಂಖ್ಯೆ 713, ಪುಟ –217

(**ಸುಂಕದ ಬಂಕಣ್ಣ** ಸುಂಕಿಗ ವೃತ್ತಿಯವ, ಈತನು **'ಬಂಕೇಶ್ವರ ಲಿಂಗ'** ಅಂಕಿತದಲ್ಲಿ ವಚನ ಬರೆದಿದ್ದಾನೆ. ಈ ಶರಣ ನಿತ್ಯವು ಜಂಗಮಾರ್ಚನೆ ಮಾಡುತ್ತಿದ. ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಸ್ಥಲಗಳಿಂದ ಕೂಡಿರುತ್ತದೆ. ಆ ಕಾಲದ **ವ್ಯಾಪಾರ ಪದ್ಧತಿ, ಸುಂಕ ಪದ್ಧತಿ, ಮಾರ್ಗ ಪದ್ಧತಿ ಹಾಗೂ ಸರಕು ಸಾಗಾಣಿಕೆಯ** ಸಾಧನಗಳನ್ನು ತಿಳಿಸುವ ಈತನ ವಚನಗಳಿಗೆ ಸಾಂಸ್ಕೃತಿಕ ಮಹತ್ವವಿದೆ. ಇದಲ್ಲದೆ **ಶಿವಶರಣರ ಸ್ತುತಿ, ದೈವಸಾಕ್ಷಾತ್ಕಾರ, ಪರಮಾತ್ಮನ ಸ್ವರೂಪ** ಮೊದಲಾದ ವಿಷಯಗಳನ್ನು ವಚನಗಳು ಒಳಗೊಂಡಿರುತ್ತದೆ).

ವಚನಕಾರರು ಸ್ವಪ್ನದ ಬಗೆಗಿನ ತಮ್ಮ ಆಲೋಚನೆಗಳನ್ನು ವೈಜ್ಞಾನಿಕವಾಗಿ ವಿವರಿಸುತ್ತಾ ಮನುಷ್ಯನ ಮನಸ್ಸು ಮತ್ತು ಮೆದುಳಿನ ಸಂಬಂಧವನ್ನು ವಿವರಿಸುತ್ತಾರೆ.

[39]ಸ್ವಪ್ನವ ಕಂಡು ಎಚ್ಚರಿವುದು ಅರಿವೋ, ಮರುವೆಯೋ?

ಅರಿತಡೆದಿಟವಾಗಬೇಕು, ಮರೆತಡೆ ತೋರದಿರಬೇಕು.

ಉದಕದ ವಾಸನೆಯೇ ಸ್ಥೂಲದ ಸ್ವಪ್ನ,

ಇದೊಡಗೂಡಿ ತಿಳಿ, ಗುಡಿಯಗುಮ್ಮಟನೊಡೆಯ,

ಅಗಮ್ಯೇಶ್ವರಲಿಂಗ,[39]

ಮನುಮುನಿಗುಮ್ಮಟದೇವ, ಸ.ವ.ಸಂ. 12, ವಚನ ಸಂಖ್ಯೆ 140, ಪುಟ –78.

ಮನುಮುನಿಗುಮ್ಮಟದೇವರು ಈ ವಚನದ ಮೂಲಕ ಕಣ್ಣಿಗೆ ಕಾಣದ ಹಾಗೂ ಕಾಣದ್ದನ್ನೂ ನಂಬುವ ಅನಿವಾರ್ಯತೆ ಇರುವ ದೇವರ ನೈಜ್ಯ ಸ್ವರೂಪದ ದ್ವಂದ್ವವನ್ನು ದೂರು ಮಾಡಲು ಪ್ರಯತ್ನಿಸಿದ್ದಾರೆ. ನಾವು ಕನಸಿನಲ್ಲಿ ಕಾಣುವ ವಿಷಯಗಳು ಆ ಸಮಯದಲ್ಲಿ (ನಿದ್ರಾವಸ್ಥೆಯಲ್ಲಿ) ಸತ್ಯವಾಗಿರುತ್ತದೆ. ಎಚ್ಚರಗೊಂಡಾಗ ಆ ದೃಶ್ಯಗಳೆಲ್ಲವೂ ಮಾಯವಾಗಿರುತ್ತದೆ. ಈ ಅನಿಶ್ಚಿತತೆಯನ್ನು ವಚನದಲ್ಲಿ ಪ್ರಶ್ನಿಸುತ್ತಾ ಅರಿವು ದಿಟವಾಗಿರಬೇಕು ಆಗಾಗಿ ಎಚ್ಚರ ಸ್ಥಿತಿಯಲ್ಲಿ ಕಾಣುವುದೆಲ್ಲವೂ ಸತ್ಯ ಸ್ವಪ್ನದಲ್ಲಿ ಕಂಡಿರುವುದೆಲ್ಲವೂ ಜಾಗೃತ ಸ್ಥಿತಿಗೆ ಬಂದಾಗ ಮರೆತುಹೋಗಿರುವುದರಿಂದ. ದಿಟವಲ್ಲದ ಸಂಗತಿಗಳೆಲ್ಲವೂ ನಮ್ಮ ಅರಿವಿಗೆ ಬರುವುದಾದರೂ ಹೇಗೆ? ಗೊಂದಲವನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ನೀರು ಸ್ಥೂಲ ವಾಗಿ ಗೋಚರಿಸಿದರೂ ಅದರ ವಾಸನೆಯೂ ಅಗೋಚರ. ಹಾಗೇಯೇ ದೇವರೆನ್ನುವುದು ಅಗೋಚರವಾಗಿದ್ದರೂ ಜಾಗೃತ ಸ್ಥಿತಿಯಲ್ಲಿ ಸಾಧಕನಿಗೆ ಗೋಚರಿಸುತ್ತದೆ. ಹೀಗೆ ದೇವರ ಬಗ್ಗೆ ಇರುವ ಗೊಂದಲವನ್ನು ನಿವಾರಿಸಿದ್ದಾರೆ. ಮನುಮುನಿ ಗುಮ್ಮಟದೇವನು ವಚನಗಳ ಮೂಲಕ ಮೌಢ್ಯತೆಗೆ ಪದಾರ್ಥಗಳನ್ನು ವೈಜ್ಞಾನಿಕವಾಗಿ ನೀಡಿರುತ್ತಾರೆ. ಹಾಗೆಯೇ ಆದ್ಯ ವಚನಕಾರ ಜೇಡರ ದಾಸಿಮಯ್ಯ ರವರ ವಚನಗಳನ್ನು ಮೂಢನಂಬಿಕೆಯ ಪ್ರತಿರೋಧ ಪ್ರಖರವಾಗಿ ಕಂಡುಬರುತ್ತದೆ.

[40]ಬರುಸೆಟಗನ ಭಕ್ತಿ ದಿಟವೆಂದು


ನಚ್ಚಲು ಬೇಡ ಮಠದೊಳಗನ ಬೆಕ್ಕು

ಇಲಿಯ ಕಂಡು ಪುಟನೆಗೆದಂತಾಯಿತು

ಕಾಣಾ ರಾಮಾನಾಥ [40]

ಜೇಡರ ದಾಸಿಮಯ್ಯ (1996 ಬಿ.ಎ. ಪಠ್ಯಪುಸ್ತಕ, ಪುಟ ಸಂಖ್ಯೆ –4)

ವಚನಕಾರರ ನಂಬಿಕೆಗಳಾದ **ಸ್ವಪ್ನ, ಅಚ್ಚಮುತ್ತೈದೆ, ನಂಬಿಕೆ, ಆಚರಣೆ, ಕಟ್ಟುಕಟ್ಟಳೆ** ಇವುಗಳಿಗೆ ಸ್ಪಷ್ಟತೆ ನೀಡುತ್ತಲೇ ಚಿಕಿತ್ಸಕ ಮಾದರಿಯಲ್ಲಿ ಮಾಂತ್ರಿಕ ವಿದ್ಯೆಗೆ ನಾಂದಿ ಹಾಡಿದರು.



ಮೂಢನಂಬಿಕೆಗಳು
ಸ್ವಪ್ನ
ಭವಿಷ್ಯ
ಅಚ್ಚ ಮುತ್ತೈದೆ
ಆಚರಣೆ
ನಂಬಿಕೆ
ಮಾಂತ್ರಿಕ ವಿದ್ಯೆ
ಮೌಢ್ಯತೆ
ನಂಬಿಕೆ
ಸಂಪ್ರದಾಯ
ಚಿಕಿತ್ಸೆ
ಆಚರಣೆ
ಕಟ್ಟಳೆ ಸಂಪ್ರದಾಯ
ಪವಾಡ

ಕೊನೆ ಟಿಪ್ಪಣಿ

1. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –197, ಪುಟ – 68.

2. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –233, ಪುಟ – 77.

3. **ಮೂಢನಂಬಿಕೆಗಳ ವಿಶ್ವರೂಪ, ಪಂಜುಗಂಗೊಳ್ಳಿ,** ಸಾಧನ ಪಬ್ಲಿಕೇಷನ್, ಬೆಂಗಳೂರು 2013, ಪುಟ ಸಂಖ್ಯೆ 130–137.

4. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 165, ಪುಟ – 49.

5. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 310, ಪುಟ – 95.

6. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 386, ಪುಟ ಸಂಖ್ಯೆ 137.

7. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 1075, ಪುಟ ಸಂಖ್ಯೆ 362.

8. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 178, ಪುಟ ಸಂಖ್ಯೆ 71.

9. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 93, ಪುಟ – 29.

10. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 9, ಪುಟ ಸಂಖ್ಯೆ – 6.

11. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 553, ಪುಟ ಸಂಖ್ಯೆ – 137.

12. ಸಮಗ್ರ ವಚನ ಸಂಪುಟ –9, ಸಂಪಾದಕ ಡಾ. ಬಿ.ಆರ್.ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –152, ಪುಟ – 58.

13. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 1465, ಪುಟ – 1.

14. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 246, ಪುಟ – 74.

15. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 523, ಪುಟ – 159.

16. ಸಮಗ್ರ ವಚನ ಸಂಪುಟ –9, ಸಂಪಾದಕ ಡಾ. ಬಿ.ಆರ್.ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –760, ಪುಟ – 232.

17. ಸಮಗ್ರ ವಚನ ಸಂಪುಟ –15, ವಚನ ಪರಿಭಾಷಾಕೋಶ, ಡಾ. ಎನ್.ಜಿ. ಮಹಾದೇವಪ್ಪ 2001 ಪುಟ 2, 38–239,374

18. ವೀರಶೈವ ಪಾರಿಭಾಷಿಕ ಪದಕೋಶ, ಪ್ರಧಾನ ಸಂಪಾದಕರು ಡಾ. ಎಸ್. ವಿದ್ಯಾಶಂಕರ ವ್ಯವಸ್ಥಾಪಕ ಸಂಪಾದಕರು, ಪ್ರೋ. ಬಿ. ವಿರೂಪಾಕ್ಷ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು –560001, (2000 ಪುಟ 246–247).

ಅಧ್ಯಾಯ : ೫

ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ

ಅಧ್ಯಾಯ – ೫

ವಚನಗಳಲ್ಲಿ ಮೂಢನಂಬಿಕೆಯ ಪ್ರತಿರೋಧ

ಈ ಅಧ್ಯಾಯದಲ್ಲಿ ವಚನಕಾರರು ಮೌಢ್ಯತೆಯನ್ನು ಹೋಗಲಾಡಿಸುವಲ್ಲಿ ಪಂಚೀಕರಣ ತತ್ವದ ವಿಶ್ಲೇಷಣೆ ಮಾಡುತ್ತಲೇ ನಿಸರ್ಗ, ಕೃಷಿ, ಜೀವನಕ್ರಮ, ಜೀವನಪದ್ಧತಿಗಳನ್ನು ವೈಚಾರಿಕ ಹಿನ್ನಲೆಯಲ್ಲಿ ಪ್ರಗತಿಪರ ಗೊಳಿಸುತ್ತಲೇ ಈ ಕೆಳಗಿನ ಅಂಶಗಳ ಮೂಲಕ ಮೂಢನಂಬಿಕೆಗಳನ್ನು ಪ್ರತಿರೋಧಿಸುತ್ತಾರೆ.

[41]ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ನಿರಂಜನದೇವಾ,

ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ,

ಕಾಣಲಾರಿಗೆಯೂ ಬಾರದಯ್ಯಾ,

ಜ್ಞಾನಜ್ಯೋತಿಧ್ಯಾನದಿಂದ ನಾಳಶುದ್ಧ ದ್ವಾರವಾಗಿ,

ಆರಾಧಿಸಿ ಕಂಡೆ, ನಮ್ಮ ಕೂಡಲಸಂಗಮದೇವನ. [41]

ಬಸವಣ್ಣ, ಸ.ಮ.ಸಂ.1, ವಚನ ಸಂಖ್ಯೆ –418, ಪುಟ –209

ಬಸವಣ್ಣನವರು ಈ ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧಕ್ಕಾಗಿ ಪಂಚೀಕರಣ ತತ್ವವನ್ನು ಪ್ರಸ್ತಾಪಿಸುತ್ತಾರೆ. **ಭೂತಪಂಚಕಗಳು** ಈ ವಚನದಲ್ಲಿ ಮೌಢ್ಯತೆಯನ್ನು ಹೋಗಲಾಡಿಸಿ **ಪ್ರಥ್ವಿ, ಅಪ್ಪು, ವಾಯು, ಅಗ್ನಿ, ಆಕಾಶ** ಈ ತತ್ವಗಳನ್ನು ಆಧರಿಸಿ ಪಂಚಭೂತಗಳ ಪರಿಕಲ್ಪನೆಯನ್ನು ತಿಳಿಸುತ್ತಾರೆ.

ವಚನಕಾರರು ಮೂಢನಂಬಿಕೆಯ ಪ್ರತಿರೋಧವನ್ನು ಅನೇಕ ಘಟನೆ, ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ನಿರ್ಧಿಷ್ಟ ಕಾಲಾವಧಿಯಲ್ಲಿ ಈ ಕೆಳಕಂಡ ನಂಬಿಕೆ– ಮೂಢನಂಬಿಕೆಗಳಿಗೆ ತಕ್ಕಂತೆ ಪ್ರತಿಕ್ರಯಿಸುತ್ತಾರೆ.

- **ವಾರ**
- **ಲಗ್ನ**
- **ಪ್ರಾರಬ್ಧ**
- **ಸೂತಕ**
- **ನೇಮ**
- **ಮಾರಿಮಸಣಿ**
- **ಶಕುನ**
- **ಅಪಶಕುನ**
- **ಹೋಮ, ಹವನ**

- ಹರಿಕೆಗಳು
- ಸ್ವಪ್ನಗಳು
- ಸೂರ್ಯಬಲ, ಚಂದ್ರಬಲ
- ತೀರ್ಥಯಾತ್ರೆ
- ತೀರ್ಥಸ್ನಾನ

ಈ ಮೂಢನಂಬಿಕೆಗಳನ್ನು ವಚನಕಾರರು ಪ್ರತಿರೋಧಿಸುತ್ತಾರೆ.

ಮೂಢನಂಬಿಕೆಗಳ ಪ್ರತಿರೋಧ

ಮೂಢನಂಬಿಕೆಯ ಪ್ರತಿರೋಧ
ನಂಬಿಕೆ
ವೈಜ್ಞಾನಿಕತೆ

ಭಾರತದಲ್ಲಿ ಆಧ್ಯಾತ್ಮದಲ್ಲಿ "ಬ್ರಹ್ಮನೇ ಸತ್ಯ ಜಗತ್ತೇ ಮಿಥ್ಯ" ಎಂಬ ಧೋರಣೆ ಸಾವಿರಾರು ವರ್ಷಗಳಿಂದ ಬೆಳೆದು ಬಂದಿದೆ. ಇದರ ಪರಿಣಾಮವಾಗಿ ಸಂಸಾರ ಎಂಬುದು ಮಾಯೆ. ಈ ಜಗತ್ತು ಮಿಥ್ಯ ಸ್ವರ್ಗ–ನರಕ ಕಲ್ಪನೆಗಳು. ಮುಕ್ತಿ ಸಾಧನೆಗೆ ನಂಬಿದ ಸತಿ–ಸುತ ಬಂಧುಗಳನ್ನು ಬಿಟ್ಟು ಪಲಾಯನವಾದ ಸೂತ್ರವನ್ನು ಬಸವಾದಿ ಶರಣರು ಖಂಡಿಸಿ 'ಜೀವನವಾದ'ವನ್ನು ಪ್ರತಿಪಾದಿಸಿದರು.

ವಿಶ್ವದಾದ್ಯಂತ ತುಂಬಿರುವ ಪರಮಾತ್ಮ (ವಿಶ್ವ ಚೈತನ್ಯ) ಸತ್ಯ ಎನ್ನುವದಾದರೆ, ಆ ಪರಮಾತ್ಮನಿಂದ ಹೊರಹೊಮ್ಮಿದ ಜಗತ್ತು ಹೇಗೆ ಮಿಥ್ಯವಾಗುತ್ತದೆ? **ಜೀವ–ಜಗತ್ತು–ಈಶ್ವರ ಎಲ್ಲವೂ ಸತ್ಯ** ಸತ್ಯಂ–ಶಿವಂ–ಸುಂದರಂ ಅಲ್ಲವೇ? **'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ'** ಎಂಬ ಬಸವಣ್ಣನವರ ವಿಚಾರವಾದವನ್ನು ನೋಡಿದಾಗ ಜಗನ್ಮಿಥ್ಯಾವಾದವನ್ನು ತಿರಸ್ಕರಿಸಬೇಕಾಗುತ್ತದೆ.

ಬಸವಾದಿ ಶರಣರ ಕಾಲದಲ್ಲಿ ಧರ್ಮ ಎಂಬುದು ಕರ್ಮಠತನಕ್ಕೆ ಇಳಿದು, ಅಂಧವಿಶ್ವಾಸ ಕಂದಾಚಾರಗಳು ಬೆಳೆದು, ಜನರ ಸಂಖ್ಯೆಗಿಂತ ದೈವ ದೇವಾಲಯಗಳು ಹೆಚ್ಚಾಗಿ, **ಯಜ್ಞ–ಯಾಗ, ಪಶುಬಲಿ, ನರಬಲಿ, ಶಿಶುಬಲಿ, ಮಂತ್ರ–ತಂತ್ರ ಉತ್ಸವ, ವ್ರತ, ನೇಮ** ಮುಂತಾದ ಅವೈಚಾರಿಕ ಅವೈಜ್ಞಾನಿಕ ಅಜ್ಞಾನ ಅಂಧಕಾರದಲ್ಲಿ ಧರ್ಮ ದಿಕ್ಕೆಟ್ಟಿತು.

**[42]ಮಡಿಕೆಗೆ ಮುಸುಕು, ತಮಗೆ ಗುಹ್ಯಕ್ಕೆ ದಶಾವಸ್ಥೆ
ಬಾಹ್ಯದಲ್ಲಿ, ಶೀಲ, ಅಂತರ್ಯಾಮಿಯಲ್ಲಿ ದುಶ್ಶೀಲ,
ಹೊರಗೆ ವ್ರತ, ಒಳಗೆ ಗದಕ,
ಮಾಡಿಕೊಂಡು ವಿಧಿಯನೀಸುವುದಕ್ಕೆ ವಾದ್ಯದ ಒತ್ತೆಯ ಹಿಡದ ದಾಸಿಯಂತೆ,
ಇನ್ನಾರಿಗೆ ಹೇಳುವೆ ?
'ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವ ನೀನೆ ಬಲ್ಲೆ. [42]**

ಶಿವಲೆಂಕಮಂಚಣ್ಣ, ಸ.ವ.ಸಂ.9, ವಚನ ಸಂಖ್ಯೆ –171, ಪುಟ –63

ಸಕಲ ಜೀವರಾಶಿಗಳ ಲೇಸನ್ನು ಬಯಸಿದರು. ಅಲ್ಲಮಪ್ರಭುಗಳು **'ಕಲ್ಲ ಮನೆಯ ಮಾಡಿ ಕಲ್ಲದೇವರ ಮಾಡಿ ಆ ಕಲ್ಲು ಕಲ್ಲ ಮೇಲೆ ಕಡೆದಡೆ ದೇವರೆತ್ತ ಹೋದರೋ ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರ'** ಎಂದು ಹೇಳಿದ್ದಾರೆ.

**[43]ಪಾದತೀರ್ಥವ ಕೊಂಡಲ್ಲಿ ತೃಷೆಯರಿತು,
ಪ್ರಸಾದವ ಕೊಂಡಲ್ಲಿ ಹಸಿವರತು
ಭೃತ್ಯಭಾವವಾದಲ್ಲಿ ಪ್ರತ್ಯುತ್ತರವಿಲ್ಲದೆಯಿಪ್ಪುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಲೆಂಕತ್ವಭಾವ.[43]**

ಶಿವಲೆಂಕಮಂಚಣ್ಣ, ಸ.ವ.ಸಂ. 9 ವಚನ ಸಂಖ್ಯೆ –217, ಪುಟ –73

ಶರಣರು ಕಲ್ಲನಾಗರ, ಮಣ್ಣಿನ ಗಣೇಶ, ಸಗಣಿಯ ಬೆನಕ, ಒನಕೆ, ಮೊರ, ಒಳ್ಳು, ಬೀಸುವ ಕಲ್ಲು, ಹಣಿಗೆ ಮುಂತಾದ ಕಲ್ಪಿತ ದೈವಗಳ ಆರಾಧನೆಯನ್ನು ಖಂಡಿಸುತ್ತಾರೆ.

**[44] ಮುತ್ತುಮೊಲೆಯ ನುಂಗಿತ್ತು, ಮೊಲೆ ಅಬಲೆಯ ನುಂಗಿತ್ತು
ಅಬಲೆಯ ಬಲೆಯಲ್ಲಿ, ಬಲವಂತರೆಲ್ಲರು ಸಿಕ್ಕಿದರು,
ಸುಂಕಕ್ಕಡಹಿಲ್ಲ, ಬಂಕೇಶ್ವರಲಿಂಗಾ. [44]**

ಸುಂಕದ ಬಂಕಣ್ಣ, ಸ.ವ.ಸಂ.9, ವಚನ ಸಂಖ್ಯೆ –612, ಪುಟ –195

ಅಂತರಂಗ ಶುದ್ಧಿ ಇಲ್ಲದೇ ಹೊರಗಣ ನಾಮ, ವಿಭೂತಿಯ ಮುದ್ರೆಗಳಿಂದ ಏನು ಪ್ರಯೋಜನ ಎನ್ನುವ ವಚನಕಾರರು **ಪಂಚಭೂತಕಗಳ** ಪ್ರಾಮುಖ್ಯತೆ ಕುಳಿತು ತಿಳಿಸುತ್ತಾರೆ.

> **[45] ಊರನೆಲ್ಲ ಸುಟ್ಟು ಬೆಂಕಿಯಲ್ಲಿ ಕಾಯವನರಸಲತಿ ಚೋದ್ಯ ಕಾಣಾ.**
> **ಭೂತಾದಿ ಸಕಲಗುಣನಿಕರವನುರುಹಿ ಭಸ್ಮೀಕೃತವ ಮಾಡಿದ**
> **ಚಿದಾರ್ಯನ ಅಪೂರ್ವಪ್ರಕೃತಿಯನರಸಲದು ಅತಿಚೋದ್ಯ ನೋಡಾ.**
> **ತನ್ನ ಶೋಧನಮಾಡಿದ ಶಾವಿನಲ್ಲಿ ಅಶುದ್ಧವನರಸಿದರೆ ಭವಬಂಧನ ತಪ್ಪದು**
> **ಗುರುನಿರಂಜನ ಚನ್ನಬಸವಲಿಂಗ ಸೂತ್ರವನರಿಯದ ಭ್ರಾಂತರಿಗೆ.[45]**

ಸಂಗನ ಬಸವಯ್ಯ, ಸ.ವ.ಸಂ 12, ವಚನ 75, ಪುಟ–288.

ವಚನಕಾರರು ವೇದಶಾಸ್ತ್ರ ಆಗಮ ಪುರಾಣ ಗ್ರಂಥಗಳ ಪ್ರಮಾಣವನ್ನು ತೊರೆದು ವ್ಯಕ್ತಿಯ ಆಚಾರ ಅರಿವು–ಅನುಭಾವಕ್ಕೆ ಪ್ರಾಧಾನ್ಯತೆ ನೀಡಿದರು.

> **[46]ಮೂರುಮುಖದಗ್ನಿಯ ಸುಟ್ಟು,**
> **ಮೂರುಬಣ್ಣದ ಹೇಸಿಕೆಯ ತೊಳೆದು,**
> **ಮೂರು ಮನೆಯಲ್ಲಿ ದೇವರ ಪೂಜೆಯ ಮಾಡಿ,**
> **ಇದ್ದುದ ಕಳಿಸದೆ ಸಂಚಲವಳಿದು,**
> **ಸಮರ್ಪಿಸಿಕೊಳ್ಳಬಲ್ಲ ಸಗುಣ ನಿರ್ಗುಣ ಸಂಪನ್ನಂಗಲ್ಲದೆ**
> **ಸಾಧ್ಯವಲ್ಲ ಕಾಣಾ ಗುರುನಿರಂಜನ ಚನ್ನಬಸವಲಿಂಗ.[46]**

ಸಂಗನ ಬಸವಯ್ಯ, ಸಂ.ವ.ಸಂ.–12, ವಚನ 334, ಪುಟ – 103.

ಜ್ಯೋತಿಷ್ಯ ಸಾಮಾನ್ಯ ಜನತೆಯ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತದೆ. ಜನನದಿಂದ, ಮರಣದವರೆಗೆ ನಡೆಯುವ, ಮರಣದ ನಂತರ ನಡೆಯುವ ಎಲ್ಲ ವಿಧಿ–ವಿಧಾನಗಳಿಗೆ ಜ್ಯೋತಿಷ್ಯ ಬೇಕು. ವಿವಾಹ ಮುಂತಾದ ಮಂಗಳಕಾರ್ಯಗಳಿಗೆ ಶುಭಮುಹೂರ್ತಗಳು ಬೇಕು. ಗ್ರಹಬಲವಿರುವ ಶುಭ ಮುಹೂರ್ತಗಳಲ್ಲಿ ಉಪವಾಸವಿದ್ದು ಅರಳೆಯ ಮರಕ್ಕೆ ನೀರು ಹೊಯ್ದು, ನೂಲು ಸುತ್ತಿ ಮಾಡುವಂತಹ ವ್ರತಗಳಲ್ಲಿ ತೊಡಗುವವರು ಅನಾಚಾರಿಗಳೆಂದು ಚನ್ನಬಸವಣ್ಣ ಹೇಳುತ್ತಾನೆ. ರೆಮ್ಮವ್ವೆ ತಿಥಿ ವಾರ ನಕ್ಷತ್ರ ಹುಣ್ಣಿಮೆ ಅಮಾವಸ್ಯೆ ಎಂದು ದಿನಗಳನ್ನು ಪರಿಗಣಿಸಿ ಪೂಜಿಸುವವರು ಭವಿಗಳು ಎನ್ನುವಳು. ಬಸವಣ್ಣನವರು **'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ' ನಾಳಿನ ದಿನಕಂದಿನ ದಿನ ಲೇಸೆಂದು ಹೇಳಿರಯ್ಯಾ'** ಎನ್ನುತ್ತಾರೆ. ಎಲ್ಲ ಕಾಲವೂ ಪ್ರಶಸ್ತವೆಂದು– **"ಅಂದು ಇಂದು ಮತ್ತೊಂದೆನ ಬೇಡ ದಿನವಿಂದೇ ಶಿವಶರಣೆಂಬುವಂತೆ"** ಎನ್ನುವರು. ನಿಜವಾದ ಆಸ್ತಿಕನಿಗೆ ಎಲ್ಲ ದಿನ ರಾಶಿ ನಕ್ಷತ್ರಗಳು

ಒಂದೇಯಾಗಬೇಕು. ನಾಸ್ತಿಕನಿಗೆ ಶುಭಲಗ್ನ ಶುಭದಿನಗಳೇ ಇಲ್ಲ. **"ಮಹಾಮೇರುವಿನ ಮರೆಯಲಿರ್ದು ನಮ್ಮ ನೆಳಲನರಸುವ ಭಾವಭ್ರಮಿತರ ಮೆಚ್ಚ ನಮ್ಮ ಕೂಡಲಸಂಗಮದೇವರು"** ನಿಜವಾದ ಶರಣ ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಶಕುನಗಳಲ್ಲಿಯೂ ವಚನಕಾರರಿಗೆ ವಿಶ್ವಾಸವಿಲ್ಲ. ಹಾಗೆ ಒಣ ಸಂಪ್ರದಾಯಗಳನ್ನು ಸಹ ಈ ರೀತಿ ವಿಡಂಬಿಸುತ್ತಾರೆ. ವಚನಕಾರರು ಕಟ್ಟಳೆ ಮತ್ತು ಸಂಪ್ರದಾಯಗಳಿಗೆ ವೈಚಾರಿಕ ಅರ್ಥವನ್ನು ನೀಡುತ್ತಾ ಜನ್ಮ ಪುರ್ನಜನ್ಮದ ಬಗ್ಗೆ ತಿಳುವಳಿಕೆ ನೀಡುತ್ತಾರೆ.

> **[47]ಅನಂತಜನ್ಮ ತಿರುಗಿ ಬಂದ ಮನವು ತನ್ನ ವಾಸವಾಗಿರ್ಪುದು.**
> **ಆ ಮನವ ಮಹದಲ್ಲಿರಿಸಿ ಮರೆದುದೇ ನಿಜೈಕ್ಯ.**
> **ಆ ಮನವ ಸಂಸಾರದಲ್ಲಿರಿಸಿ ಮರೆದುದೇ ನರಕ.**
> **ನೀರು ತುಹಿಲ ನೆರೆದರೆ ಬಿಳ್ಪಾಗುವುದು.**
> **ನೀರು ಮಸಿಯ ನೆರೆದರೆ ಕಪ್ಪಾಗುವುದು.**
> **ಇದನರಿದು ಎನಗುಳ್ಳುದೊಂದು ಮನ, ಆ ಮನವನಪ್ಪಿ**
> **ಗುರುನಿರಂಜನ ಚನ್ನಬಸವಲಿಂಗದೊಳಗೆ ಪರಿಣಾಮಿಯಾಗಿರ್ದೆನು.[47]**
>
> **ಸಂಗನ ಬಸವಯ್ಯ ಸಂ.ವ.ಸಂ. 12, ವಚನ 848, ಪುಟ–253.**

ಕರ್ಮವಾದ ಪುನರ್ಜನ್ಮ ಮುಂತಾದವುಗಳನ್ನು ತಮ್ಮ ವೈಚಾರಿಕ ಚಿಂತನೆಯಿಂದ ಮೌಢ್ಯವನ್ನು ತೊಲಗಿಸಲು–ಸಿದ್ಧರಾಮೇಶ್ವರರು ಈ ರೀತಿ ಹೇಳಿದ್ದಾರೆ – **'ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟದಲ್ಲಿರುವ ಮುನಿಗಳೆಲ್ಲ ಜೀವಗಳ್ಗಳು. ಅಲ್ಲಿರುವ ಚಂದ್ರಶೇಖರ ಬಹು ಎಡ್ಡ. ಇವರಾಡಂಬರವೇಕಯ್ಯಾ" ಕಪಿಲ ಸಿದ್ಧಮಲ್ಲಿಕಾರ್ಜುನ'** ಎಂದು ವೈಚಾರಿಕವಾಗಿ ತಿಳಿಸಿದ್ದಾರೆ. ಹಾಗೆ ಅಲ್ಲಮಪ್ರಭುಗಳು **"ಸತ್ತ ಬಳಿಕ ಮುಕ್ತಿಯ ಪಡೆದಿಹೆವೆಂದು ಪೂಜಿಸಹೋದರೆ ಆ ದೇವರೇನು ಕೊಡುವನು? ಸಾಯದೇ ನೋಯದೇ ಸ್ವತಂತ್ರವಾಗಿ ಸುಡು –ಭೇದವಿಲ್ಲದಪ್ಪ, ಗುಹೆಶ್ವರಾ ನಿಮ್ಮ ಶರಣ"** ಎಂದು ಸಾವಿನ ನಂತರದ ಕಾಲ್ಪನಿಕ ಸ್ವರ್ಗ–ನರಕ ಖಂಡಿಸುತ್ತಾರೆ. ವಚನಕಾರರು **ಸ್ವರ್ಗ ನರಕವನ್ನು** ವೈಜ್ಞಾನಿಕವಾಗಿ ಚಿಂತಿಸಿದ ಅಂಶ ಈ ವಚನದಲ್ಲಿ ಕಂಡುಬರುತ್ತದೆ.

> **[48]ಹುಲ್ಲೆಯ ಕಣ್ಣಿನಲ್ಲಿ ಹುಲಿ ನಿಂದಿದ್ದುದ ಕಂಡೆ.**
> **ಹುಲ್ಲಿನ ಮಧ್ಯದಲ್ಲಿ ಪಾವಕ ಅಲ್ಲಾಡಲಮ್ಮದೆ ಇದ್ದುದ ಕಂಡೆ.**
> **ಎನ್ನ ಗುಡಿಯ ಗುಮ್ಮಟನಾಥನೊಡೆಯ ಅಗಮ್ಯೇಶ್ವರಲಿಂಗ,**
> **ಅಡಿಯಿಡಲಮ್ಮದುದ ಕಂಡೆ.[48]**
>
> **ಮನುಮುನಿ ಗುಮ್ಮಟದೇವ, ಸ.ವ.ಸಂ. 8, ವಚನ 997 ಪುಟ ಸಂಖ್ಯೆ 339**

ಸಂಸಾರದಲ್ಲಿದ್ದುಕೊಂಡು ಶಿವಧ್ಯಾನ ಮಾಡಲು ಹೇಳಿದರು. **"ಸಂಸಾರವೆಂಬ ಅಡವಿಯಲ್ಲಿ ಹುಲಿಯುಂಟು ಕರಡಿಯುಂಟು, ಶರಣನಂಜ! ಮಹಾಧೀರ ಶರಣನಂಜ! ಕೂಡಲ ಸಂಗನ ಶರಣಂಗೆ ನಿರ್ಭಯ"** ಎಂದರೆ, ಸಕಲೇಶ ಮಾದರಸ **'ದಿಟದಿಂದ ಬಿಡಿಸಲರಿಯದೆ ಸಂಸಾರದ ಶೆಕೆಯನವಧರಿಸಿಕೊಂಡಿಪ್ಪವರಿಗೆ ನಾನಂಜುವೆನಯ್ಯಾ ಸಕಳೇಶ್ವರಾ'** ಎಂದಿದ್ದಾರೆ. ಸೋಗಿನ ಸನ್ಯಾಸವನ್ನು ಖಂಡಿಸುತ್ತಾರೆ. ಬಸವಾದಿ ಶರಣರ ಕಾಲಕ್ಕೆ ವರ್ಣ ವ್ಯವಸ್ಥೆ, ಸ್ಪೃಶ್ಯ-ಅಸ್ಪೃಶ್ಯ ಭಾವನೆಗಳು, ಸ್ತ್ರೀ-ಪುರುಷ ಅಸಮಾನತೆ ಇವೆಲ್ಲ, ಸಾಮಾಜಿಕ ಜೀವನವನ್ನು ಕಲುಷಿತ ಮಾಡಿದ್ದವು.

[49]ಊರೆಂಬುದರಿಯ ಉಲುವೆಂಬುದರಿಯ
ಬರಿಯ ಮಾತಿನ ಬಣ್ಣವನರಿಯದ ಸಿರಿಸಂಪದದೊಳಾನಂದ ತಲೆಗೇರಿ
ಜಾತಿ ಗೋತ್ರ ಕುಲಾಶ್ರಮ ವರ್ಣ ನಾಮಂಗಳೆನುಯೇನೆಂಬ ಭಾವವ
ಮರೆದಿರ್ದನು ಗುರುನಿರಂಜನ ಚನ್ನಬಸವಲಿಂಗ ತಾನಾದ ಶರಣ.[49]

ಸಂಗನ ಬಸವಯ್ಯ, ಸಂ.ವ.ಸಂ. 12, ವಚನ 662,ಪುಟ-198.

ಅಂದು ಮಾಡುವ ಕೆಲಸಗಳಿಂದ ಜಾತಿ ಬಂದಿತೇ ವಿನಃ ಜಾತಿಯಿಂದ ಯಾರೂ ಶ್ರೇಷ್ಠರಾಗುವುದಿಲ್ಲ. ಶ್ರೇಷ್ಠತೆ ನಿರ್ಣಯವಾಗುವುದು ಅವರ ಜೀವನ ವಿಧಾನದಿಂದ ಮತ್ತು ಅವರು ಪಡೆಯುವ ಜ್ಞಾನದಿಂದ ಎಂದಿದ್ದಾರೆ. ಮಾದಾರ ಚೆನ್ನಯ್ಯ **"ನಡೆ-ನುಡಿ ಸಿದ್ಧಾಂತವಾದಲ್ಲಿ ಕುಲ-ಹೊಲೆ-ಸೂತಕವಿಲ್ಲ. ಆಚಾರವೇ ಕುಲ ಅನಾಚಾರವೇ ಹೊಲೆ. ಇಂತಿ ಉಭಯವ ತಿಳಿದಿರಬೇಕು'** ಎಂದು ಜಾತಿ ವ್ಯವಸ್ಥೆಯ ಮೂಲಬೇರನ್ನೇ ಅಲ್ಲಾಡಿಸುತ್ತಾರೆ.

ಭೂತ ಪಂಚಕಗಳಲ್ಲಿ ಮುಖ್ಯವಾದ **ಅಚ್ಚಮುತ್ತೈದೆಯನ್ನು** ಸ್ವಾರಸ್ಯವಾಗಿ ವಿವರಿಸುತ್ತಾರೆ. ಆ **ಅಚ್ಚಮುತ್ತೈದೆಯರು ಆಕಾಶ, ಪೃಥ್ವಿ, ಅಪ್ಪು, ವಾಯು, ಅಗ್ನಿ** ಇವುಗಳನ್ನು ವಿಶೇಷವಾಗಿ ಮೌಢ್ಯತೆಯನ್ನು ಹೋಗಲಾಡಿಸುವುದರಲ್ಲಿ ಪ್ರಬಲ ಶಕ್ತಿಯಾಗಿ ವಿವರಿಸುತ್ತಾರೆ.

[50]ಅಚ್ಚ ಮತ್ತೈದೆರೈವರೆನ್ನಿಚ್ಛೆಯೊಳಗಿಪ್ಪರು
ನಿಮ್ಮಾದಿ ಶಿಶುವಾದಕಾರಣ.
ನಚ್ಚಿ ಮಾಡಿದಡಿಗೆಯು ಅಚ್ಚಳಿಯದಿದ್ದಿತ್ತು
ಆಡುತ ಬನ್ನಿ ಮೂವರೊಂದಾಗಿ,
ಬೇಡಿಕೊಂಬುವನಲ್ಲ, ನೀಡಿ ನೂಕಿ ನಿಲ್ಲುವೆ
ನಿಮ್ಮಾಣೆ ಗುರುನಿರಂಜನ ಚನ್ನಬಸವಲಿಂಗದಲ್ಲಿ.[50]

ಸಂಗನ ಬಸವಯ್ಯ -ಸ.ವ.ಸಂ -12, ವಚನ 150, ಪುಟ - 45.

ಸ್ತ್ರೀವಾದ ಸ್ತ್ರೀಸಮಾನತೆ ಪ್ರಾರಂಭವಾದದ್ದು ಶರಣ-ಶರಣೆಯರಿಂದ. ಶರಣೆ ಗೊಗ್ಗವ್ವೆ- **'ಮೊಲೆಮುಡಿ ಬಂದಡೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು. ಈ ಉಭಯದ ಜ್ಞಾನ ಗಂಡೋ ಹೆಣ್ಣೋ?'** ಎಂದು ಪ್ರಶ್ನಿಸಿದರೆ; ಅಕ್ಕಮಹಾದೇವಿ **'ಪುರುಷನ ಮುಂದೆ ಸ್ತ್ರೀ' ಎಂಬ ಅಭಿಮಾನವಾಗಿ ಕಾಡುವುದು. ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು. ಚೆನ್ನಮಲ್ಲಿಕಾರ್ಜುನನ 'ಶರಣರಿಗೆ ಮಾಯೆ ಇಲ್ಲ ಮರಹಿಲ್ಲ ಅಭಿಮಾನವೂ ಇಲ್ಲ'** ಎನ್ನುವಳು. ಶರಣೆ ನೀಲಾಂಬಿಕೆ **ವಿಚಾರಪತ್ನಿಯಾಗಲು** ಪಂಚಭೂತಕಗಳು ಕೊಡುಗೆ ನೀಡಿದೆ.

ಶರಣರ ಕಾಲದಲ್ಲಿ ರಾಜಸತ್ತೆ ಪ್ರಬಲವಾಗಿತ್ತು. ಆನೀ ಬಿಜ್ಜಳನಿಗೆ ಅಂಜುವೆನೇ? ಎಂದು ಬಸವಣ್ಣ ಪ್ರಶ್ನಿಸಿದರೆ; ಕಸಗೂಡಿಸುವ ಶರಣೆ ಸತ್ಯಕ್ಕ **'ಲಂಚ ವಂಚನೆಗೆ ಕೈಯಾನದ ಭಾಷೆ, ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದೊಡೆ ಕೈ ಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ ಶಂಭುಜಕ್ಕೇಶ್ವರಾ"** ಎಂದು ಭ್ರಷ್ಟಾಚಾರದ ವಿರುದ್ಧ ಕ್ರಾಂತಿ ಮಾಡಿದಳು. ಮೌಢ್ಯ ರಾಜಕಾರಣದ ಹಿನ್ನಲೆಯು ಕಂಡುಬರುತ್ತದೆ.

> [51]**ಕೋಣನ ತಾಯ ಹಾಲಕುಡಿದು ಮಲಗಿರ್ದ ಕುರುಹ,**
> **ಬೆಳಗಾಗಿ ಕಂಡು ಮೊದಲ ಹಿಡಿದು ತುದಿಯ ಸೇವಿಸಿದಾತನೇ**
> **ಪ್ರಾಣಲಿಂಗಪ್ರಸಾದಿ ಕಾಣಾ ಗುರುನಿರಂಜನ ಚನ್ನಬಸವಲಿಂಗಾ.**[51]
>
> **ಸಂಗನ ಬಸವಯ್ಯ –ಸ.ವ.ಸಂ–12, ವಚನ 143, ಪುಟ – 165.**

ವೈಜ್ಞಾನಿಕ ಮನೋಧರ್ಮದಿಂದ ಕೂಡಿದ ಕ್ರಿಯಾಶೀಲವೇ ವೈಚಾರಿಕತೆ. ಮತ್ತು ಪ್ರಗತಿಕಾರಕ, ಅಂದಿನ ವಾತಾವರಣದಲ್ಲಿ ಮಾನವೀಯ ಅನುಕಂಪವುಳ್ಳ ವೈಚಾರಿಕ ಕ್ರಾಂತಿಗೆ ಪ್ರೇರಣೆ ನೀಡಿದವರು ವಚನಕಾರ ಶರಣರು. ಜನಪದರ ಆಡು–ನುಡಿ ಕನ್ನಡವನ್ನು ವಚನ–ಸಾಹಿತ್ಯದ ಮಾಧ್ಯಮವಾಗಿ ಬಳಸಿ, ಜನಮಾನಸದಲ್ಲಿ ಅದ್ಭುತವಾದ ವೈಚಾರಿಕ ಕ್ರಾಂತಿಯನ್ನು ಬಸವಾದಿ ಶರಣರು ಮಾಡಿದರು.

ಪ್ರಸಿದ್ಧ ಇತಿಹಾಸಕಾರ **ಅರ್ಥರ್ ಮೈಲ್ಸ್‌ನ್ನು** ಬಸವಣ್ಣನನ್ನು **'ಭಾರತದ ಪ್ರಥಮ ಸ್ವತಂತ್ರ ವಿಚಾರವಾದಿ'** ಎಂದು ಕರೆದಿದ್ದಾನೆ. ೧೨ನೇ ಶತಮಾನದ ಬಸವಾದಿ ಶರಣರು 'ನೀನು ನಂಬಿದುದೇ ಸತ್ಯ ಎಂಬ ಛಲದ ಮನೋಭಾವ ಬೇಡ. ಸತ್ಯವು ಯಾವ ದಿಶೆಯಲ್ಲಿ ಬಂದರೂ ಸ್ವೀಕರಿಸುವ ಮನೋವಿಶಾಲತೆ ಇರಲಿ' ಎಂದು ಹೊಸದೃಷ್ಟಿಕೋನದ ವಿಚಾರವನ್ನು ಹೇಳಿದರು.

ಧರ್ಮದ ಎರಡು ರೀತಿಯ ತತ್ವವನ್ನು ಹೇಳಿದರು ೧) **ಆಚಾರ** ೨) **ವಿಚಾರ,** ವಿಚಾರ ಬೆರೆತ ಆಚಾರವು ಸದ್ವಿಚಾರ ಎನಿಸಿದರೆ ಆಚಾರ ಬೆರೆತ ವಿಚಾರ ಸದಾಚಾರಕ್ಕೆ ದಾರಿ ಮಾಡಿಕೊಡುತ್ತದೆ. ಹೀಗೆ ಆಚಾರ, ವಿಚಾರ ಧರ್ಮದ ಎರಡು ಮುಖಗಳು.

[52]ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ,
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ,
ಕೇಳು, ಕೂಡಲಸಂಗಮದೇವಾ,
ಮರಣವೆ ಮಹಾನವಮಿ.[52]

ಬಸವಣ್ಣ ಸ.ವ.ಸಂ. 1, ವಚನ ಸಂಖ್ಯೆ –699, ಪುಟ –175.

ಜನತೆಯಲ್ಲಿ ಭಯವನ್ನು ಬಿತ್ತಿ ಮೌಢ್ಯವನ್ನು ಬೆಳಸಿ ತಮ್ಮ ಉಪಜೀವನ ನಡೆಸುತ್ತಿದ್ದ ಪುರೋಹಿತಶಾಹಿ ಧರ್ಮ, ಮನುಷ್ಯನ ಪ್ರತಿ ತಪ್ಪಿಗೂ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಪ್ರೇರೇಪಿಸುತ್ತಿತ್ತು. ಪ್ರಾಯಶ್ಚಿತ್ತ ಎಂದರೆ ಪುರೋಹಿತರಿಗೆ ಕಪ್ಪ-ಕಾಣಿಕೆ ಸಲ್ಲಿಸುವದು. ಅದಕ್ಕೆ **ಬಸವಣ್ಣನವರು 'ಪಶ್ಚಾತ್ತಾಪಪಟ್ಟು ಮತ್ತೊಮ್ಮೆ ತಪ್ಪು ಘಟಿಸದಂತೆ ಎಚ್ಚರವಹಿಸಿ ಬಾಳಲು ಕಲಿ'** ಎಂದು ಹೇಳುತ್ತಾರೆ. ಮೂಢನಂಬಿಕೆಗಳ ವಿರುದ್ಧ ಸಮಯ, ಅರ್ಥಹೀನ ಉಪಾಸನೆಗಳನ್ನು ಪೂಜಿಸಲು ಶರಣರು ಹೋರಾಡಿದರು.

ಶರಣರ ವಚನಗಳ ವಿಚಾರಗಳು ಬೆಳಕಿನಲ್ಲಿ ನಡೆದರೆ, ಇಂದಿನ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕುವುದರ ಮೂಲಕ ವ್ಯಕ್ತಿ ವೈಯಕ್ತಿಕವಾಗಿ ಶುದ್ಧಾಂಗನಾಗುವುದಲ್ಲದೆ ಸಮಾಜವು ಶುದ್ಧೀ ತತ್ವದತ್ತ ಮುಖ ಮಾಡುವುದನ್ನು ವಚನಕಾರರು ಪ್ರಜ್ಞಾವಂತರಾಗಿ ನಂಬಿಕೆಗಳತ್ತ ಮುಖಮಾಡಿರುವುದು ಸ್ಪಷ್ಟ.

ವಚನಕಾರರು ಮೂಢನಂಬಿಕೆಗಳನ್ನು ಪ್ರತಿರೋಧಿಸಲು ಬಳಸಿದ ಮಾನದಂಡಗಳು. ಈ ಕೆಳಗಿನ ಅಂಶಗಳ ಮೂಲಕ ವಚನಕಾರರು ಮೌಢ್ಯತೆ ಹಾಗೂ ವೈಚಾರಿಕತೆಯ ನೆಲೆಯಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. **ಕಟ್ಟು ಕಲ್ಪನೆ – ರಮ್ಯತೆ –ಪ್ರಾಣಿ ರೂಪಕಗಳು – ನೀತಿ – ಹಾಸ್ಯ – ಸೂತ್ರ – ಬುದ್ಧಿವಂತಿಕೆ – ಅನುಭವ – ಆನುಭಾವ.**




ಮೂಢನಂಬಿಕೆಗಳನ್ನು ಪ್ರತಿರೋಧಿಸುವ ರೀತಿ

[53]ಅಂಡಜ ಪೃಥ್ವಿ ಉದಯಿಸದಂದು
ಭೂಮಂಡಲವಾಗದಂದು
ಪಿಂಡಜ ಬೀಜವ ನವಬ್ರಹ್ಮರು ತಾರದಂದು
ನವಖಂಡವ ರಚಿಸದಂದು
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚಭೂತಾದಿ[ಸ್ಥ]ಳವಿಡದಂದು
ಅನುಕರಿಸದಂದು, ರೂಹಿಸದಂದು
ಅತಿಮಥನ ಒಡ್ಡದಂದು
ಇಪ್ಪತ್ತೈದರ ಸ್ಥಳವ ಹೆಸರುಗೊಂಡು ಕರೆಯದಂದು
ಎನಗೆ ತನಗೆಂಬಿಚ್ಚೆ ತನ್ನ ತಲೆದೋರದಂದು
ಋಷಿಗಳಾಶ್ರಯ ಲೋಕದಲ್ಲಿ ಹರಿಯದಂದು
ಅಂದು ಬಸವನಿದ್ದ ಕಾಣಾ, ರೇಕಣ್ಣಪ್ರಿಯ ನಾಗಿನಾಥಾ.[53]

ಬಹುರೂಪಿ ಚೌಡಯ್ಯ, ಸ.ವ.ಸಂ. 8, ವಚನ 126 ಪುಟ ಸಂಖ್ಯೆ 56

ವಚನಕಾರರು ಮೌಢ್ಯತೆಯನ್ನು ಹೋಗಲಾಡಿಸಲು ಪಂಚೀಕರಣ ಎನ್ನುವ ತತ್ವದ ಮೂಲಕ ನವ ಸಮಾಜದ ನಿರ್ಮಾಣಕ್ಕೆ ಶ್ರಮಿಸುತ್ತಾರೆ. ಅದನ್ನು ಪಂಚೀಕೃತಿ ಎಂದು ಕರೆದಿರುತ್ತಾರೆ. ಮನುಷ್ಯನೆಂದರೆ ಇಪ್ಪತ್ತೈದು ತತ್ವಗಳ ಒಂದು ಸಂಕೀರ್ಣ ಸಂಯೋಜನೆಯೇ ಪಂಚೀಕರಣ.



೧. ಭೂತ ಪಂಚಕ : ಪೃಥ್ವಿ, ಅಪ್ಪು, ವಾಯು, ಅಗ್ನಿ ಮತ್ತು ಆಕಾಶ ಎಂಬ ಐದು ಮಹಾಭೂತಗಳು.

[54]ಪೃಥ್ವಿಯಲ್ಲಿ ಮಾಯೆ ನೋಡಿರೆ ಶಿವನ,
ಅಪ್ಪುವಿನಲ್ಲಿ ಮಾಯೆ ನೋಡಿರೆ ಶಿವನ,
ಅಗ್ನಿಯಲ್ಲಿ ಮಾಯೆ ನೋಡಿರೆ ಶಿವನ,
ವಾಯುವಿನಲ್ಲಿ ಮಾಯೆ ನೋಡಿರೆ ಶಿವನ,
ಆಕಾಶದಲ್ಲಿ ಮಾಯೆ ನೋಡಿರೆ ಶಿವನ,
ಯಾಜಮಾನದಲ್ಲಿ ಮಾಯೆ ನೋಡಿರೆ ಶಿವನ,
ಷಡ್ಭೂತ ನಿರಂಜನ ಚನ್ನಬಸವಲಿಂಗವ ನೋಡಿರೆ ಸಾಕಾರವಿಡಿದು.[54]

ಸಂಗನ ಬಸವಯ್ಯ, ಸಂ.ವ.ಸಂ. 12, ವಚನ 34, ಪುಟ – 10.

೨. ವಾಯು ಪಂಚಕ : ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ವಾಯುಗಳು.

[55]ಪೃಥ್ವಿ ಅಂಶವನಳಿದು ಚಿತ್ಪೃಥ್ವಿಯಂಗವಾಗಿ
ಭೃತ್ಯಾಚಾರ ನೆಲೆಸಿದುದೇ ಆಚಾರಲಿಂಗಸಂಬಂಧ.
ಅಪ್ಪುವಿನಂಶವನಳಿದು ಚಿದಪ್ಪುವೇ ಅಂಗವಾಗಿ
ಗಣಾಚಾರ ನೆಲೆಸಿದುದೇ ಗುರುಲಿಂಗಸಂಬಂಧ.
ಅಗ್ನಿಯಂಶವನಳಿದು ಚಿದಗ್ನಿಯೇ ಅಂಗವಾಗಿ
ಶಿವಾಚಾರ ನೆಲೆಸಿದುದೇ ಶಿವಲಿಂಗಸಂಬಂಧ.
ವಾಯುವಿನಂಶವನಳಿದು ಚಿದ್ವಾಯುವೇ ಅಂಗವಾಗಿ
ಸದಾಚಾರ ನೆಲೆಸಿದುದೇ ಜಂಗಮಲಿಂಗಸಂಬಂಧ.
ಆಕಾಶದಂಶವನಳಿದು ಚಿದಾಕಾಶವೇ ಅಂಗವಾಗಿ
ಲಿಂಗಾಚಾರ ನೆಲೆಸಿದುದೇ ಪ್ರಸಾದಲಿಂಗಸಂಬಂಧ.
ಇಂತು ಪಂಚಾಚಾರ ಪಂಚತತ್ವವಳಿದುಳಿದು ನೆಲೆಸಿ ಪಂಚಮಲಿಂಗಸಂಬಂಧವಾದಲ್ಲಿ
ಆತ್ಮನಂಶವನಳಿದುಳಿದು ಸರ್ವಾಚಾರಸಂಪತ್ತು ನೆಲೆಸಿ
ಮಹಾಲಿಂಗಗುರುನಿರಂಜನ ಚನ್ನಬಸವಲಿಂಗ
ಸಂಬಂಧವಾಯಿತ್ತು ಮಾಹೇಶ್ವರಂಗೆ.[55]

ಸಂಗನ ಬಸವಯ್ಯ, ಸ.ವ.ಸಂ. 12,ವಚನ 255, ಪುಟ– 77.

೩. ಕರ್ಮೇಂದ್ರಿಯ ಪಂಚಕ : ಪಾಯು, ಗುಹ್ಯ, ಪಾದ, ಪಾಣಿ ಮತ್ತು ವಾಕ್ ಎಂಬ ಐದು ಕರ್ಮೇಂದ್ರಿಯಗಳು.

[56] ಗಂಡನ ಚಿತ್ತವನರಿದು ಒತ್ತೆಯನಿತ್ತ ಒಲುಮೆ ಗೆಲುವಾಗಿತ್ತು ನೋಡಾ!
ಲಿಂಗದ ಬೆಳಗನರಿದ ಕಳೆಯನೊತ್ತೆಯು ಕಲ್ಪವೃಕ್ಷ ಕಾಣಾ!
ಅರಿಯದ ಗುದ್ಯಾಟ ಬರಿಗೈಯ ಸುರಿದಂತೆ ಪರಿಣಾಮದ ಪ್ರಭೆಯಿಲ್ಲ ಕಾಣಾ
ಗುರುನಿರಂಜನ ಚನ್ನಬಸವಲಿಂಗಾ ![56]

ಸಂಗನ ಬಸವಯ್ಯ ಸ.ವ.ಸಂ. 12, ವಚನ 549, ಪುಟ – 166.

೪. ಕರಣ ಪಂಚಕ : ಅಹಂಕಾರ, ಚಿತ್ತ, ಮನಸ್ಸು, ಬುದ್ಧಿ, ಜ್ಞಾನ ಎಂಬ ಐದು ಅಂತಃಕರಣಗಳು.

[57] ಉರಿ ಕರ್ಪುರಸಂಗದಿಂದೆ ಉರಿಕರ್ಪುರ ಉಂಟೆ ?
ಭ್ರಮರ ಕಾಮುಳಸಂಗದಿಂದೆ ಭ್ರಮರಕಾಮುಳ ಉಂಟೆ ?
ಪರುಷ ಲೋಹಸಂಗದಿಂದೆ ಪರುಷಲೋಹವುಂಟೆ ?
ಶರಣ ಸಂಸಾರಸಂಗದಿಂದೆ ಶರಣಸಂಸಾರವುಂಟೆ ?
ಇದು ಕಾರಣ ನಾ ಮುಟ್ಟಿ ನೀನುಂಟು ನೀ ಮುಟ್ಟಿ ನಾಮುಂಟೆ ಹೇಳಾ
ಗುರುನಿರಂಜನ ಚನ್ನಬಸವಲಿಂಗಾ ?[57]

ಸಂಗನ ಬಸವಯ್ಯ ಸ.ವ.ಸಂ. 12, ವಚನ 638, ಪುಟ – 191.

೫. ಜ್ಞಾನೇಂದ್ರಿಯ ಪಂಚಕ : ಕಣ್ಣು ನಾಲಗೆ, ಮೂಗು, ಚರ್ಮ ಮತ್ತು ಕಿವಿ ಎಂಬ ಜ್ಞಾನೇಂದ್ರಿಯಗಳು.

[58]ಅಸ್ಥಿ ಚರ್ಮವ ಪುದಿದ ಮರೆಯ ಹರಿಗೆಯೊಳು,
ಅಸುಭಟನೆಂಬ ಬಂಟ, ದಶೇಂದ್ರಿಯನಪ್ಪ ಮುಸುಗುವ ಕೂರಲಗಿನಲ್ಲಿ
ನಿರ್ಗತಿಯೆಂಬ ಪ್ರಮಥನೊಳು ಕದನವನೆಸಗೆ,
ಹುಸಿಕಾಯ ತೊರದ ಧನುವ ಜೇವಡೆಗೈದು,
ನಿರ್ಧರ ದಿವ್ಯ ಪ್ರಣಮವೆಂಬ ಮೊನೆದೋರದ ಸರದಲ್ಲೆಸಯೆ,
ಅಸ್ಥಿ ಚರ್ಮದ ಪ್ರಕೃತಿಯ ಅಂಗದ ನೇಮದ ಶಾವಿನಲ್ಲಿ
ಬಿದ್ದುಕೊಂಡಿತ್ತು.
ಅವನಸುವ ನಿರ್ವಾಣದ ಕೂರಲಗು ಅರಿ ಇದಿರಿಲ್ಲ
ಬಂಕೇಶ್ವರಲಿಂಗಕ್ಕೆ ಇದಿರಿಲ್ಲ.[58]

ಸುಂಕದ ಬಂಕಣ್ಣ, ಸ.ವ.ಸ. 9, ವಚನ ಸಂಖ್ಯೆ –675, ಪುಟ –208

ವಾಸ್ತವವಾಗಿ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಇತ್ಯಾದಿಗಳು ಭೂತ ಪಂಚಕಗಳ ವಿವಿಧ ಪ್ರಮಾಣದ ಮಿಶ್ರಣಗಳು. ಯಾವ ಭೂತ ಉಳಿದ ಯಾವ ಭೂತಗಳೊಡನೆ ಎಷ್ಟು ಪ್ರಮಾಣದಲ್ಲಿ ಸೇರಿದರೆ ಯಾವ ತತ್ವಗಳು ಹುಟ್ಟುತ್ತದೆ ಎಂಬುದರ ಜ್ಞಾನವೇ ಪಂಚೀಕರಣದ ಜ್ಞಾನ. ಪಂಚೀಕರಣದ ಜ್ಞಾನದಿಂದಾಗಿ, ನಾವು ಕರ್ಮೇಂದ್ರಿಯ, ಜ್ಞಾನೇಂದ್ರಿಯ ಇತ್ಯಾದಿಗಳ ಬಗೆಗೆ ತಿಳಿದುಕೊಂಡರೆ ಅವನ್ನು ಆಧ್ಯಾತ್ಮಿಕ ಜೀವನಕ್ಕೆ ಹೇಗೆ ಪರಿವರ್ತಿಸಿಕೊಳ್ಳಬಹುದೆಂಬುದನ್ನು ತಿಳಿದುಕೊಳ್ಳಬಹುದು. ಆದುದರಿಂದ ಪಂಚೀಕರಣದ ಜ್ಞಾನ ಕೇವಲ ಬೌದ್ಧಿಕ ತೃಪ್ತಿಗಾಗಿ ಅಲ್ಲ. ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ಎಂಬ ಮಾತನ್ನು ವಚನಕಾರರು ಒತ್ತಿ ಹೇಳಿದ್ದಾರೆ ಹಾಗೂ ಮೌಢ್ಯತೆಯನ್ನು ಹೋಗಲಾಡಿಸಲು **ಜ್ಞಾನೇಂದ್ರಿಯ ಪಂಚಕಗಳು** ಪ್ರಬಲ ಶಕ್ತಿಯಾಗಿದೆ ಎಂಬುವುದು ವಚನಗಳಲ್ಲಿ ಪ್ರತಿಪಾದನೆ ಮಾಡಲಾಗಿದೆ.

[59] ಆಕಾಶತತ್ವದಿಂದುದುರಿ ಬಂದ ಬೀಜವು
ಧರೆಯುದಕ ಸಂಗದಲ್ಲಿ ಅಡಗಿರ್ದಡೇನು
ಅಂಕುರಿಸಿ ಆಕಾಶಕ್ಕೆ ತಲೆಯದೋರುವುದಲ್ಲದೆ,
ಭುವನದತ್ತ ತಲೆಯಿಡದು ನೋಡಾ.
ಘನಗಂಭೀರ ಶರಣನು ತಾನೊಂದು ಕಾರ್ಯಕ್ಕೆ ಹೇಗೆ ಹಿಡಿದು ಮುಸುಕಿರ್ದಡೇನು,
ಕ್ರಿಯಾಭೋಗಿತ್ತ ಜ್ಞಾನಭೋಗತ್ತ ನಡುವೆ ಪರಿಪೂರ್ಣ ಭಕ್ತಿನಿರಂತರ.
ಇದು ಗೌರವಾಂಗದತಿಶಯದ ನಿಲವು ಕಾಣಾ
ಗುರುನಿರಂಜನ ಚನ್ನಬಸವಲಿಂಗಾ.[59]

ಸಂಗನ ಬಸವಯ್ಯ ಸ.ವ.ಸಂ. 12,ವಚನ 1202, ಪುಟ – 350.

ಪಂಚಭೂತಕಗಳಲ್ಲಿ ಅತ್ಯಂತ ಸೂಕ್ಷ್ಮವಾದುದೆಂದರೆ, **ಆಕಾಶ ತತ್ವ ಜ್ಞಾನ, ಬುದ್ಧಿ, ಮನಸ್ಸು ಚಿತ್ತ ಮತ್ತು ಅಹಂಕಾರ ಎಂಬ ಸೂಕ್ಷ್ಮ ತತ್ವಗಳು ಆಕಾಶದಿಂದ ಹೇಗೆ ಉತ್ಪತ್ತಿಯಾಗುತ್ತವೆ,** ಎಂಬುದನ್ನು ವಚನಕಾರರು ಹೀಗೆ ವಿವರಿಸುತ್ತಾರೆ.

[60]ಎಲ್ಲಾ ಜಗಂಗಳೊಳಗಿರ್ದಡೇನು
ಶಿವನು ಜಗದಂತಹನಲ್ಲ.
ಜಗವ ತನ್ನೊಳಗಿಕ್ಕಿ ತಾ ಹೊರಗಿರ್ದಹೆನೆಂದಡೆ
ಬ್ರಹ್ಮಾಂಡದಂತಹನೇ? ಅಲ್ಲ.
ಆಕಾಶದೋಪಾದಿಯಲ್ಲಿ ಸರ್ವಲೋಕದ
ಒಳ ಹೊರಗೆ ಮೂಲ ಚೈತನ್ಯ ತಾನಾಗಿ, ಆಧಾರವಾದ
ನಮ್ಮ ರೇಕಣ್ಣಪ್ರಿಯ ನಾಗಿನಾಥ.[60]

ಬಹುರೂಪಿ ಚೌಡಯ್ಯ, ಸ.ವ.ಸಂ. 8, ವಚನ 141 ಪುಟ ಸಂಖ್ಯೆ 60

ಆಕಾಶದ ಒಂದಂಶವು ವಾಯುವನ್ನು ಸೇರಿದರೆ ಮನಸ್ಸು, ಮತ್ತೊಂದಂಶವು ಅಗ್ನಿಯನ್ನು ಸೇರಿದರೆ ಬುದ್ಧಿ, ಮತ್ತೊಂದಂಶವು ಜಲ ತತ್ವವನ್ನು ಸೇರಿದರೆ, ಚಿತ್ತ ಮತ್ತು ಮತ್ತೊಂದಂಶವು ಪೃಥ್ವಿಯನ್ನು ಸೇರಿದರೆ ಅಹಂಕಾರ ಹುಟ್ಟುತ್ತವೆ. ಜ್ಞಾನವು ಅಂತಃಕರಣವಲ್ಲದಿದ್ದರೂ, ಅದು ಆಕಾಶದ ಮೂಲಸ್ವರೂಪ. ಅಂದರೆ ಬುದ್ಧಿ, ಮನಸ್ಸು, ಮುಂತಾದ ಅಂತಃಕರಣಗಳು ಆಕಾಶಜನ್ಯ ತತ್ವಗಳಿಂದ ಜ್ಞಾನ ಪಡೆಯಲು ಸಾಧ್ಯವಾಗುವುದು.

[61]ಪ್ರಣವಮಂತ್ರರೂಪ ಪರಶಿವನ ಚೈತನ್ಯ
ಎಲ್ಲಾ ಮಂತ್ರಂಗಳಿಗೆ ಚೈತನ್ಯವು.
ಎಲ್ಲಾ ತಂತ್ರಂಗಳಿಗೆ ಚೈತನ್ಯವು.
ಓಂಕಾರಂ ವ್ಯಾಪ್ತಿ ಸರ್ವತ್ರಂ ಓಂಕಾರಂ ಗೋಪ್ಯ ಮಾನವಂ।
ಓಂಕಾರಂ ನಾದರೂಪಂ ಚ ಓಂಕಾರಂ ಮಂತ್ರರೂಪಕರಂ॥
ಎಂದು, ಎಲ್ಲಾ ವೇದಂಗಳಿಗೆ ತಾನೆ ಚೈತನ್ಯವು.
ಇಂತಲ್ಲದಡೆ, ಎಲ್ಲಿಹದು ಜ್ಞಾನಸಾಮರ್ಥ್ಯವು.
ಅದು ಕಾರಣ, ಮಂತ್ರವೆ ಅವಯವವು
ರೇಕಣ್ಣಪ್ರಿಯ ನಾಗಿನಾಥಂಗೆ.[61]

ಬಹುರೂಪಿ ಚೌಡಯ್ಯ, ಸ.ವ.ಸಂ. 8, ವಚನ 163 ಪುಟ ಸಂಖ್ಯೆ 67

ವಾಯುವಿನ ಎರಡು ಅಂಶಗಳು ಕೂಡಿಕೊಂಡರೆ, ಉದಾನ ವಾಯುವೂ, ಒಂದಂಶ ವಾಯು ಒಂದಂಶ ಆಕಾಶ ಕೂಡಿಕೊಂಡರೆ, ಸಮಾನ ವಾಯುವೂ, ಒಂದಂಶ ಅಪ್ಪುವಿನಲ್ಲಿ ಕೂಡಿಕೊಂಡರೆ ಅಪಾನ ವಾಯುವೂ ಒಂದಂಶ ವಾಯು ಪೃಥ್ವಿಯನ್ನು ಕೂಡಿಕೊಂಡರೆ ಪ್ರಾಣವಾಯುವೂ ಜನಿಸುತ್ತದೆ.

[62]ಉರಿಯ ಮೊನೆಯ ಮೇಲೆ
ಅರಗಿನ ಬೊಂಬೆ ತಿರುಗಾಡುತ್ತದೆ.
ಉರಿ ಕರಗಿ ಬೊಂಬೆ ಉಳಿಯಿತ್ತು,
ಏಣಾಂಕಧರ ಸೋಮೇಶ್ವರಲಿಂಗವ ಇದಿರಿಟ್ಟುಕೊಂಡು.[62]

ಬಬ್ಬಬಾಚಯ್ಯ ಸ.ವ.ಸಂ. 8, ವಚನ 314, ಪುಟ ಸಂಖ್ಯೆ 125

ಅಗ್ನಿ ಎಂಬ ಮಹಾಭೂತದ ವಿವಿಧ ರೂಪಗಳೇ ಬುದ್ಧೀಂದ್ರೀಯಗಳು (ಜ್ಞಾನೇಂದ್ರಿಯಗಳು) ಅವುಗಳ ಉತ್ಪತ್ತಿಯ ವಿವರ : ಅಗ್ನಿ ಅಗ್ನಿಯನ್ನು ಕೂಡಿದರೆ ನೇತ್ರ, ಅಂದರೆ, ಅಗ್ನಿ (ಬೆಳಕು) ಇದ್ದರೆ ಮಾತ್ರ ನೇತ್ರ ನೋಡಲು ಸಾಧ್ಯ ಅಗ್ನಿಯ ಒಂದಂಶ ಆಕಾಶದ ಒಂದಂಶವನ್ನು ಕೂಡಲು ಶ್ರೋತ್ರೇಂದ್ರಿಯ (ಕಿವಿ), ಒಂದಂಶ ವಾಯುವನ್ನು ಕೂಡಿಕೊಂಡರೆ ತ್ವಗಿಂದ್ರಿಯವೂ, ಅಪ್ಪುವಿನ ಒಂದಂಶವನ್ನು ಸೇರಿದರೆ ಜಿಹ್ವೆಯೂ (ನಾಲಗೆಯೂ), ಅಗ್ನಿಯ ಒಂದಂಶ ಪೃಥ್ವಿಯ ಒಂದಂಶವನ್ನು ಕೂಡಿದರೆ ಘ್ರಾಣೇಂದ್ರಿಯವೂ ಉತ್ಪತ್ತಿ ಆಗುತ್ತದೆ.

[63] ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,
ಚಂದ್ರ ಕುಂದೆ, ಕುಂದುವುದಯ್ಯಾ,
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ
ಅಂಬುಧಿ ಬೊಬ್ಬಿಟ್ಟಿತ್ತೆ ಅಯ್ಯಾ ?
ಅಂಬುಧಿಯ ಮುನಿ ಅಪೋಶನವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ, ಅಯ್ಯಾ ?
ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ,
ಜಗದ ನಂಟ ನೀನೆ, ಅಯ್ಯಾ.
ಕೂಡಲಸಂಗಮದೇವಯ್ಯ ! [63]

ಬಸವಣ್ಣ, ಸ.ವ.ಸಂ.1, ವಚನ ಸಂಖ್ಯೆ –25, ಪುಟ –10.

ಅಪ್ಪು ಎಂಬ ಮಹಾಭೂತದ ವಿವಿಧ ರೂಪಗಳೇ ವಿಷಯ (ತನ್ಮಾತ್ರೆ)ಗಳು. ಅವುಗಳ ಉತ್ಪತ್ತಿಯ ವಿವರ: ಅಪ್ಪುವಿನ ಒಂದಂಶ **ಅಪ್ಪುವಿನ** ಮತ್ತೊಂದಂಶವನ್ನು ಕೂಡಿದರೆ, ರಸವೂ, ಅಪ್ಪುವಿನ ಒಂದಂಶ **ಆಕಾಶವನ್ನು** ಕೂಡಿದರೆ ಶಬ್ದವೂ, ಮತ್ತೊಂದಂಶ **ವಾಯುವನ್ನು** ಕೂಡಿದರೆ ಸ್ಪರ್ಶವೂ ಒಂದಂಶ **ಅಗ್ನಿಯನ್ನು** ಕೂಡಿದರೆ ರೂಪವೂ, ಒಂದಂಶ **ಪೃಥ್ವಿಯನ್ನು** ಕೂಡಿದರೆ ಗಂಧವೂ ಉತ್ಪತ್ತಿಯಾಗುತ್ತವೆ ಎನ್ನುವಲ್ಲಿ ವಚನಕಾರರು ಪರಿಸರದ ಪ್ರಗತಿಪರತೆಯನ್ನು ದಾಖಲಿಸುತ್ತಲೇ **ನಿಸರ್ಗವೇ** ಅತ್ಯಂತ ಪ್ರಬಲ ನಂಬಿಕೆ, ಈ ನಂಬಿಕೆಯ ಅತ್ಯಂತ ಶಕ್ತಿ ಎಂದು ದಾಖಲಿಸುತ್ತಾರೆ.

[64]ಬೆಳೆಯ ಭೂಮಿಯಲ್ಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು,
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ
ಸುಳಿದೆಗೆದೆ ಬೆಳವೆನು ಕೂಡಲಸಂಗಮದೇವಾ.[64]

ಬಸವಣ್ಣ, ಸ.ವ.ಸಂ. 1, ವಚನ ಸಂಖ್ಯೆ –50, ಪುಟ –15.

ಪೃಥ್ವಿ ತತ್ವವು ಉಳಿದ ನಾಲ್ಕು ತತ್ವಗಳಿಗಿಂತ ಹೆಚ್ಚು ಸ್ಥೂಲವಾದುದು. ಅದರಂತೆ, ವಿವಿಧ ರೂಪಗಳಾದ ಕರ್ಮೇಂದ್ರಿಯಗಳೂ ಸ್ಥೂಲವಾದ ಅಂಗಗಳಾಗಿವೆ. ಅವು ಪೃಥ್ವಿ ತತ್ವದಿಂದ ಹೇಗೆ ಉತ್ಪತ್ತಿಯಾಗುತ್ತವೆ ಎಂಬುದಕ್ಕೆ ವಿವರ ಹೀಗಿದೆ : ಪೃಥ್ವಿಯ ಎರಡಂಶಗಳು ಕೂಡಿದರೆ **ಪಾಯವೂ,** ಪೃಥ್ವಿಯ ಒಂದಂಶ ಆಕಾಶದ ಒಂದಂಶದೊಂದಿಗೆ ಸೇರಿದರೆ, **ವಾಂಗಿಂದ್ರಿಯವೂ,** ಒಂದಂಶ ವಾಯುವನ್ನು ಕೂಡಿದರೆ **ಹಸ್ತವೂ,** ಒಂದಂಶ ಅಗ್ನಿಯನ್ನು ಕೂಡಿದರೆ **ಪಾದವೂ** ಒಂದಂಶ ಅಪ್ಪುವನ್ನು ಕೂಡಿದರೆ **ಗುಹ್ಯೇಂದ್ರಿಯವೂ** ಉತ್ಪತ್ತಿಯಾಗುತ್ತದೆ ಎನ್ನುವಲ್ಲಿ ಕರಣ ಪಂಚಕಗಳು ನಂಬಿಕೆಯ ಮೂಲ ಬೇರುಗಳಾದರೆ **ಜ್ಞಾನೇಂದ್ರಿಯ ಪಂಚಕಗಳು** ಪ್ರಜ್ಞಾಮೂಲದ ಫಲಿತಗಳಾಗುತ್ತವೆ ಎಂಬುವುದನ್ನು ವಚನಕಾರರು ಪ್ರಬುದ್ಧ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ.

ಕೊನೆ ಟಿಪ್ಪಣಿ

1. **ಸಮಗ್ರ ವಚನ ಸಂಪುಟ** –1, ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 814, ಪುಟ ಸಂಖ್ಯೆ – 209.
2. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –171, ಪುಟ – 63.
3. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –217, ಪುಟ – 73.
4. **ಸಮಗ್ರ ವಚನ ಸಂಪುಟ –9,** ಸಂಪಾದಕ **ಡಾ. ಬಿ.ಆರ್.ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –612, ಪುಟ – 195.
5. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 975, ಪುಟ – 288.
6. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 334, ಪುಟ – 103.
7. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 848, ಪುಟ – 253.
8. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 997, ಪುಟ ಸಂಖ್ಯೆ 339.
9. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 662, ಪುಟ – 198.
10. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 150, ಪುಟ – 45.
11. **ಸಮಗ್ರ ವಚನ ಸಂಪುಟ –12,** ಸಂಪಾದಕ **ಡಾ. ವೀರಣ್ಣ ರಾಜನೂರ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 543, ಪುಟ – 165.
12. **ಸಮಗ್ರ ವಚನ ಸಂಪುಟ –1,** ಸಂಪಾದಕ **ಡಾ. ಎಂ.ಎಂ. ಕಲಬುರ್ಗಿ,** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 699, ಪುಟ ಸಂಖ್ಯೆ – 175.
13. **ಸಮಗ್ರ ವಚನ ಸಂಪುಟ –8,** ಸಂಪಾದಕ **ಡಾ. ಬಿ.ಆರ್. ಹಿರೇಮಠ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 126, ಪುಟ ಸಂಖ್ಯೆ 56.

14. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 34, ಪುಟ – 10.

15. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 255, ಪುಟ – 77.

16. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 549, ಪುಟ – 166

17. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 638, ಪುಟ – 191.

18. ಸಮಗ್ರ ವಚನ ಸಂಪುಟ –9, ಸಂಪಾದಕ ಡಾ. ಬಿ.ಆರ್.ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ –2001 ವಚನ –675, ಪುಟ – 208.

19. ಸಮಗ್ರ ವಚನ ಸಂಪುಟ –12, ಸಂಪಾದಕ ಡಾ. ವೀರಣ್ಣ ರಾಜನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನ – 1202, ಪುಟ – 350.

20. ಸಮಗ್ರ ವಚನ ಸಂಪುಟ –8, ಸಂಪಾದಕ ಡಾ. ಬಿ.ಆರ್. ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 141, ಪುಟ ಸಂಖ್ಯೆ 60.

21. ಸಮಗ್ರ ವಚನ ಸಂಪುಟ –8, ಸಂಪಾದಕ ಡಾ. ಬಿ.ಆರ್. ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 163, ಪುಟ ಸಂಖ್ಯೆ 67.

22. ಸಮಗ್ರ ವಚನ ಸಂಪುಟ –8, ಸಂಪಾದಕ ಡಾ. ಬಿ.ಆರ್. ಹಿರೇಮಠ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ವರ್ಷ 2001, ವಚನದ ಸಂಖ್ಯೆ – 314, ಪುಟ ಸಂಖ್ಯೆ 125.

23. ಸಮಗ್ರ ವಚನ ಸಂಪುಟ –1, ಸಂಪಾದಕ ಡಾ. ಎಂ.ಎಂ. ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 25, ಪುಟ ಸಂಖ್ಯೆ – 10.

24. ಸಮಗ್ರ ವಚನ ಸಂಪುಟ –1, ಸಂಪಾದಕ ಡಾ. ಎಂ.ಎಂ. ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ವರ್ಷ 2001, ವಚನ ಸಂಖ್ಯೆ – 50, ಪುಟ ಸಂಖ್ಯೆ – 15.

25. ಸಮಗ್ರ ವಚನ ಸಂಪುಟ –15, ವಚನ ಪರಿಭಾಷಾಕೋಶ, ಡಾ. ಎನ್.ಜಿ. ಮಹಾದೇವಪ್ಪ 2001 ಪುಟ 2, 38–239,374

26. ವೀರಶೈವ ಪಾರಿಭಾಷಿಕ ಪದಕೋಶ, ಪ್ರಧಾನ ಸಂಪಾದಕರು ಡಾ. ಎಸ್. ವಿದ್ಯಾಶಂಕರ ವ್ಯವಸ್ಥಾಪಕ ಸಂಪಾದಕರು, ಪ್ರೊ. ಬಿ. ವಿರೂಪಾಕ್ಷ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು –560001, (2000 ಪುಟ 246–247).

ಸಮಾರೋಪ

<u>ಸಮಾರೋಪ</u>

ಹನ್ನೆರಡನೆಯ ಶತಮಾನದ ದಕ್ಷಿಣ ಹಿಂದುಸ್ಥಾನದಲ್ಲಿ (ಅಥವಾ ಇಂದಿನ ಕರ್ನಾಟಕದಲ್ಲಿ) ಧರ್ಮಗುರು ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜೋ ಧಾರ್ಮಿಕ ಕ್ರಾಂತಿ ಭಾರತದ ಇತಿಹಾಸದಲ್ಲಿ ಅನನ್ಯವಾದುದು. **ಬಸವಣ್ಣ ಮತ್ತಿತರ ಅವರ ಸಂಗಾತಿ ಶರಣರು ಮೌಢ್ಯತೆಗೆ ಒಳಗಾಗಿದ್ದ ಅಂದಿನ ಸಮಾಜಕ್ಕೆ ನವ ಚೈತನ್ಯ ತುಂಬಿ ಹೊಸ ಸಮಾಜ ನಿರ್ಮಿಸಿದರು. ಈ ಹೊಸ ನಿರ್ಮಾಣವೇ ಅವರ ಸಕಲ ಕ್ರಿಯೆಯ ಗುರಿಯಾಗಿತ್ತು**. ಈ ಹೊಸ ಸಮಾಜದ ನಿರ್ಮಾಣದ ಪ್ರಕ್ರಿಯೆಯನ್ನು ನಾಲ್ಕು ರೀತಿಯಲ್ಲಿ ವರ್ಗೀಕರಿಬಹುದು:

ಮನುವಿನ ವರ್ಣಾಶ್ರಮದ ಹುಲಿಯುಗುರಿನಲ್ಲಿ ಸಿಲುಕಿ, ಸಮಾಜದ ಬಹುಜನರು ಶೋಷಣೆಗೊಳಗಾಗಿದ್ದರು. ಹಾರುವ ಅಂತ್ಯಜ ಒಂದೆಂಬ ತತ್ತ್ವವನ್ನು ಅನುಷ್ಠಾನದಲ್ಲಿ ತಂದು, ಕೂಡಲ ಸಂಗನ ಶರಣರೇ ಕುಲಜರು ಎಂದು ನುಡಿದು, ನಡೆದು, ಜಾತಿ ಪದ್ಧತಿಗೆ ಕೊಡಲಿ ಏಟನ್ನು ಹಾಕಿದರು ಶರಣರು. ಇದು ವರ್ಣಾಶ್ರಮದ ಬದಲಿಗೆ ವರ್ಣರಹಿತ ಸಮಾಜದ ನಿರ್ಮಾಣದ ಪ್ರಕ್ರಿಯೆ.

ಅಂದು ಪ್ರಭಾವಶಾಲಿಯಾಗಿದ್ದ ದೇವಾಲಯ ಸಂಸ್ಕೃತಿಯ ಬದಲಾಗಿ ಜೀವಾಲಯ ಸಂಸ್ಕೃತಿಯನ್ನು ಸ್ಥಾಪಿಸಿದರು ಶರಣರು–ಲಿಂಗಾಯತ ಧರ್ಮ ಸ್ಥಾಪಿಸುವುದರ ಮೂಲಕ ವೈದಿಕ ಧರ್ಮದ ಶಕ್ತಿ ಕೇಂದ್ರಗಳಾಗಿದ್ದ ದೇವಾಲಯಗಳ ಬದಲಿಗೆ ದೇಹವೇ ಲಿಂಗವೆಂದು ಹೇಳಿ ಇಷ್ಟಲಿಂಗಧಾರಣೆಯ ಮೂಲಕ ಪೂಜಾರಿಯ ಶೋಷಣೆಗೆ ಇತಿಶ್ರೀ ಹಾಡಿದರು ಬಸವಾದಿ ಪ್ರಮಥರು. ಇದು ದೇಹವನ್ನೇ ದೇವಾಲಯವನ್ನಾಗಿಸಿದ ವಿನೂತನ ಪ್ರಕ್ರಿಯೆ.

ರಾಜಾ ಪ್ರತ್ಯಕ್ಷ ದೇವತಾ ಎಂಬ ಸಂಸ್ಕೃತಿಗೆ ಭಿನ್ನವಾದ ಕಾಯಕ ಮತ್ತು ದಾಸೋಹ ಸಂಸ್ಕೃತಿಯನ್ನು ಆಚರಣೆಯಲ್ಲಿ ತರುವುದರ ಮೂಲಕ, ವಿವಿಧ ಹಂತಗಳಲ್ಲಿ ಮತ್ತು ವಿವಿಧ ರೂಪಗಳಲ್ಲಿ ಪ್ರಚಲಿತದಲ್ಲಿದ್ದ ಊಳಿಗಮಾನ್ಯ ರೂಢಿಯ ವಿರುದ್ಧ ಬಂಡೆದ್ದರು ಕಾಯಕ ಜೀವಿಗಳು, ಈ ಬಂಡಾಯಕ್ಕೆ ತಾತ್ವಿಕ ನೆಲೆಗಟ್ಟನ್ನು ಒದಗಿಸಿದವರು. ಕರ್ನಾಟಕ ಕಂಡ ಮೊದಲ ಬಂಡಾಯಗಾರ ಬಸವಣ್ಣನವರು. ಇದು ಊಳಿಗಮಾನ್ಯ ಪದ್ಧತಿಯ ವಿರುದ್ಧ ಬಂಡೆದ್ದ ಪ್ರಕ್ರಿಯೆ.

ಸಾಮಾನ್ಯ ಜನರನ್ನು ಅಕ್ಷರ ವಂಚಿತರನ್ನಾಗಿ ಮಾಡಿ, ಅಜ್ಞಾನದ ಅಂಧಕಾರದಲ್ಲಿಟ್ಟು ಹತ್ತು ಹಲವು ಮೂಢನಂಬಿಕೆಗಳನ್ನು ಶ್ರೀಸಾಮಾನ್ಯನ ಮನದಲ್ಲಿ ಬಿತ್ತಿ ಶೋಷಣೆ ನಡೆಸುತ್ತಿದ್ದ. ವೈದಿಕರು ಸ್ವರ್ಗ, ನರಕ, ಪಾಪ, ಪ್ರಾಯಶ್ಚಿತ ಇತ್ಯಾದಿ ಅವೈಜ್ಞಾನಿಕ ಪರಿಕಲ್ಪನೆಗಳನ್ನು ಸಮಾಜದಲ್ಲಿ ಬಿತ್ತಿ ಫಲವನ್ನು ತಾವು ಅನುಭವಿಸುತ್ತಿದ್ದರು ಮೇಲ್ವರ್ಗದ ಜನರು. ವಚನಕಾರರು ಮೂಢನಂಬಿಕೆ ಮತ್ತು ಅವುಗಳ ಆಚರಣೆಗಳನ್ನು ತಮ್ಮ ಪ್ರಖರವಾದ ವೈಚಾರಿಕ ಒರೆಗಲ್ಲಿಗೆ ತಿಕ್ಕಿ ಅವುಗಳ ಪೊಳ್ಳುತನವನ್ನು ಮತ್ತು

ಅವುಗಳ ಹಿಂದಿರುವ ಶೋಷಣಾ ಬುದ್ಧಿಯನ್ನು ಬಯಲುಗೊಳಿಸಿದರು. ಮೂಢನಂಬಿಕೆಗಳಿಂದ ಪೋಷಣೆಗೊಂಡಿದ್ದ ಸಂಪ್ರದಾಯಗಳ ಸ್ಥಾನದಲ್ಲಿ ವೈಚಾರಿಕ ನೆಲೆಗಟ್ಟಿನಲ್ಲಿ ಸ್ಥಾಪಿಸಲ್ಪಟ್ಟ ತರ್ಕಬದ್ಧ ಪರಂಪರೆಗಳನ್ನು ವಚನಕಾರರು ಆರಂಭಿಸಿದರು. ವಚನಗಳಲ್ಲಿ ಕಾಣುವ ಅವರ ವೈಜ್ಞಾನಿಕ ದೃಷ್ಟಿ ಮತ್ತು ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆ ಇಂದಿಗೂ ಅಚ್ಚರಿ ಮೂಡಿಸುತ್ತದೆ. ಇದು ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದ ಪ್ರಕ್ರಿಯೆ.

ಮೇಲ್ಕಾಣಿಸಿದ ನಾಲ್ಕು ಪ್ರಕ್ರಿಯೆಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಿದವು. ಒಂದು ಪ್ರಕ್ರಿಯೆ ಇನ್ನೊಂದು ಪ್ರಕ್ರಿಯೆಯಿಂದ ದೂರವಾಗಿ ಬೇರೆ ಬೇರೆ ಕೋಣೆಗಳಲ್ಲಿ ನಡೆಯಲಿಲ್ಲ. ಈ ಪ್ರಕ್ರಿಯೆಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ವಿಭಾಗಿಸಲಾಗಿದೆ. ಈ ನಾಲ್ಕು ಪ್ರಕ್ರಿಯೆಗಳು ಒಂದಕ್ಕೊಂದು ಪೂರಕವಾಗಿ ಒಂದೇ ಕಾಲಕ್ಕೆ ಕೆಲಸ ಮಾಡಿದ್ದರಿಂದ ವಚನಕಾರರು ಅಂಥ ಮಹೋನ್ನತ ಕಾರ್ಯ ಮಾಡಲು ಸಾಧ್ಯವಾಯಿತು.

ಫಲಿತಗಳು

- ಯಾವುದೇ ಕಾಲದಲ್ಲಿ ಆಗಿನ ಪರಿಸ್ಥಿತಿಯ ಒತ್ತಡಕ್ಕೆ ಉತ್ತರವಾಗಿ ಹುಟ್ಟಿಕೊಂಡ ಆಚರಣೆ ಮತ್ತು ನಂಬಿಕೆಗಳು ಪ್ರಸ್ತುತ ಸಂದರ್ಭಕ್ಕೂ ಹೊಂದಿಕೊಳ್ಳಬೇಕೆಂದೇನೂ ಇಲ್ಲ. ಏಕೆಂದರೆ ನಾವೆಲ್ಲಾ ಹೊಸತನವನ್ನು ಹುಡುಕುತ್ತಾ ಸಾಗುತ್ತೇವೆ. ಹೊಸದು ಶೋಧನೆಯಾದಂತೆಲ್ಲಾ ಹಳೆಯದು ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತದೆ. ನಾವು ಹಳೆಯ ಆಚರಣೆಯನ್ನು ಇಂದಿನ ಪರಿಸ್ಥಿತಿಗೆ ಸೂಕ್ತವಾಗುವಂತೆ ಬದಲಾಯಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಂಬಿಕೆ–ಆಚರಣೆಯೊಂದು ಮೌಢ್ಯವೇ ಅಲ್ಲವೆ ಎಂಬುದನ್ನು ಇಂದಿಗೂ ಅದು ಸಮಂಜಸವೇ ಅಲ್ಲವೇ ಎಂಬುದನ್ನು ಪರಿಶೀಲಿಸಲು ವಚನಕಾರರ ವಚನಗಳು ಮುಖ್ಯ ಎಂದು ತೀರ್ಮಾನಿಸಲಾಗಿದೆ.

- ಆಚರಣೆಯೆಂದು ಪೀಳಿಗೆಯಿಂದ ಪೀಳಿಗೆ ಪಾಲಿಸಲ್ಪಡಬೇಕು ಎಂದರೆ ಮಾನವನ ಜೀವನವನ್ನು ಸುಗಮಗೊಳಿಸಿ ನೆಮ್ಮದಿ ಶಾಂತಿಯನ್ನು ಕೊಡುವಂತಿರಬೇಕು. ಆದರೆ ಇಂದು ಪಾಲಿಸುತ್ತಿರುವ ಅನೇಕ ನಂಬಿಕೆ ಮತ್ತು ಆಚರಣೆಗಳು ನೆಮ್ಮದಿಗಿಂತ ಬದುಕಿನಲ್ಲಿ ನೋವು – ಕಿರಿಕಿರಿಗಳನ್ನು ಕೊಡುವಂತಿದ್ದರೆ ಅವುಗಳ ಪಾಲನೆ ಅಗತ್ಯವಿರುತ್ತದೆಯೇ? ಯಾವುದೋ ಒತ್ತಡದ ಹಿನ್ನಲೆಯಲ್ಲಿ ಆಚರಣೆಗೆ ಬಂದ ಆಚಾರವೊಂದು ವ್ಯಕ್ತಿಗೆ ಹಿಂಸೆ ಮತ್ತು ಕ್ರೌರ್ಯಗಳನ್ನು ಹುಟ್ಟಿಸುವಂತಿದ್ದರೆ ಅವುಗಳನ್ನು ಬಿಡದೇ ಪಾಲಿಸುವುದರಲ್ಲಿ ಅರ್ಥವಿದೆಯೇ ? ಎನ್ನುವ ಪ್ರಶ್ನೆಗೆ ವಚನಕಾರರ ವಚನಗಳಲ್ಲಿ ಪಂಚೀಕರಣದ ತತ್ವದ ಮೂಲಕ ವೈಚಾರಿಕತೆಯನ್ನು ಗ್ರಹಿಸಲಾಗಿದೆ.

- ನಮ್ಮಲ್ಲಿ ವಿಧಿಯನ್ನು ಕೈವಶಮಾಡಿಕೊಳ್ಳಲು, ಆಗಾಧಶಕ್ತಿಯನ್ನು ಅವಾಹಿಸಲು ವರ್ಗ ಅಸಮಾನತೆಯನ್ನು ಮುಂದುವರೆಸುವುದಕ್ಕೆ ಪ್ರೋತ್ಸಾಹಿಸುವುದಲ್ಲ. ನರಬಲಿ ಕೊಡಬೇಕೆಂಬ ನಂಬಿಕೆಯಿದೆ. ಅಷ್ಟೆ ಅಲ್ಲ ಈಗಲೂ ಇದಕ್ಕಾಗಿ ಹಸುಗೂಸುಗಳನ್ನು ಬಲಿಕೊಟ್ಟಿರುವುದರ ನಿದರ್ಶನವಿದೆ. ಇಲ್ಲಿ ವ್ಯಕ್ತಿಗತ ಸ್ವಾರ್ಥ–ಲಾಲಸೆ, ಮಹತ್ವಾಕಾಂಕ್ಷಿಗಳು ಮುಖ್ಯವಾಗುತ್ತವೆಯೇ ಹೊರತು **"ಮನುಷತ್ವ"** ಮುಖ್ಯವಾಗುವುದಿಲ್ಲ. ರೋಗವಾಸಿಯಾಗುತ್ತದೆ ಎಂಬ ಭ್ರಮೆಯಿಂದ ಮೇಲ್ವರ್ಗದವರ ಎಂಜಲು ಎಲೆಯ ಮೇಲೆ ಉರುಳಾಡುವ ಸಂಪ್ರದಾಯ ಪಾಲಿಸುತ್ತೇವೆ. ಈ ಎಲ್ಲಾ ಮೌಢ್ಯತೆಗೂ ವಚನಕಾರರ **"ಪಂಚಭೂತಕ"**ಗಳು ನಿಸರ್ಗ ಸ್ನೇಹಿಯಾಗಿ ಪ್ರಗತಿಪರವಾಗಿರುತ್ತದೆ ಎಂದು ಗ್ರಹಿಸಲಾಗಿದೆ.

- ದೈನಂದಿನ ಮೌಢ್ಯಾದಾರಿತ, ನಂಬಿಕೆಗಳ ಉದ್ದೇಶ ಏನೆಂದರೆ, ವಿಶ್ವ ಹಾಗೂ ಭಾರತದ ಆಗಿನ ಮತ್ತು ಈಗಿನ ಮೌಢ್ಯ ಆಚರಣೆಯಾಗಿ ಆಚರಿಸಲ್ಪಡುತ್ತಿವೆ ಎಂಬುದನ್ನು ತಿಳಿದುಕೊಂಡು, ಇವುಗಳ ನಿರ್ಮೂಲನೆಗಾಗಿ ಕೈಗೊಳ್ಳಬೇಕಾದ ಕ್ರಮಗಳಿಗೆ ಹಾಗೂ ಪರಿಹಾರಗಳಿಗೆ **'ಕರಣಪಂಚಕ'** ಗಳು ಕೊಡುಗೆ ನೀಡುತ್ತದೆ ಎಂದು ತೀರ್ಮಾನಿಸಲಾಗುತ್ತದೆ.

- ಮೌಢ್ಯ ಕಂದಾಚಾರಗಳ ಅಗತ್ಯತೆಯಾದ ಆಧುನಿಕ ಸಮಕಾಲೀನ ಜನರಲ್ಲಿ ಉಂಟಾಗಿರುವ ಆತಂಕಗಳನ್ನು ಭಯ, ಭೀತಿ, ಜಿಗುಪ್ಸೆ, ಗೊಂದಲಗಳನ್ನು ಹೋಗಲಾಡಿಸಿ, ಧೈರ್ಯ ಸ್ಥೈರ್ಯ ಮೂಢಿಸಿ, ಕಂದಾಚಾರದ ಮೌಢ್ಯಚಾರಣೆಗಳನ್ನು ಪರಿಪಾಲನೆ ಮಾಡದಂತೆ ಅವುಗಳಿಂದ ಉಂಟಾಗುವ ದುಷ್ಪರಿಣಾಮಗಳಿಂದ ದೂರ ಉಳಿದು ಪ್ರಸ್ತುತ ಪರಿಸ್ಥಿತಿಗಳ ರೀತಿಯಲ್ಲಿ ಸುಖಶಾಂತಿ ನೆಮ್ಮದಿಯಿಂದ ಬದುಕು ಸಾಗಿಸಲು ಜ್ಞಾನೇಂದ್ರಿಯ ಪಂಚಕಗಳು ಮುಖ್ಯವಾಗುತ್ತದೆಂದು ಶೋಧಿಸಲಾಗಿದೆ.

- ಪ್ರಸ್ತುತ ಸಂದರ್ಭದಲ್ಲಿರುವ ಆಕಾಶ, ಭೂಮಿ, ವಾಯು, ಮರಗಿಡ, ಹಾವು, ಹಲ್ಲಿ ಪ್ರಾಣಿಗಳನ್ನು ಪೂಜಿಸುವುದು. ಅಶ್ವತಕಟ್ಟೆ ಅರಳಿ ಮರ ಬೇವಿನ ಮರ ಪೂಜೆ ಮತ್ತು ಪ್ರದಕ್ಷಿಣೆ ಮಾಡುವುದು ಹಬ್ಬಹರಿದಿನ ಜಾತ್ರೆ ಉತ್ಸವಗಳಲ್ಲಿ ಉಪವಾಸ ವ್ರತಾಚರಣೆ ಮಾಡುವುದು ಶಿವರಾತ್ರಿ ಜಾಗರಣೆ ಮಾಡುವುದು ವೈಕುಂಠ ಏಕಾದಶಿ ಆಚರಣೆ ಮಾಡುವುದು ಪೂಜಾಚರಣೆ ಹೀಗೆ ಸಾವಿರಾರು ಮುಢನಂಬಿಕೆಗಳನ್ನು ನಿಜವೆಂದು ದಿನದಿಂದ ದಿನಕ್ಕೆ ಹೆಚ್ಚು ಬಲಿಯಾಗುತ್ತಿರುವ ಪ್ರಸ್ತುತ ಸಂದರ್ಭಕ್ಕೆ **"ಕರ್ಮೇಂದ್ರಿಯ ಪಂಚಕಗಳು"** ಪ್ರಭಾವ ಬೀರುತ್ತದೆ ಎಂದು ತೀರ್ಮಾನಿಸಲಾಗಿದೆ.

- ವೈಜ್ಞಾನಿಕ ಕಾಲದಲ್ಲೂ ಜನತೆ ಮೌಢ್ಯ ಆಚರಣೆ ಮಾಡುತ್ತಿರುವುದು ಒಳಿತು ಕೆಡಕು ಬಗ್ಗೆ ಚಿಂತಿಸದೇ ತಾಮುಂದು ನಾ ಮುಂದು ಎಂದು ಹಣವನ್ನು ವ್ಯರ್ಥ ಮಾಡುತ್ತಿರುವುದು ಮೌಢ್ಯ ಆಚರಣೆಗಳಲ್ಲದೆ ಬದುಕು ಇಲ್ಲವೆಂದು ಭಾವಿಸಿ ಸ್ವೇಚ್ಛಾಚಾರದ ಮೂಢನಂಬಿಕೆಗಳ ಆಚರಣೆಯ ದಾಸರಾಗಬಾರದೆಂದು ವಚನಕಾರರು ಸ್ಪಷ್ಟವಾಗಿ ತಮ್ಮ ವಚನಗಳಲ್ಲಿ ತಿಳಿಸಿದ್ದಾರೆಂದು ಅಧ್ಯಯನಿಸಲಾಗಿದೆ.

ದೈನಂದಿನ ಚಟುವಟಿಕೆಯ ಭಾಗವಾಗಿರುವ ಮೌಢ್ಯ ಆಚರಣೆಗಳು ಇಂದು ನಿನ್ನೆಯದಲ್ಲ ಇದು ತಲ ತಲಾಂತರಗಳಿಂದ ಜನರಿಂದ ಜನರಿಗೆ ವರ್ಗಾಯಿಸಲ್ಪಟ್ಟ ಮೌಢ್ಯ ಆಚರಣೆಗಳನ್ನು ತ್ಯಜಿಸಬೇಕೆಂದು 12ನೇ ಶತಮಾನದಲ್ಲಿ ವಚನಕಾರರು **ಪಂಚೀಕೃತಿ ತತ್ವದ** ಮೂಲಕ ಜಾಗೃತಿಗೊಳಿಸಿದ್ದು, ಇವತ್ತಿನ ನವ ಸಮಾಜಕ್ಕೆ ಕೊಡುಗೆ ನೀಡಿದ್ದಾರೆಂದು ಅಧ್ಯಾಯಿಸಲಾಗಿದೆ. ಒಟ್ಟಿನಲ್ಲಿ **'ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧವನ್ನು'** ಈ ಕೆಳಗಿನ ವಚನದ ಮುಖೇನ ಅಧ್ಯಯನಿಸಲಾಗಿದೆ.

[65]ಶಾಸ್ತ್ರಘನವೆಂಬೆನೆ ? ಕರ್ಮವ ಭಜಿಸುತ್ತಿದೆ.
ವೇದ ಘನವೆಂಬೆನೆ ? ಪ್ರಾಣವಧೆಯ ಹೇಳುತ್ತಿದೆ.
ಶ್ರುತಿ ಘನವೆಂಬೆನೆ ಮುಂದಿಟ್ಟು ಅರಸುತ್ತಿದೆ.
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ
ತ್ರಿವಿಧದಾಸೋಹದಲಲ್ಲದೆ ಕಾಣಬಾರದು ಕೂಡಲಸಂಗಮದೇವನ.[65]

ಬಸವಣ್ಣ ಸಂ.ವ.ಸಂ. 1, ವಚನ ಸಂಖ್ಯೆ 208, ಪುಟ ಸಂಖ್ಯೆ 52

ಪ್ರಸ್ತುತ ಸಂದರ್ಭದಲ್ಲಿ ಮೌಢ್ಯಾಚರಣೆಯು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ, ರಾಜ್ಯ ಮತ್ತು ರಾಷ್ಟ್ರದಲ್ಲಿ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಭಿನ್ನವಾಗಿದ್ದರೂ ಅದು ಎಲ್ಲಾ ಪ್ರದೇಶಗಳನ್ನು ಆವರಿಸಿರುವುದರ ಜೊತೆಗೆ ಇಡೀ ಮನುಕುಲವೇ ತಲೆ ತಗ್ಗಿಸುವಂತೆ ಮಾಡಿದೆ. ಇದರಿಂದ **ಉತ್ತಮ ಸಮಾಜವನ್ನು** ನಿರ್ಮಾಣ ಮಾಡುವುದು ಕಷ್ಟಕರವಾಗಿದೆ. ಆದ್ದರಿಂದ ಇಂತಹ ಆಚರಣೆಗಳನ್ನು ವಚನಕಾರರ ವೈಜ್ಞಾನಿಕ ದೃಷ್ಟಿಕೋನದಿಂದ ಅರಿತು ಸಮಾಜದಲ್ಲಿನ **ಜನರನ್ನು ಮೌಢ್ಯ ಮತ್ತು ಕಂದಾಚಾರಗಳಿಂದ** ಹೊರ ತರುವುದರ ಮೂಲಕ ಇಂತಹ **ಅನಿಷ್ಠ ಪದ್ಧತಿಗಳನ್ನು** ಬೇರು ಸಮೇತ ಕಿತ್ತೊಗೆಯಬೇಕಾಗಿದೆ ಎಂಬುದನ್ನು ಈ ಅಧ್ಯಯನದಲ್ಲಿ ಶೋಧಿಸಲಾಗಿದೆ.

-----------------x-------------------

ಅನುಬಂಧ

ಅನುಬಂಧ – ೧

ಪ್ರಶ್ನಾವಳಿ

1. ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನವೇನು ?
2. ವಚನ ಸಾಹಿತ್ಯದ ಮಹತ್ವಗಳು ಯಾವುವು ?
3. ವಚನಕಾರರು ನಂಬಿದ ನಂಬಿಕೆಗಳು ಯಾವುವು ? ಆ ನಂಬಿಕೆಗಳು ಈಗಲೂ ಪ್ರಸ್ತುತವೇ ?
4. ನಂಬಿಕೆಗಳು ಮೂಢನಂಬಿಕೆ ಅಗಲು ಕಾರಣವೇನು ?
5. ಸಮಾಜದಲ್ಲಿರುವ ಮೂಢನಂಬಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?
6. ವಚನಕಾರರು ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಫಲರಾಗರೇ ?
7. ಮೂಢನಂಬಿಕೆಗಳ ಪ್ರತಿರೋಧಕಕ್ಕೆ ವಚನಕಾರರ ಕೊಡುಗೆ ಏನು ?
8. ವಚನ ಸಾಹಿತ್ಯದಲ್ಲಿ ವಚನಕಾರ್ತಿಯರು ಮೂಢನಂಬಿಕೆಯ ವಿರುದ್ಧವಾಗಿ ಕೂಡ ಹೋರಾಡಿದ್ದಾರೆ. ಅದರ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.
9. ಸರ್ ಇಷ್ಟಾದರೂ ಜಾಗತಿಕ ಸಮಾಜದಲ್ಲಿ ಮೂಢನಂಬಿಕೆಗಳು ಯಾಕೆ ನಂಬಿಕೆಗಳಾಗಿ ಉಳಿದಿದೆ.
10. ವಚನ ಸಾಹಿತ್ಯ ವೈಚಾರಿಕತೆ ನೆಲೆಯನ್ನು ಹೊಂದಿದರೂ ಕೂಡ ಧಾರ್ಮಿಕತೆಯಡೆಗೆ ಸಾಗುತ್ತಿದೆ ನಿಮಗೆ ಸರಿ ಎನಿಸುತ್ತದೆಯೇ? ಸರ್.
11. "ಸಮಾಜವನ್ನು ಬಲಿಷ್ಠ ಮಾಡಿದ್ದರು ವಚನಕಾರರು" ಆದರೆ, ಸರ್ ಇಂದು ಸಮಾಜ ಬಲಿಷ್ಠವಾಗಿದೆ ಅಂತ ಅನಿಸುತ್ತಿದೆಯೇ ?

ಅನಂತ ಅನಂತ ಧನ್ಯವಾದಗಳು ಸರ್

ದಿ॥ ೧೭.೭.೧೯ [illegible]

ಅನುಬಂಧ – ೧

ಪ್ರಶ್ನಾವಳಿ

1. ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನವೇನು ?
2. ವಚನ ಸಾಹಿತ್ಯದ ಮಹತ್ವಗಳು ಯಾವುವು ?
3. ವಚನಕಾರರು ನಂಬಿದ ನಂಬಿಕೆಗಳು ಯಾವುವು ? ಆ ನಂಬಿಕೆಗಳು ಈಗಲೂ ಪ್ರಸ್ತುತವೇ ?
4. ನಂಬಿಕೆಗಳು ಮೂಢನಂಬಿಕೆ ಆಗಲು ಕಾರಣವೇನು ?
5. ಸಮಾಜದಲ್ಲಿರುವ ಮೂಢನಂಬಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?
6. ವಚನಕಾರರು ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಫಲರಾದರೇ ?
7. ಮೂಢನಂಬಿಕೆಗಳ ಪ್ರತಿರೋಧಕಕ್ಕೆ ವಚನಕಾರರ ಕೊಡುಗೆ ಏನು ?
8. ವಚನ ಸಾಹಿತ್ಯದಲ್ಲಿ ವಚನಕಾರ್ತಿಯರು ಮೂಢನಂಬಿಕೆಯ ವಿರುದ್ಧವಾಗಿ ಕೂಡ ಹೋರಾಡಿದ್ದಾರೆ. ಅದರ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.
9. ಸರ್ ಇಷ್ಟಾದರೂ ಜಾಗತಿಕ ಸಮಾಜದಲ್ಲಿ ಮೂಢನಂಬಿಕೆಗಳು ಯಾಕೆ ನಂಬಿಕೆಗಳಾಗಿ ಉಳಿದಿದೆ.?
10. ವಚನ ಸಾಹಿತ್ಯ ವೈಚಾರಿಕತೆ ನೆಲೆಯನ್ನು ಹೊಂದಿದರೂ ಕೂಡ ಧಾರ್ಮಿಕತೆಗೆ ಹೊರಳಿದ್ದು ನಿಮಗೆ ಸರಿ ಎನಿಸುತ್ತದೆಯೇ? ಸರ್.
11. "ಸಮಾಜವನ್ನು ಬಲಿಷ್ಠ ಮಾಡಿದ್ದರು ವಚನಕಾರರು" ಆದರೆ, ಸರ್ ಇಂದು ಸಮಾಜ ಬಲಿಷ್ಠವಾಗಿದೆ ಅಂತ ಅನಿಸುತ್ತಿದೆಯೇ ?

ಅನಂತ ಅನಂತ ಧನ್ಯವಾದಗಳು ಸರ್

Dr. S.L. ಶ್ರೀನಿವಾಸ ಮೂರ್ತಿ
[illegible]
[illegible]
[illegible]
[illegible]

[signature]
ಮುಖ್ಯಸ್ಥರು, ಕನ್ನಡ ವಿಭಾಗ
ವಿಜಯ ವಿಭಜಿತ ಪದವಿಪೂರ್ವ ಕಾಲೇಜು
ಆರ್.ವಿ. ರಸ್ತೆ, ಬಸವನಗುಡಿ,
ಬೆಂಗಳೂರು – 560 004.

ಅನುಬಂಧ -೨

ಸಂದರ್ಶನ – ೧

ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ ಎಂಬ ವಿಷಯವಾಗಿ **ಡಾ.ಪಿ.ವಿ.ನಾರಾಯಣ** ಕನ್ನಡ ಸಾಹಿತ್ಯದ ಹಿರಿಯ ಸಾಹಿತಿ, ವಿದ್ವಾಂಸರು ಇವರನ್ನು ನೇರವಾಗಿ ಸಂದರ್ಶಿಸಿದಾಗ ಪಡೆದ ಪೂರಕ ಅಂಶಗಳು.

ಸಂದರ್ಶನದ ದಿನಾಂಕ : 06–07–2019 **ಸಮಯ ಸಂಜೆ: 4.45 ರಿಂದ 5.45**

ವಾರ : ಭಾನುವಾರ **ಸ್ಥಳ : ಜಯನಗರ, ಬೆಂಗಳೂರು–560041.**

ಸಂಶೋಧಕರು : ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನವೇನು ?

ಪಿ.ವಿ.ನಾರಾಯಣರವರು : ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನಗಳನ್ನು, ಕೀರ್ತನೆಗಳನ್ನು ಸೇರಿಸುವುದಿಲ್ಲ, ಏಕೆಂದರೆ ಸಾಹಿತ್ಯವೆಂದರೆ ತಾವು ರಚನೆ ಮಾಡುತ್ತಿದ್ದೇವೆ ಎಂತ ಭಾವಿಸಿದ ಜನರು ಬರೆದಿರುವುದು ಬಸವಾದಿಗಳು, ಪುರಂದರದಾಸರಾಗಲಿ ತಾವು ಕಾವ್ಯ ರಚಿಸುತ್ತಿದ್ದೇವೆ ಎಂಬುವುದು ಅವರಿಗೆ ಅನಿಸಲಿಲ್ಲ. ಸಿದ್ಧರಾಮ **"ವಚನಾನುಭವ ವಾಕ್ ರಚನೆಯಲ್ಲ ಮನವೇ"** ಎಂಬುದಾಗಿ ಹೇಳಿದ್ದಾನೆ. ವಾಗ್‌ರಚನೆ ಎಂಬುದು ಕರ್ಣಾಟವಯ್ಯ ಅಂದರೆ ಕರ್ಣ ಆಟ ಕಿವಿಗೆ ಇಂಪಾದದ್ದು, ಛಂದೋಬದ್ಧವಾಗಿ ಚೆನ್ನಾಗಿ ಬರೆಯುವುದು. ವಾಗ್ ರಚನೆ, ವಚನಗಳು ವಾಗ್ ರಚನೆಯಲ್ಲ. ಎಂಬುದು ತಿಳಿಸುತ್ತಾ ವಚನವನ್ನು ಸಾಹಿತ್ಯ ಎಂಬುದನ್ನು ವಚನ ಚಳುವಳಿ ಎಂಬ ಅರ್ಥದಲ್ಲಿ ತಿಳಿಸುತ್ತಾ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಸ್ಥಾನದ ಬಗ್ಗೆ ತಿಳಿಸುತ್ತಾರೆ.

ಸಂಶೋಧಕರು : ವಚನ ಸಾಹಿತ್ಯದ ಮಹತ್ವಗಳು ಯಾವುವು ?

ಪಿ.ವಿ.ನಾರಾಯಣ : ಸಾಹಿತ್ಯದಲ್ಲಿ ಕನ್ನಡ ತನ ಎಂಬುದು ಇದೆ ಎಂದರೆ ಅದು ವಚನ ಸಾಹಿತ್ಯದಲ್ಲಿ ಮಾತ್ರ ವಚನ ಸಾಹಿತ್ಯಕ್ಕೆ, ಮಹತ್ವತೆ ಆಕಾಲದಲ್ಲಿ ಬಂದ ವೈದಿಕ ಮತ ನಿಷ್ಠತೆ ಅದರಿಂದ ಉಂಟಾದ ಜಾತಿ, ರಾಜ ಪ್ರಭುತ್ವದ ಪ್ರಾಬಲ್ಯ ಇವುಗಳಿಂದ ತಪ್ಪಿಸಲು ಇದ್ದ ಮಾರ್ಗ ವೈದಿಕ ಧರ್ಮವನ್ನು ತಿರಸ್ಕರಿಸುವುದು. ಬಸವಾದಿಗಳು ಇವುಗಳನ್ನು ವಿರೋದಿಸುತ್ತಾ **"ನೆಲನಾಳ್ವನ ಹೆಣನೆಂದೆಡೆ ಒಂದಡಿಕೆಗೆ ಕೊಂಬುವರಿಲ್ಲ"** ರಾಜ ಮನುಷ್ಯನೇ ಅವನಿಗೆ ವಿಶೇಷತೆ ಕೊಡುವುದನ್ನು ವಿರೋದಿಸುತ್ತಾ ಆ ಕಾಲದಲ್ಲಿದ್ದ ಗಂಡು ಹೆಣ್ಣುಗಳ ತಾರತಮ್ಯ ರಾಜ ಪ್ರಭುತ್ವದ ದೈವಿಕರಣವನ್ನು ವಿರೋಧಿಸುತ್ತಾ ಜಾತಿಪದ್ಧತಿಯನ್ನು ವಿರೋಧಿಸುವ ಹಿನ್ನಲೆಯಲ್ಲಿ ವಚನ ಸಾಹಿತ್ಯ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಸುಮಾರು 230 ಜನ ವಚನಕಾರರಲ್ಲಿ 30 ಜನ ವಚನಕಾರ್ತಿಯವರು ಇದುದ್ದು

ತಮ್ಮ ವಚನಗಳನ್ನು ರಚಿಸಿದ್ದು ಸಾಂಸ್ಕೃತಿಕ ದೃಷ್ಟಿಯಿಂದ, ಸಾಹಿತ್ಯದ ದೃಷ್ಟಿಯಿಂದಲೂ ಮೀರಿ ಹೆಚ್ಚು ಮಹತ್ವ ಪೂರ್ಣವಾದುದ್ದು ಎಂಬುದಾಗಿ ತಿಳಿಸಿದ್ದಾರೆ.

ಸಂಶೋಧಕರು : ವಚನಕಾರರು ನಂಬಿದ ನಂಬಿಕೆಗಳು ಯಾವುವು? ಆ ನಂಬಿಕೆಗಳು ಈಗಲೂ ಪ್ರಸ್ತುತವೇ?

ಡಾ.ಪಿ.ವಿ.ನಾರಾಯಣ : ಹೌದು, ನಂಬಿಕೆಗಳು ಈಗಲೂ ಪ್ರಸ್ತುತವಾಗಿದೆ. ನಂಬಿಕೆ ಮತ್ತು ಮೂಢನಂಬಿಕೆಗಳ ನಡುವೆ ಇರುವ ಗೆರೆಯು ತುಂಬಾ ತೆಳುವಾದುದ್ದು. ವೈಚಾರಿಕರು ಹೇಳುವ ಪ್ರಕಾರ ನಂಬಿಕೆಗಳು ತರ್ಕಬದ್ಧವಾದುದ್ದು. ವೈಚಾರಿಕತೆಯಿಂದ ಕೂಡಿರಬೇಕು. ವೈಚಾರಿಕತೆ ಯಿಂದ ಕೂಡಿದ ನಂಬಿಕೆಗಳು ಎಲ್ಲಾ ಕಾಲದಲ್ಲೂ ಇರಬೇಕು. ದೇವರು, ಹುಟ್ಟು, ಸಾವು, ಪ್ರೀತಿ ಇವುಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವೇ ವೈಚಾರಿಕತೆ. ಬಸವಣ್ಣ **'ಕೂಡಲಸಂಗಮದೇವನೆಂಬ ದಣಿವೊಂದಿದ್ದರೆ ಸಾಲದೆ"** ಎಂಬುವುದರ ಮೂಲಕ ಏಕದೇವೋಪಾಸನೆಯ ಬಗ್ಗೆ ಪ್ರತಿಪಾದಿಸುತ್ತಾರೆ. ವಚನಕಾರರು ನಂಬಿದ ನಂಬಿಕೆಗಳೆಂದರೆ ದೇವರು, ಆರಾಧನೆ, ಚಿಂತನೆ. **"ಚಿಂತನೆ"**ಯಲ್ಲಿ ನಂಬಿಕೆಯನ್ನು ಇಟ್ಟು ಇವುಗಳ ಆಧಾರದ ಮೇಲೆ ಸಮಾಜವನ್ನು ತಿದ್ದುವ ಪ್ರಯತ್ನವನ್ನು ಮಾಡಲಾಯಿತು.

ಸಂಶೋಧಕರು : ನಂಬಿಕೆಗಳು ಮೂಢನಂಬಿಕೆಯಾಗಲು ಕಾರಣವೇನು?

ಡಾ.ಪಿ.ವಿ.ನಾರಾಯಣ : ನನ್ನ ಪ್ರಕಾರ ವೈಚಾರಿಕತೆ ಇಲ್ಲದ ನಂಬಿಕೆಗಳೇ ಮೂಢನಂಬಿಕೆ, ವಿವೇಚನಾರಾಹಿತ್ಯವೇ ಮೂಢನಂಬಿಕೆ, ಕುರುಡ ನಂಬಿಕೆ, ವಿವೇಕಜ್ಞಾನವಿಲ್ಲದೇ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ನಂಬುವುದೇ ಮೂಢನಂಬಿಕೆ.

ಸಂಶೋಧಕರು : ಸಮಾಜದಲ್ಲಿರುವ ಮೂಢನಂಬಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಡಾ.ಪಿ.ವಿ.ನಾರಾಯಣ : ಮೂಢನಂಬಿಕೆಗಳನ್ನು ಬಿತ್ತುವಲ್ಲಿ ಧಾರ್ಮಿಕ ಸಂಸ್ಥೆಗಳು ಮುಖ್ಯವಾದ ಸ್ಥಾನ ಪಡೆದಿದೆ. **ಧರ್ಮ, ದೇವರು, ಮಠ, ಅರ್ಚನೆ,** ಈ ಆಚರಣೆಗಳನ್ನು ಜನರ ಮೇಲೆ ಭಯದ ಮೂಲಕ ಹೇರುವುದರಿಂದ ಸಮಾಜದಲ್ಲಿ ಮೂಢನಂಬಿಕೆಗಳನ್ನು ಬಿತ್ತುವ ಕಾರ್ಯ ಮಾಡಲಾಗಿದೆ. ಇವುಗಳು ಎಲ್ಲಿಯವರೆಗೂ ಇರುತ್ತದೆಯೋ ಅಲ್ಲಿಯವರೆವಿಗೂ ಮೂಢನಂಬಿಕೆ ಗಳು ಅಸ್ಥಿತ್ವದಲ್ಲಿರುತ್ತದೆ. ವಿಜ್ಞಾನ, ವೈಚಾರಿಕತೆಗಳು ಬೆಳೆಯುತ್ತಾ ಯುವಜನರು ನಂಬುವುದಕ್ಕಿಂತ ಹೆಚ್ಚಾಗಿ ವಿವೇಚನೆ ಮಾಡಿದಾಗ ಮಾತ್ರ ಮೂಢನಂಬಿಕೆ ಕಡಿಮೆಯಾಗಲೂ ಸಾಧ್ಯ.

ಸಂಶೋಧಕರು : ವಚನಕಾರರು ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಫಲರಾದರೆ ?

ಡಾ.ಪಿ.ವಿ.ನಾರಾಯಣ : ವಚನಕಾರರು ಇದ್ದಷ್ಟು ದಿನ ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಫಲರಾದರು. ಮುಂದುವರೆದ ಪ್ರಯತ್ನವನ್ನು ಅವರ ಅನುಯಾಯಿಗಳು ಮುಂದುವರೆಸಿದರು.

ಉದಾ: ಗಂಡು ಹೆಣ್ಣಿನ ಬಗ್ಗೆ ಇದ್ದ ತಾರತಮ್ಯವನ್ನು ತಿರಸ್ಕರಿಸುವವರಲ್ಲಿ ವಚನಕಾರ್ತಿಯರು ಸಹ ಇದ್ದಾರೆ ಅವರಲ್ಲಿ ಅಕ್ಕಮಹಾದೇವಿ, ಮೋಳಿಗೆ ಮಹಾದೇವಿ, ಮುಂತಾದವರು.

ಸಂಶೋಧಕರು : ಮೂಢನಂಬಿಕೆಗಳ ಪ್ರತಿರೋಧಕ್ಕೆ ವಚನಕಾರರ ಕೊಡುಗೆ ಏನು?

ಡಾ.ಪಿ.ವಿ.ನಾರಾಯಣ : ವಚನಕಾರರು ಮೂಢನಂಬಿಕೆಗಳನ್ನು ಕಡಾಖಂಡಿತವಾಗಿ ವಿರೋಧಿಸಲು ಹಲವು ವಚನಗಳನ್ನು ನೀಡಿದ್ದಾರೆ. ಉದಾ– **ವೈದಿಕಪದ್ಧತಿ, ರಾಜಪ್ರಭುತ್ವವನ್ನು** ತಿರಸ್ಕರಿಸುವುದು. **ರಾಜನೂ ಸಹ ಸಾಮಾನ್ಯ ಮನುಷ್ಯನೇ, ಅವನು ದೈವದತ್ತನಲ್ಲ.** ರಾಜನಿಗೂ ಹುಟ್ಟು ಸಾವು, ನೋವು ಎಲ್ಲವೂ ಇದ್ದಾಗ ಅವನು ವಿಶೇಷನಲ್ಲ ಎಂಬುವುದರ ಮೂಲಕ ರಾಜತ್ವವನ್ನು ವಿವೇಚನಾಯುಕ್ತವಾಗಿ ಪ್ರಶ್ನಿಸುವ ಧೈರ್ಯ **ಬಸವಣ್ಣ** ಬಂದದರ ಮೂಲಕ ಉಂಟಾದ **ಆತ್ಮವಿಶ್ವಾಸವೇ** ಮೂಢನಂಬಿಕೆಗಳನ್ನು ತಿರಸ್ಕಾರ ಮಾಡಲು ಸಾಧ್ಯವಾಯಿತು.

ಸಂಶೋಧಕರು : ವಚನಸಾಹಿತ್ಯದಲ್ಲಿ ವಚನಕಾರ್ತಿಯವರು ಮೂಢನಂಬಿಕೆಯ ವಿರುದ್ಧವಾಗಿ ಕೂಡ ಹೋರಾಡಿದ್ದಾರೆ. ಅದರ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿ.

ಡಾ.ಪಿ.ವಿ.ನಾರಾಯಣ : ವಚನಕಾರ್ತಿಯರಲ್ಲಿ ಕೆಲವರು ಮೂಢನಂಬಿಕೆಗಳನ್ನು ವಿರೋಧಿಸುವ ಪ್ರಯತ್ನ ಮಾಡುತ್ತಾರೆ. ಉದಾ: **ದಲಿತವರ್ಗಕ್ಕೆ ಉರಿಲಿಂಗ ಪೆದ್ದಿಯ ಹೆಂಡತಿ ಕಾಳವ್ವೆ** ಮೇಲು–ಕೀಳು ಎನ್ನುವ ಮೂಢನಂಬಿಕೆಯನ್ನು ವಿರೋಧಿಸುತ್ತಾಳೆ. **ಕುರಿ ಕೋಳಿ ಮಾಂಸ ತಿನ್ನುವವರು ಊರ ಒಳಗೆ, ದನ ತಿನ್ನುವವರು ಯಾಕೆ ಊರ ಹೊರಗೆ ಇರಬೇಕು** ಎಂಬುವುದನ್ನು ವಿರೋದಿಸುತ್ತಾಳೆ. ಈ ಧೈರ್ಯ ದಲಿತ ವಚನಕಾರ್ತಿಯಲ್ಲಿ ಮೂಡಿದ್ದು ಆಶ್ಚರ್ಯಕರ.

ಸಂಶೋಧಕರು : ಸರ್, ಇಷ್ಟಾದರೂ ಜಾಗತಿಕ ಸಮಾಜದಲ್ಲಿ ಮೂಢನಂಬಿಕೆಗಳು ಯಾಕೆ ನಂಬಿಕೆಗಳಾಗಿ ಉಳಿದಿದೆ ?

ಡಾ.ಪಿ.ವಿ.ನಾರಾಯಣ : ಮೂಢನಂಬಿಕೆ ಏಕೆ ಇದೆ ಎಂದರೆ ಎಲ್ಲಿಯವರೆಗೂ ಜಗತ್ತು ನಿಗೂಢವಾಗಿರುತ್ತದೋ, ಹುಟ್ಟು, ಸಾವು ಇಂತಹ ಇಂದ್ರೀಯಗ್ರಾಹ್ಯವಲ್ಲದ ವಸ್ತುಗಳು ನಮ್ಮನ್ನು ಕಾಡುತ್ತವೋ ಅಲ್ಲಿಯವರೆಗೂ ನಂಬಿಕೆಗಳು ಇರುತ್ತವೆ. ವಿಜ್ಞಾನ, ತಂತ್ರಜ್ಞಾನ ಕೇವಲ ಕಣ್ಣಿಗೆ ಕಾಣುವ ಬಾಹ್ಯ ಜಗತ್ತಿನ ರಹಸ್ಯವನ್ನು ಬಯಲು ಮಾಡುತ್ತದಯೋ ಹೊರತು ಆಂತರಿಕ ಅನುಭವಗಳನ್ನು ಅನ್ವೇಷಿಸುವುದಿಲ್ಲ ಹಾಗಾಗಿ ಸಮಾಜದಲ್ಲಿ ಮೂಢನಂಬಿಕೆಗಳು ಎಲ್ಲಿಯವರೆಗೂ ಇರುತ್ತೋ ಅಲ್ಲಿಯವರೆಗೆ ನಂಬಿಕೆ ಇದ್ದೇ ಇರುತ್ತದೆ.

ಸಂಶೋಧಕರು : ವಚನ ಸಾಹಿತ್ಯ ವೈಚಾರಿಕನೆಲೆಯನ್ನು ಹೊಂದಿದರೂ ಕೂಡ ಧಾರ್ಮಿಕತೆಗೆ ಹೊರಳಿದ್ದು ನಿಮಗೆ ಸರಿ ಏನಿಸುತ್ತಿದೆಯೇ ? ಸರ್.

ಡಾ.ಪಿ.ವಿ.ನಾರಾಯಣ : ಧರ್ಮ ಎಂದರೆ ವಿಶಿಷ್ಟವಾದುದು. ನನ್ನ ದೃಷ್ಟಿಯಲ್ಲಿ ಧರ್ಮವು ಮೂರು ನೆಲೆಗಟ್ಟನ್ನು ಹೊಂದಿದೆ. **1) ಆಚರಣೆ ನೆಲೆ 2) ತತ್ವಜ್ಞಾನದ ನೆಲೆ 3) ಅನುಭಾವದ ನೆಲೆ**. ಧರ್ಮವನ್ನು 99% ಭಾಗ ಆಚರಣೆ ನೆಲೆಯಲ್ಲಿ ಜನ ಅನುಸರಿಸುತ್ತಾರೆ. ಹುಟ್ಟು, ಸಾವು, ಮದುವೆ ಇತ್ಯಾದಿಗಳು. ಜಾತಿ ಧರ್ಮಗಳನ್ನು ಗುರುತಿಸುವುದೇ ಆಚರಣೆಯ ಮೂಲಕ. ತತ್ವಜ್ಞಾನದಲ್ಲಿ ನಂಬಿಕೆಯನ್ನು ಆತ್ಮ-ಪರಮಾತ್ಮಗಳ ಮೂಲಕ ಆಲೋಚನೆ ಮಾಡುವ ಪ್ರಯತ್ನ ಮಾಡಲಾಯಿತು. **ದೇಹ ಪಂಚಭೂತಗಳಿಂದ ಅವೃತವಾಗಿರುತ್ತದೆ ಎಂಬುವುದನ್ನು ವಚನಕಾರರು ತಿಳಿಸುತ್ತಾರೆ**. ಅನುಭಾವವು ಮನಸ್ಸಿನ ಒಳಗಿನಿಂದ ನಡೆಯುವ ಕಾರ್ಯ. ಕಬೀರ, ಅಂಡಾಳ್, ಅಕ್ಕಮಹಾದೇವಿ ಈ ಅನುಭವಿಗಳು ದೇವರ ಅಸ್ಥಿತ್ವವನ್ನು ತನ್ನಲ್ಲೇ ಕಾಣುವ ಪ್ರಯತ್ನ ಮಾಡುತ್ತಾರೆ. ಅಲ್ಲದೇ ಯಾವುದೇ ಆಚರಣೆಗಳನ್ನು ಜಾರಿಗೆ ತರದೇ ತನ್ನಲ್ಲೇ ಹಾಗೂ ಜಗತ್ತಿನಲ್ಲಿ ದೇವರ ಅಸ್ಥಿತ್ವವನ್ನು ಕಾಣುವ ಪ್ರಯತ್ನವನ್ನು ಮಾಡುತ್ತಾರೆ. ಇವೆಲ್ಲವೂ ಆಚರಣೆಗೆ ಬಂದಾಗ ಮಾತ್ರ ತಾರತಮ್ಯ ಉಂಟಾಗಿ ನಂಬಿಕೆಗಳು ಮೂಢನಂಬಿಕೆಗಳಾಗಿ ಮಾರ್ಪಡುತ್ತದೆ.

ಸಂಶೋಧಕರು : "ಸಮಾಜವನ್ನು ಬಲಿಷ್ಠಮಾಡಿದ್ದರು ವಚನಕಾರರು" ಆದರೆ, ಸರ್ ಇಂದು ಸಮಾಜ ಬಲಿಷ್ಟವಾಗಿದೆ ಅಂತ ಅನಿಸುತ್ತಿದೆಯೇ ?

ಡಾ.ಪಿ.ವಿ.ನಾರಾಯಣ : ವಿಜ್ಞಾನ, ತಂತ್ರಜ್ಞಾನ ಪ್ರಭಾವದಿಂದ ಹಳೆಯ ಮೂಢನಂಬಿಕೆಗಳು ಇಂದು ದೂರವಾಗುತ್ತಿದೆ. ನಗರ, ಹಳ್ಳಿಗಳಲ್ಲೂ, ಇಂದು ಮೂಢನಂಬಿಕೆಗಳು ಸ್ವಲ್ಪ ಕಡಿಮೆಯಾಗಿದೆ. **ಉದಾ: ಜಾತಿ ಪದ್ಧತಿ. "ತಮಂಧದ ಜ್ಯೋತಿ ಕಿರಿದೆನ್ನಬಹುದೇ, ಕರಿಘನ ಅಂಕುಶ ಕಿರಿದೆನ್ನಬಹುದೇ ಬಾರದಯ್ಯ"** ಅಂದರೆ ಸಣ್ಣ ಹಣತೆ ದಟ್ಟವಾದ ಕತ್ತಲೆಯನ್ನು ತಕ್ಕ ಮಟ್ಟಿಗೆ ಹೋಗಲಾಡಿಸುತ್ತದೆ ಹೊರತು ಇಡೀ ಜಗತ್ತಿನ ಕತ್ತಲೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಹಾಗೆಯೇ ಮೂಢನಂಬಿಕೆಯು ಸಮಾಜದ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಹೊಂದಬೇಕು. ಇದಕ್ಕೆ ಹೋರಾಟ ಅಗತ್ಯ. **ಬೆಳಕು ಮತ್ತು ಕತ್ತಲೆಯ** ಹೋರಾಟ ಯಾವಾಗಲು ಸಂಘರ್ಷದಿಂದ ಕೂಡಿರುತ್ತದೆ.

ಒಟ್ಟಾರೆಯಾಗಿ ಸಮಾಜದಲ್ಲಿ ಮೂಢನಂಬಿಕೆಗಳನ್ನು ಹೋಗಲಾಡಿಸಬೇಕಾದರೆ ಸತತವಾದ ಹೋರಾಟ, ವೈಜ್ಞಾನಿಕ ಚಿಂತನೆ, ವೈಚಾರಿಕ ಮನೋಭಾವ ಇವುಗಳ ನಡುವೆ ನಿರಂತರತೆ ಇದ್ದಾಗ ಮಾತ್ರ ಸಾಮಾಜಿಕ ಯಶಸ್ಸನ್ನು ಕಾಣಲು ಸಾಧ್ಯ.

ಅನಂತ ಅನಂತ ಧನ್ಯವಾದಗಳು ಸರ್.

ಅನುಬಂಧ -೨

ಸಂದರ್ಶನ ಮಾಡಿದ ಪ್ರಶ್ನಾವಳಿಗೆ ಉತ್ತರ ನೀಡಿರುವ ಪ್ರತಿ

1. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯದ ಸ್ಥಾನ ವಿಶಿಷ್ಟವಾದದ್ದು, ಅದ್ವಿತೀಯವಾದದ್ದು. [illegible] ಭಾಷೆಯ [illegible] [illegible] ಕಾವ್ಯ ಪ್ರಕಾರವದು.

2. ಜಾತಿ ಮತಗಳ [illegible]. [illegible] 'ಎಲ್ಲಾ ಒಂದೇ' [illegible] ವಚನ ಸಾಹಿತ್ಯದ ಮಹತ್ವ. ಗಂಡು-ಹೆಣ್ಣು, ಮೇಲು-ಕೀಳು, ಬಡವ-ಬಲ್ಲಿದ, ಅಕ್ಷರಸ್ಥ-ಅನಕ್ಷರಸ್ಥ, ಇತ್ಯಾದಿ [illegible] ಭೇದ ಭಾವನೆ ಇಲ್ಲದೆ '[illegible]' [illegible] ಜನಸಾಮಾನ್ಯರ [illegible] ಮಾಡಿದ್ದು [illegible].

3. [illegible] ಮನುಷ್ಯನನ್ನು [illegible], [illegible] [illegible] [illegible] [illegible] [illegible]. [illegible] [illegible].

4. [illegible] [illegible] [illegible] [illegible].

5. [illegible] ಎಲ್ಲ [illegible], [illegible] [illegible] [illegible]. [illegible], [illegible].

6. ಭಾಗಶಃ [illegible]. [illegible] [illegible] [illegible].

7. "[illegible]" ಎಂಬ [illegible] [illegible] [illegible] ವಚನ [illegible] [illegible].

8. [illegible] [illegible] [illegible] ಗಂಡು-ಹೆಣ್ಣು ಎಂಬ ಭೇದವಿಲ್ಲದೆ [illegible] [illegible].

9. [illegible] [illegible] [illegible] [illegible] ಬರಲಾರಂಭಿಸಿತು ಬಂದಿದೆ.

10. [illegible] [illegible] [illegible] [illegible]. [illegible] [illegible] [illegible].

11. ಭಾರತೀಯ [illegible] [illegible] [illegible] [illegible]. [illegible] [illegible] [illegible] [illegible]. [illegible] [illegible] [illegible] [illegible]. [illegible] [illegible] [illegible] [illegible] [illegible] [illegible] [illegible] ಬಂದಿದೆ!

— [illegible]

ಅನುಬಂಧ –೩

ವಚನಗಳಲ್ಲಿ ಮೂಢನಂಬಿಕೆಗಳ ಪ್ರತಿರೋಧ ಎಂಬ ವಿಷಯವಾಗಿ ಡಾ.ಪಿ.ವಿ.ನಾರಾಯಣ ಕನ್ನಡ ಸಾಹಿತ್ಯದ ಹಿರಿಯ ಸಾಹಿತಿ, ವಿದ್ವಾಂಸರು ಇವರನ್ನು ನೇರವಾಗಿ ಸಂದರ್ಶನ ಮಾಡುತ್ತಿರುವ ದೃಶ್ಯ.





ಅನುಬಂಧ -೩

ಸಂದರ್ಶನ ಮಾಡಿದ ಭಾವಚಿತ್ರಗಳು

ವಿಜಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ರವರನ್ನು ಸಂದರ್ಶನ ಮಾಡುತ್ತಿರುವ ದೃಶ್ಯ





ಮೂಲ ಆಕರಗಳು

ಅ. **ಬಸವಣ್ಣನವರ ವಚನ ಸಂಪುಟ – ೧**
ಸಂಪಾದಕರು : **ಡಾ. ಎಂ.ಎಂ. ಕಲಬುರ್ಗಿ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೧,

ಆ. **ಸಂಕೀರ್ಣ ವಚನ ಸಂಪುಟ – ೮**
ಸಂಪಾದಕರು : **ಡಾ. ಬಿ.ಆರ್.ಹಿರೇಮಠ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧,

ಇ. **ಸಂಕೀರ್ಣ ವಚನ ಸಂಪುಟ – ೯**
ಸಂಪಾದಕರು : **ಡಾ. ಬಿ.ಆರ್.ಹಿರೇಮಠ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧,

ಈ. **ಸಂಕೀರ್ಣ ವಚನ ಸಂಪುಟ – ೧೨**
ಸಂಪಾದಕರು : **ಡಾ. ವೀರಣ್ಣ ರಾಜೂರ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧,

ಉ. **ವಚನ ಪರಿಭಾಷಾಕೋಶ ಸಮಗ್ರ ವಚನ ಸಂಪುಟ –೧೫**
ಸಂಪಾದಕರು : **ಡಾ. ಎನ್.ಜಿ. ಮಹಾದೇವಪ್ಪ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೧,

ಊ. **ವೀರಶೈವ ಪಾರಿಭಾಷಿಕ ಪದಕೊಶ**
ಪ್ರಧಾನ ಸಂಪಾದಕರು : **ಡಾ.ಎಸ್. ವಿದ್ಯಾಶಂಕರ**
ವ್ಯವಸ್ಥಾಪಕ ಸಂಪಾದಕರು : **ಪ್ರೊ. ಬಿ. ವಿರೂಪಾಕ್ಷಪ್ಪ.**
ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು–1, ೨೦೦೦,

ಪರಾಮರ್ಶನ ಗ್ರಂಥಗಳು

ಕ್ರಮ ಸಂಖ್ಯೆ	ಲೇಖಕರ ಹೆಸರು	ಕೃತಿ	ಪ್ರಕಟಣೆ	ವರ್ಷ
1.	ಎಂ. ಅಬ್ದುಲ್ ರೆಹಮಾನ್ ಪಾಷ	ನಂಬಿಕೆ, ಮೂಢನಂಬಿಕೆ ವೈಜ್ಞಾನಿಕ ಮನೋವೃತ್ತಿ	ನವಕರ್ನಾಟಕ ಪಬ್ಲಿಕೇಷನ್	2018
2.	ಅರವಿಂದ ಮಾಲಗತ್ತಿ	ಮೌಢ್ಯ ನಿಷೇಧದ ಗುದ್ದಾಟಗಳು	ವಿಸ್ಮಯ ಪ್ರಕಾಶನ	2016
3.	ಪಂಜುಗಂಗೊಳ್ಳಿ	ಮೂಢನಂಬಿಕೆಗಳ ವಿಶ್ವರೂಪ	ಸಾಧನ ಪಬ್ಲಿಕೇಷನ್	2013
4.	ಡಾ. ಹೆಚ್. ಚಂದ್ರಶೇಖರ್	ವಚನ ತವನಿಧಿ	ಐಬಿಹೆಚ್ ಪ್ರಕಾಶನ	2016
5.	ಜಿ. ರಂಗನಗೌಡ ನಿಲೋಗಲ್	ಮೂಢನಂಬಿಕೆಗಳು	ಕನ್ನಡ ಸಾಹಿತ್ಯ ಪರಿಷತ್ತು	2016
6.	ಕೆ.ಎಂ. ರೇವಣ್ಣ	ವಚನಗಳಲ್ಲಿ ಲಿಂಗಾಯತ ಸಂಸ್ಕೃತಿ, ಸಂಸ್ಕಾರ ಆಚರಣೆಗಳು	ಕನ್ನಡ ಸಾಹಿತ್ಯ ಪರಿಷತ್ತು	2016
7.	ಯು.ಎನ್. ಸಂಗನಾಳ ಮಠ	ಶರಣರ ಸೊಲ್ನುಡಿ	ಕನ್ನಡ ಸಾಹಿತ್ಯ ಪರಿಷತ್ತು	2016
8.	ಪ್ರೊ. ಎಸ್.ಉಮಾಪತಿ	ಶರಣ ಸಂಪದ	ಕನ್ನಡ ಸಾಹಿತ್ಯ ಪರಿಷತ್ತು	2006
9.	ಎಂ.ಆರ್. ಶ್ರೀನಿವಾಸಮೂರ್ತಿ	ವಚನ ಧರ್ಮಸಾರ	ಕನ್ನಡ ಸಾಹಿತ್ಯ ಪರಿಷತ್ತು	2017

ಮಹಾಪ್ರಬಂಧ (ಪ್ರಕಟಿತ)

1. **ಡಾ. ಪಿ.ವಿ.ನಾರಾಯಣ – ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ,**
   ಮಾರ್ಗದರ್ಶಕರು – ಡಾ.ಎಂ. ಚಿದಾನಂದಮೂರ್ತಿ
   ನಿವೃತ್ತ ಪ್ರಾಧ್ಯಾಪಕರು,
   ಬೆಂಗಳೂರು ವಿಶ್ವವಿದ್ಯಾಲಯ – ೧೯೭೫.

ಮಹಾಪ್ರಬಂಧ (ಅಪ್ರಕಟಿತ)

2. **ಡಾ. ಶೀಲಾದೇವಿ ಎಸ್.ಮಳೀಮಠ – ವಚನ ಮತ್ತು ಸಮೂಹ ಮಾಧ್ಯಮ : ಒಂದು ಅಧ್ಯಯನ.**
   ಮಾರ್ಗದರ್ಶಕರು – ದಿವಂಗತ ಡಾ.ಎಸ್. ಶಿವಾನಂದ ವಿರಕ್ತಮಠ
   ಡೀನ್ ಮತ್ತು ಕನ್ನಡ ಛೇರ್ – ಬನಾರಸಿ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ.ಉತ್ತರ ಭಾರತ – ೨೦೦೧.

ನಿಬಂಧ ವಿಷಯಕ್ಕೆ ಸಂಬಂಧಿಸಿದ ಲೇಖನ :

ಮೌಢ್ಯಾಚರಣೆ ಮತ್ತು ನಿಷೇಧದ ಪ್ರಸ್ತುತತೆ – ವಿಚಾರ ಸಂಕಿರಣದ ಪುಸ್ತಕ

1)	ಲೇಖಕರು	–	**ಡಾ. ಶೀಲಾದೇವಿ ಎಸ್. ಮಳೀಮಠ**
	ಪ್ರಬಂಧ	–	**ಮೌಢ್ಯಾಚರಣೆ ಮತ್ತು ಸರ್ವಚೇತನವಾದ**
	ಪ್ರಕಟ	–	ಆರ್.ಸಿ.ಕಾಲೇಜು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
	ವರ್ಷ	–	2019
	ಪುಟ ಸಂಖ್ಯೆ	–	80–84
	ISBN NO	-	**978- 163535037-1**

2)	ಲೇಖಕರು	–	**ಶಿವರುದ್ರಯ್ಯ ಜಿ.ವಿ.**
	ಪ್ರಬಂಧ	–	**ನಂಬಿಕೆಗಳ ರಚನೆ ಮತ್ತು ವರ್ಗೀಕರಣದ ಅವಶ್ಯಕತೆ.**
	ಪ್ರಕಟ	–	ಆರ್.ಸಿ.ಕಾಲೇಜು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
	ವರ್ಷ	–	2019
	ಪುಟ ಸಂಖ್ಯೆ	–	52–53
	ISBN NO	-	**978- 163535037-1**

------------- x --------------------